3. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ ಚರ್ಚೆ

ವಿಷಯ: ರಾಜ್ಯದಲ್ಲಿ ವಾಣಿಜ್ಯ ಬೆಳೆಗಳೂ ಸೇರಿದಂತೆ ಎಲ್ಲಾ ವ್ಯವಸಾಯೋತ್ಪನ್ನ ಬೆಳೆಗಳ ಬೆಲೆ ಕುಸಿದಿದ್ದು, ಹತಾಶರಾದ ರೈತರು ಆತ್ಮಹತ್ಯೆ ಹಾದಿ ಹಿಡಿದಿರುವ ಬಗ್ಗೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಇವತ್ತು ಈ ರಾಜ್ಯದಲ್ಲಿ ರೈತರು ಬೆಳೆದಿರುವಂತಹ ಬೆಳೆಗಳ ಬೆಲೆಗಳು ಕುಸಿದಿರುವುದನ್ನು ನೋಡುತ್ತಿದ್ದೇವೆ. ನಾವು ಹಿಂದಿನ ಅಧಿವೇಶನದಲ್ಲೂ ರೈತರ ಸಮಸ್ಯೆಗಳ ಬಗ್ಗೆ ಇವರು ಬೆಳೆದಂತಹ ಬೆಳೆಗಳ ಬಗ್ಗೆ ಸಾಕಷ್ಟು ಚರ್ಚೆ ಮಾಡಿದ್ದೆವು. ಇದರ ಬಗ್ಗೆ ನಮ್ಮ ಶಾಸಕ ಮಿತ್ರರು ಕೂಡ ಈ ಚರ್ಚೆಯಲ್ಲಿ ಭಾಗವಹಿಸಿದ್ದರು. ಆ ಸಂದರ್ಭದಲ್ಲಿ ರೈತರು ಬೆಳೆದಂತಹ ಉತ್ಪನ್ನಗಳಿಗೆ ಬೆಲೆ ಇಲ್ಲದೇ ಬೆಂಬಲ ಬೆಲೆಯಲ್ಲಿ ಖರೀದಿ ಮಾಡಬೇಕೆಂದು ಸಾಕಷ್ಟು ಒತ್ತಾಯವನ್ನು ರಾಜ್ಯ ಸರ್ಕಾರಕ್ಕೆ ಮಾಡಿದ್ದೆವು. ಇವತ್ತು ಸಹ ಅದೇ ಪರಿಸ್ಥಿತಿಯಾಗಿದೆ, ನಾವು ಮೂರು ತಿಂಗಳುಗಳ ಹಿಂದೆ ಅಂದರೆ ನವೆಂಬರ್ ತಿಂಗಳಲ್ಲಿ ಅಧಿವೇಶನ ಸೇರಿದ್ದು, ಆಗ ಸಭೆಯಲ್ಲಿ ಚರ್ಚೆಯಾಗಿತ್ತು. ಈಗ ಮತ್ತೆ ಅದೇ ಸಮಸ್ಯೆ ರೈತನನ್ನು ಕಾಡುತ್ತಿದೆ. ಹಿಂದಿನ ದಿನ ಅಧಿವೇಶನದಲ್ಲಿ ಮತ್ತು ಇವತ್ತಿನ ಅಧಿವೇಶನದಲ್ಲಿ ಒಂದೇ ಒಂದು ವ್ಯತ್ಯಾಸವೇನೆಂದರೆ ರೈತರ ಸಮಸ್ಯೆಗಳ ಬಗ್ಗೆ ಸಾಕಷ್ಟು ಚರ್ಚೆ ಮಾಡಿದರೂ ಆ ಸಮಸ್ಯೆಗಳಿಗೆ ಪರಿಹಾರ ಸಿಗಲಲ್ಲ. ಅವರ ಉತ್ಪನ್ನಗಳು ಖರೀದಿಯಾಗಲಿಲ್ಲ, ಅವರ ಸಂಕಷ್ಟಗಳು ಹೋಗಲಿಲ್ಲ, ಇವರು ಆ ಖರೀದಿ ಕೇಂದ್ರಗಳ ಮುಂದೆ ಹದಿನೈದು ದಿವಸ, ಒಂದು ತಿಂಗಳು ಕಾಲ ತಾವು ಬೆಳೆದ ಬೆಳೆಗಳನ್ನು ಒತ್ತುಕೊಂಡು ಹೋಗಿ ಇದನ್ನು ಯಾವಾಗ ಖರೀದಿ ಮಾಡುತ್ತಾರೆಂದು ಪರಿತಪಿಸುವಂತಹ ವಾತಾವರಣ ನಿರ್ಮಾಣವಾಗಿದೆ, ಅಷ್ಟೇ ಅಲ್ಲ ದಳ್ಳಾಳಿಗಳು, ವ್ಯಾಪರಸ್ಥರು, ಈ ರೈತರನ್ನು ಮೋಸ ಮಾಡಿ ಅವರ ಉತ್ಪನ್ನಗಳನ್ನು ಖರೀದಿ ಮಾಡುವಾಗ ಅಧಿಕಾರಿಗಳು ಸೇರಿಕೊಂಡು ತಾವು ಲಾಭ ಮಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ಏನು ಪ್ರಶ್ನೆ ಬರುತ್ತದೆಂದರೆ ರೈತರಿಗೆ ಅನುಕೂಲವಾಗುವಂತಹ ಕೆಲಸಗಳು ಏನು ಆಯಿತು, ಏನು ಆಗಿಲ್ಲ, ಏಕೆ ಆಗಲಿಲ್ಲವೆನ್ನುವಂತಹ ವಿಚಾರವನ್ನು ಮಾಡಬೇಕಾಗುತ್ತದೆ. ಮೊದಲು ಆಲೂಗೆಡ್ಡೆಯ ಸಮಸ್ಯೆ ಪ್ರಾರಂಭವಾಯಿತು, ಅದನ್ನು ಬೆಂಬಲ ಬೆಲೆಗೆ ಖರೀದಿ ಮಾಡಬೇಕೆಂದು, ಅದು ಜಾಲುವಾಯಿತು. ಅದೇ ರೀತಿಯಲ್ಲಿ ಮೆಕ್ಕೆ ಜೋಳ, ತೊಗರಿ ಬೇಳೆ, ಮತ್ತೆ ಭತ್ತ ಬರುತ್ತಿದೆ, ಟಮೋಟೊ ಬೆಲೆ ಕುಸಿದು ಹೋಗಿದೆ, ಈರುಳ್ಳಿ , ತೆಂಗು ಬಿಳಿ ಜೋಳ, ಈ ರೀತಿಯಾಗಿ ಯಾವುದೇ ಉತ್ಪನ್ನಗಳನ್ನು ನೋಡಿದರೂ ಇವತ್ತು ರೈತರಿಗೆ ಬೆಲೆ ಸಿಗದೇ ಹೋಗುವಂತಹ ವಾತಾವರಣ ನಿರ್ಮಾಣವಾಗಿದೆ. ಇವತ್ತು ರೈತರು ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ? ಅವರು ತಮ್ಮ ಆತ್ಮ ವಿಶ್ವಾಸವನ್ನು ಕಳೆದುಕೊಂಡಿದ್ದಾರೆ, ಅವರು ಸಾಲ ಮಾಡಿದ್ದಾರೆ, ಸಾಕಷ್ಟು ದುಡಿಮೆ ಮಾಡಿದರೂ ಪ್ರತಿಫಲ ಸಿಗಲಿಲ್ಲ. ಇವತ್ತು ಸರ್ಕಾರ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದರೂ ಆ ಬೆಂಬಲ ಬೆಲೆಯಲ್ಲಿ ಉತ್ಪನ್ನಗಳನ್ನು ಖರೀದಿ ಮಾಡಿದರು, ಅವನು ಉತ್ಪನ್ನಕ್ಕೆ ಏನು ಖರ್ಚು ಮಾಡಿರುತ್ತಾನೆ. ಆ ಖರ್ಚು ಕೂಡ ಭರಿಸುವಂತಹದ್ದಕ್ಕೆ ಮತ್ತು ಅವನು ಮಾಡಿದ್ದಂತಹ ಸಾಲವನ್ನು ಕೂಡ ತೀರಿಸಲಾರದೇ ಆತ್ಮ ವಿಶ್ವಾಸವನ್ನು ಕಳೆದುಕೊಂಡು ಜೀವನದಲ್ಲಿ

ಇನ್ನು ಮುಂದೆ ಮಾಡುವುದಾದರೂ ಏನಿದೆ ಎಂದು ಇವತ್ತು ರೈತ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವಂಥಾದ್ದನ್ನು ನಾವು ನೋಡುತ್ತಿದ್ದೇವೆ. ನಮ್ಮ ಧಾರವಾಡ ಜಿಲ್ಲೆಯ ನವಲೂರಿನಲ್ಲಿ ಆಲೂಗೆಡ್ಡೆಯ ಉತ್ಪನ್ನವಾಯಿತು, ಅದನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋದರೆ ನೀನು ದೊಡ್ಡ ರೈತ ಎಂದು, ಅವನನ್ನು ಮನೆಗೆ ಕಳುಹಿಸಿದ್ದಾರೆ.

(ಈ ಹಂತದಲ್ಲಿ ಅಧ್ಯಕ್ಷರ ಪೀಠವನ್ನು ಉಪಾಧ್ಯಕ್ಷರು ಅಲಂಕರಿಸಿದ್ದರು)

ಅವನಿಗೆ 5 ಎಕರೆ ಜಮೀನು ಇದ್ದು, ಇನ್ನು ಕೇವಲ 30 ಗುಂಟೆ ಹೆಚ್ಚು ಜಮೀನು ಇದ್ದದ್ದಕ್ಕೆ ಅವನ ಉತ್ಪನ್ನವನ್ನು ಖರೀದಿ ಮಾಡಿಲ್ಲ, 5 ಎಕರೆ ಜಮೀನು ಇರುವ ರೈತರ ಉತ್ಪನ್ನಗಳನ್ನು ಖರೀದಿ ಮಾಡಿದರು. ಆದರೆ 5 ಎಕರೆಯ ಮೇಲೆ 20-30 ಗುಂಟೆ ಹೆಚ್ಚಿಗೆ ಇರುವಂತಹ ರೈತರ ಆಲುಗಡ್ಡೆಯನ್ನು ಖರೀದಿ ಮಾಡಲಿಲ್ಲ. ಆದರೆ ಐದು ಎಕರೆಗೆ 20-30 ಗುಂಟೆ ಜಾಸ್ತಿ ಜಮೀನು ಇರುವಂತಹ ನವಲೂರು ರೈತರ ಆಲೂಗೆಡ್ಡೆಯನ್ನು ಖರೀದಿ ಮಾಡಲಿಲ್ಲ.

4. 10 ಪಿ. ಎಂ

ಆತ ಉತ್ತಮಗುಣಮಟ್ಟದ ಆಲುಗೆಡ್ಡೆಯನ್ನು ಮಾರಾಟ ಮಾಡಲು ಮಾರುಕಟ್ಟೆಗೆ ತೆಗೆದುಕೊಂಡು ಬಂದಿದ್ದರು, ಅದನ್ನು ಮಾರಾಟ ಮಾಡಲಾಗಲಿಲ್ಲ. ಆತನ ಸಾಲ ತೀರಲಿಲ್ಲ, ಇದರಿಂದ ನಿರಾಶೆಯಿಂದ ಆತ ಆತ್ಮಹತ್ಯೆ ಮಾಡಿಕೊಂಡ. ನಮ್ಮ ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕಿನ ಜಾಗೂರಿನಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡ. ಇವತ್ತು ನವಲಗುಂದ , ನರಗುಂದ, ತಾಲ್ಲೂಕು ಕೊಪ್ಪಳ ಇರಬಹುದು, ಚಿತ್ರದುರ್ಗ ಜಿಲ್ಲೆಗಳಿರಬಹುದು, ಹೀಗೆ ಬೇರೆ ಬೇರೆ ಜಿಲ್ಲೆಗಳಲ್ಲಿ ಮೆಕ್ಕೆಜೋಳ ಖರೀದಿ ಕೇಂದ್ರ ಆರಂಭವಾಗಿ ಎಷ್ಟು ದಿವಸಗಳಾದವು ಎಂದರೆ ಮೂರು ತಿಂಗಳಾಯಿತು. ಕಳೆದ ಅಧಿವೇಶನದಲ್ಲಿ ರಾಜ್ಯ ಸರ್ಕಾರಕ್ಕೆ ಖರೀದಿ ಕೇಂದ್ರಗಳನ್ನು ಆರಂಭಿಸಿ ಖರೀದಿ ಮಾಡಲು ಆರಂಭಿಸಿ ಲಕ್ಷಾಂತರ ಟನ್‌ಗಳಷ್ಟು ಮೆಕ್ಕೆಜೋಳ ಉತ್ಪನ್ನ ಬಂದಿದೆ, ಅದಕ್ಕೆ ಬೆಲೆ ಇಲ್ಲವಾಗಿದೆ ಎಂದು ಹೇಳಿದರೆ ರಾಜ್ಯ ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಳ್ಳಲಿಲ್ಲ; ಕೂಡಲೆ ಖರೀದಿ ಕೇಂದ್ರಗಳನ್ನು ಆರಂಭಿಸಲಿಲ್ಲ. ಖರೀದಿ ಕೇಂದ್ರಗಳು ಅಲ್ಲಿ ಆರಂಭವಾದ ಮೇಲೆ ಎಷ್ಟು ಪ್ರಮಾಣದಲ್ಲಿ ಖರೀದಿ ಮಾಡ ಬೇಕಾಗಿತ್ತೊ ಆ ಪ್ರಮಾಣದಲ್ಲಿ ಆಗಲಿಲ್ಲ. ಹೀಗಾಗಿ ರೈತರು ಎಪಿಎಂಸಿ ಖರೀದಿ ಕೇಂದ್ರದ ಮುಂದೆ ಒಂದೊಂದು ತಿಂಗಳು ತಮ್ಮ ಉತ್ಪನ್ನಗಳನ್ನು ಇಟ್ಟುಕೊಂಡು ಕಾಯುತ್ತಾ ರಾತ್ರಿ ಅಲ್ಲೇ ಮಲಗಿಕೊಳ್ಳುವುದು, ಕುಟುಂಬದ ಸದಸ್ಯರೆಲ್ಲಾ ಅಲ್ಲೇ ಇರುವುದು, ಇಷ್ಟಾದ ಮೇಲೆ ಅಲ್ಲಿನ ಅಧಿಕಾರಿಗಳು ತೇವಾಂಶವಿದೆ. ಗುಣಮಟ್ಟ ಸರಿಯಿಲ್ಲವೆಂದು ತಿರಸ್ಕರಿಸುತ್ತಾರೆ, ಹೀಗಾದರೆ ರೈತನ ಸಮಸ್ಯೆಯನ್ನು ಪರಿಹಾರ ಮಾಡುವವರ್ಯಾರು?

ಶ್ರೀ ಬಿ.ಆರ್. ಯಾವಗಲ್:- ಉತ್ಪನ್ನಗಳನ್ನು ಪರೀಕ್ಷೆ ಮಾಡಿ ಒಪ್ಪಿಕೊಳ್ಳುವುದು ಎಫ್‌ಸಿಐಯ ಅಧಿಕಾರಿಗಳಿಗೆ ಸಂಬಂಧಿಸಿದ್ದು.

ಶ್ರೀ ಜಗದೀಶ್ ಶೆಟ್ಟರ್ :- ಎಫ್‌ಸಿಐನವರು ಇರುತ್ತಾರೆ. ನೋಡಲ್ ಏಜೆನ್ಸಿಯವರಾದ ರಾಜ್ಯ ಸರ್ಕಾರದವರು ಇರುತ್ತಾರೆ. ಇಲ್ಲಿ ಎಲ್ಲರ ಸಹಕಾರ ಬೇಕು ಎಫ್‌ಸಿಐನವರ ತಪ್ಪಿದ್ದರೆ ತಪ್ಪೆಂದು ಹೇಳೋಣ. ಎಫ್‌ಸಿಐನವರು ಸರಿಯಾದ ಸಹಕಾರ ಕೊಡುತ್ತಿಲ್ಲ, ಖರೀದಿ ಮಾಡುವುದನ್ನು ವಿಳಂಬ ಮಾಡುತ್ತಿದ್ದಾರೆಂದು ನಿಮ್ಮ ಮಂತ್ರಿಗಳು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದಿದ್ದಾರೆಯೇ? ನಿಮ್ಮ ಮಂತ್ರಿಗಳು ಎಷ್ಟು ಖರೀದಿ ಕೇಂದ್ರಗಳಿಗೆ ಭೇಟಿ ನೀಡಿದ್ದಾರೆ. ನಾನು ನರಗುಂದ, ನವಲಗುಂದ, ಗದಗ್ ಹೀಗೆ ಬೇರೆ ಬೇರೆ ಖರೀದಿ ಕೇಂದ್ರಗಳಿಗೆ ಭೇಟಿ ನೀಡಿದ್ದೆ, ಅಲ್ಲಿಯ ರೈತರ ಸಂಕಷ್ಟವನ್ನು ನೋಡಲು ಯಾವ ಒಬ್ಬ ಉಸ್ತುವಾರಿ ಸಚಿವರು ಭೇಟಿ ನೀಡಿಲ್ಲ, ಯಾವ ಒಬ್ಬ ಸಂಬಂಧಪಟ್ಟ ಮಂತ್ರಿಗಳು ಬಂದಿಲ್ಲ, ರಾಯಚೂರು, ಹಾವೇರಿಗಳಲ್ಲೂ ಇದೆ ಗದ್ದಲವಿದೆ.

(ಉಪಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದ್ದರು)

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ನರಗುಂದು, ನವಲಗುಂದ, ರೋಣ, ಇರಲಿ, ನನ್ನ ಮಾಹಿತಿಯ ಪ್ರಕಾರ ಅವರು ಮೊದಲು ಹೋಗಿರಬಹುದು ಅಥವಾ ನಾವು ಮೊದಲು ಹೋಗಿರಬಹುದು, ನಾಲ್ಕು ನಾಲ್ಕು ಸಾರಿ ಖರೀದಿ ಕೇಂದ್ರಗಳಿಗೆ ಸಂಬಂಧಿಸಿದ ಉಸ್ತುವಾರಿ ಸಚಿವರು ಭೇಟಿ ಕೊಟ್ಟಿದ್ದೇವೆ, ಅವರಿಗೆ ಎಷ್ಟು ಕಾಳಜಿ ಇದೆಯೊ ಅಷ್ಟೆ ಕಾಳಜಿ ನಮಗೂ ಇದೆ, ಮಾಹಿತಿಗಾಗಿ ಹೇಳುವುದಾದರೆ ನಿನ್ನೆಯವರೆಗೆ ಎರಡು ಲಕ್ಷ ಹತ್ತು ಸಾವಿರ ಕ್ವಿಂಟಲ್‌ನಷ್ಟು ಉತ್ಪನ್ನವನ್ನು ಖರೀದಿ ಮಾಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್:- ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ಧಾರವಾಡ ಉಸ್ತುವಾರಿ ಸಚಿವರು, ನಾವೆಲ್ಲಾ ಉಸ್ತುವಾರಿ ಸಚಿವರುಗಳು ಜವಾಬ್ದಾರಿಯನ್ನು ತೆಗೆದುಕೊಂಡು ಭೇಟಿ ನೀಡಿ ಕೆಲಸ ಮಾಡಿದ್ದೇವೆಂದು ಹೇಳಿದರು. ನರಗುಂದ ಖರೀದಿ ಕೇಂದ್ರವನ್ನು ಇವರು ಎಷ್ಟು ನಿಧಾನವಾಗಿ ಆರಂಭಿಸಿದರು ಕೇಳಿ, ಅದೇ ರೀತಿ ನಮ್ಮ ಮುಂಡರಗಿಗೆ ಸಂಬಂಧಿಸಿದ್ದು ಆದೇಶವಾಗಿದೆ, ಇಲ್ಲಿಯವರೆಗೆ ಗ್ರೆಡರ್ಸ್ ಇಲ್ಲವೆಂದು ಖರೀದಿ ಕೇಂದ್ರ ಆರಂಭ ಮಾಡಿಲ್ಲ.

ಶ್ರೀ ಎ.ಎಂ. ಹಿಂಡಸಗೇರಿ :- ರಾಜ್ಯ ಸರ್ಕಾರ ಪೂರ್ಣ ವ್ಯವಸ್ಥೆಯನ್ನು ಮಾಡಿದರೂ ಕೂಡ ಎಫ್‌ಸಿಐನಿಂದ ಗ್ರೆಡಾರ್ಸ್ ಬಂದು ಗ್ರೇಡಿಂಗ್ ಮಾಡುವುದಿಲ್ಲ ಅಲ್ಲಿಯವರೆ ನಾವು ಉತ್ಪನ್ನವನ್ನು ತೆಗೆದುಕೊಳ್ಳುವಂತಿಲ್ಲ, ನಮ್ಮ ಗ್ರೆಡರ್ಸ್‌ಗೆ ತರಬೇತಿ ಕೊಟ್ಟು ಖರೀದಿಯನ್ನು ಆರಂಭ ಮಾಡಿದ್ದೇವೆ. ಇದೊಂದು ರೀತಿಯಾಗಿ ಹೊಸ ಪ್ರಯೋಗ. ಸಮಯಾನುಸಾರ ಎಲ್ಲಾ ಕಡೆ ಮಾಡಿದ್ದೇವೆ. ವಾದವಿವಾದಕ್ಕೆ ಮಾತನಾಡುವುದು ಬೇರೆ. ಆದರೆ ಪ್ರಾಮಣಿಕವಾಗಿ ಗದಗ್, ಬೆಳಗಾಂ ಹೀಗೆ ಉತ್ತರ ಭಾಗದ ಯಾವ್ಯಾವ ಜಿಲ್ಲೆಗಳಲ್ಲಿ ಇಂತಹ ಸಮಸ್ಯೆ ಇದೆ ಅಂತಹ ಕಡೆ ಸ್ಪಂದಿಸಿದ್ದೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಆಲೂಗೆಡ್ಡೆಯ ಬಗ್ಗೆ ಮಾತನಾಡಿದರು. ನಿಗಧಿತ ಅವಧಿಯಲ್ಲಿ ಒಂದು ಲಕ್ಷ 5 ಲಕ್ಷ ಕ್ವಿಂಟಾಲ್ ಸುಮಾರು 5 ಕೋಟಿ ರೂಪಾಯಿಗಳ ಆಲೂಗೆಡ್ಡೆಯನ್ನು ಖರೀದಿ ಮಾಡಿ ಫ್ರಿಡ್ಜ್‌ನಲ್ಲಿಟ್ಟಿದ್ದೇವೆ, ಅವರು ನಾವು ಎಪಿ ಎಂಸಿಗೆ ಹೋಗಿ ನೋಡಿದ್ದೇವೆ. ರೈತರ ಬಗ್ಗೆ ಅವರಿಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮ್ಮ ಪಕ್ಷಕ್ಕೆ ಹಾಗೂ ಸರ್ಕಾರಕ್ಕೆ ಇದೆ ಎಂದು ಹೇಳುವುದಕ್ಕೆ ಇಚ್ಚೆಪಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಡಿ.ಆರ್.ಪಾಟೀಲ್, ಬಿ. ಆರ್. ಯಾವಗಲ್‌ರವರು ಇದ್ದಾರೆ. ನಮ್ಮ ಮಂತ್ರಿಗಳು ಮುಂಡರಗಿಯನ್ನು ಆರಂಭಿಸಿ ಎಂದು ಪತ್ರವನ್ನು ಬರೆದಿದ್ದಾರೆ. ಇವತ್ತು ಕೂಡ ಅಲ್ಲಿ ಆರಂಭಿಸಿಲ್ಲ, ಅಲ್ಲಿಯ ರೈತರು ಏನಾಗಬೇಕು, ತಾವೇ ಹೇಳಿ. ಗ್ರೆಡರ್ಸ್ ಇರುವುದು, ಇಲ್ಲದಿರುವುದು ರೈತರಿಗೆ ಸಂಬಂಧಿಸಿದ್ದಲ್ಲ, ಖರೀದಿ ಕೇಂದ್ರ ಆರಂಭಿಸಬೇಕಾದ್ದು ರಾಜ್ಯ ಸರ್ಕಾರದ ಜವಾಬ್ದಾರಿ, ನಿಧಾನವಾಗಿ ಆರಂಭಿಸಿದರೆಂದು ಸರ್ಕಾರ ಇಬ್ಬರು ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಟ್ಟರು.

ಶ್ರೀ ಅರಗಜ್ಞಾನೇಂದ್ರ :- ಮಾನ್ಯ ಉಪಾಧ್ಯಕ್ಷರೆ, ವಿರೋಧಪಕ್ಷದ ನಾಯಕರು ಮಾತನಾಡುವಾಗ ಮುಖ್ಯಮಂತ್ರಿಗಳಾದರು ಇರಬೇಕು, ಇಲ್ಲವಾದರೆ ಕನಿಷ್ಟ ಸಂಬಂಧಿಸಿದ ಅಧಿಕಾರಿಗಳಾದರೂ ಮಾತನಾಡಿದ್ದನ್ನು ನೋಟ್ ಮಾಡಿಕೊಳ್ಳಲು ಇರಬೇಕಾಗಿತ್ತು. ಅಧಿಕಾರಿಗಳ ಗ್ಯಾಲರಿಯನ್ನು ನೋಡಿ, ಇದ್ಯಾವ ಸ್ಥಿತಿ? ಏತಕ್ಕೆ ವಿರೋಧಪಕ್ಷದ ನಾಯಕರು ಮಾತನಾಡಬೇಕು? ಅವರ‍್ಯಾರಿಗೂಸಮಯವಿಲ್ಲದಿದ್ದರೆ ಇಲ್ಲಿ ಬರಲು ಅವರಿಗೆ ಸಮಯವಾದಾಗ ಸದನ ಸೇರೋಣ ಈಗ ಮುಂದೂಡಿ. ಪ್ರಶ್ನೋತ್ತರ ವೇಳೆಯನ್ನು ರದ್ದುಪಡಿಸಿ, ರೈತರಿಗೆ ಸಂಬಂಧಿಸಿದ ವಿಚಾರದ ಬಗ್ಗೆ ವಿರೋಧಪಕ್ಷದ ನಾಯಕರು ಇಲಿ ಮಾತನಾಡುತ್ತಿರುವಾಗ, ಯಾರಿಗೂ ಅದರ ಗಾಂಭೀರ್ಯತೆ ಇಲ್ಲವೆಂದರೆ, ಈ ವಿಷಯವನ್ನು ಪ್ರಸ್ತಾಪ ಮಾಡುವುದರಲ್ಲಿ ಅರ್ಥವೇ ಇಲ್ಲ. ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಇಲ್ಲಿ ಬಂದು ಕುಳಿತುಕೊಳ್ಳಲು ಏನಾಗಿದೆ, ಯಾವ ಕಾರಣಕ್ಕಾಗಿ ಬರಲಿಲ್ಲ?

ಉಪಾಧ್ಯಕ್ಷರು:- ವಿಧಾನಪರಿಷತ್ತಿನಲ್ಲಿರಬಹುದು.

ಶ್ರೀ ಅರಗಜ್ಞಾನೇಂದ್ರ :- ಅವರ ವಿಧಾನಪರಿಷತ್ತಿನಲ್ಲಿರುವುದಾದರೆ, ಇಲ್ಲಿ ಈ ಚರ್ಚೆಯನ್ನು ಸಸ್ಪೆಂಡ್ ಮಾಡಿ, ಬಹಳ ಲಘುವಾಗಿ ತೆಗೆದುಕೊಂಡಿದ್ದಾರೆ. ಆಡಳಿತಪಕ್ಷದ ಮೊದಲನೇ ಸಾಲಿನಲ್ಲಿ ಕಾನೂನು ಸಚಿವರು ಸೇರಿದಂತೆ ಎರಡು ಮೂರು ಸಚಿವರನ್ನು ಬಿಟ್ಟರೆ ಮತ್ಯಾರೂ ಇಲ್ಲ, ಕಾರ್ಯದರ್ಶಿ ಮಟ್ಟದ ಅಧಿಕಾರಿಗಳು ಹಾಜರಿರಬಾರದೆಂದು ಹೇಳಲಾಗಿದೆಯೆ? ಇಷ್ಟೊಂದು ನಿಕೃಷ್ಟವಾಗಿ ವಿರೋಧಪಕ್ಷವನ್ನು ಕಡೆಗಣಿಸುತ್ತಾರೆಂದರೆ ಹೇಗೆ? ನಾವು ಎರಡು ದಿವಸಗಳಿಂದ ಪ್ರತಿಭಟನೆ ಮಾಡಿದರೆ ಪ್ರತಿಭಟಿಸುತ್ತಾರೆಂದು ಹೇಳುತ್ತಾರೆ, ಗಾಳಿಯಲ್ಲಿ ಗುದ್ದಾಟ ಮಾಡುವುದಕ್ಕೆ ಮಾತನಾಡಬೇಕೆ? ಅರ್ಥವೇ ಇಲ್ಲ.

ಉಪಾಧ್ಯಕ್ಷರು : ಸರ್ಕಾರದ ಮುಖ್ಯ ಸಚೇತಕರು, ಸಂಬಂಧಿಸಿದ ಅಧಿಕಾರಿಗಳನ್ನು ಸದನಕ್ಕೆ ಕರೆಯಿಸುವ ವ್ಯವಸ್ಥೆಯನ್ನು ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):- ಈ ವಿಚಾರವನ್ನು ಚರ್ಚೆ ಮಾಡುವ ಸಂದರ್ಭದಲ್ಲಿ ಕೃಷಿ, ಆಹಾರ, ತೋಟಗಾರಿಕೆ ಇಲಾಖೆಗಳ ಅಧಿಕಾರಿಗಳಿರಬೇಕು. ವಿಧಾನ ಪರಿಷತ್ತಿನಲ್ಲಿ ಈ ವಿಷಯವಾಗಿ ಚರ್ಚೆಯಾಗುತ್ತಿರುವುದರಿಂದ ಮುಖ್ಯಮಂತ್ರಿಗಳು ಸೇರಿದಂತೆ ಸಂಬಂಧಿಸಿದವರು ಅಲ್ಲಿರುವುದರಿಂದ ಅಲ್ಲಿದ್ದಾರೆಯೆ ವಿನಹ ಈ ಸದನವನ್ನಾಗಲಿ ಅಥವಾ ವಿರೋಧಪಕ್ಷ ನಾಯಕರು ಚರ್ಚೆ ಮಾಡುವ ಸಂದರ್ಭದಲ್ಲಿ ನಿರ್ಲಕ್ಷ್ಯ ಮಾಡುವುದಿಲ್ಲ. ಅದು

ಊಹಾಪೋಹದ ಮಾತು, ತಮಗೆ ವಿರೋಧಪಕ್ಷದವರು ಮಾತನಾಡುವಾಗ ತಮಗೆ ಎಷ್ಟು ಗೌರವವಿದೆಯೋ ಅಷ್ಟೇ ಗೌರವ ನಮಗೂ ಇದೆ. ಅವರು ಹೇಳುವುದನ್ನು ಕೇಳಬೇಕೆನ್ನುವ ಕಾರಣದಿಂದಲೇ ಸುಮಾರು ಎಂಟು ಜನ ಸಚಿವರು ಇಲ್ಲಿ ಇದ್ದೇವೆ. ಇಷ್ಟು ಜನ ಇರುವಾಗ ನಮಗೆ ಎಷ್ಟು ಅವರ ಚರ್ಚೆಯ ಬಗ್ಗೆ ಗಾಂಭೀರ್ಯತೆ ಇದೆ ಎಂಬುದನ್ನು ಮಾನ್ಯ ಸದಸ್ಯರು ಊಹಿಸಿಕೊಳ್ಳದಿದ್ದರೆ ನಾವೇನು ಮಾಡುವುದು.?

ಶ್ರೀ ವಿಶ್ವೇಶ್ವರ ಹೆಗ್ಡೆ ಕಾಗೇರಿ:- ಸಭಾನಾಯಕರು ಅಲ್ಲಿರುವಾಗ, ಕೃಷಿ ಸಚಿವರಾದವರು ಇಲ್ಲಿ ಇರುವುದು ಬೇಡವೇ? ವಿರೋಧಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅಧಿಕಾರಿಗಳು ಇಲ್ಲ, ಮಂತ್ರಿಗಳು ಇಲ್ಲ, ನಾವು ರಾಜ್ಯದ ಜನತೆಗೆ ಹೇಳಬೇಕಾದ್ದನ್ನು ಹೇಳುತ್ತಿದ್ದೇವೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ:- ಸುಮಾರು ಒಂದೂವರೆ ಗಂಟೆಯಿಂದ ವಿಧಾನ ಪರಿಷತ್ತಿನಲ್ಲಿ ಚರ್ಚೆ ನಡೆಯುತ್ತಿದ್ದೆ.

ಉಪಾಧ್ಯಕ್ಷರು :- ಕೆಲವನ್ನಾದರೂ ಕರೆಸಿ. ಅವರು ಅಧಿಕಾರಿಗಳನ್ನು ಕೇಳುತ್ತಿದ್ದಾರೆ.

ಶ್ರೀ ಆರಗ ಜ್ಞಾನೇಂದ್ರ :- ನೋಟ್ ಮಾಡಿಕೊಳ್ಳಲು ಅಧಿಕಾರಿಗಳಾದರೂ ಇರಬೇಕಲ್ಲವೇ? ಮಾನ್ಯ ವಿರೋಧ ಪಕ್ಷದ ನಾಯಕರು ಬಹಳ ಪ್ರಮುಖವಾದಂಥ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಅನೇಕ ದಿವಸಗಳಿಂದ ಪ್ರಿಪೇರ್ ಆಗಿ ಇಲ್ಲಿ ಬಂದರೆ ಯಾರೂ ಇಲ್ಲವೆಂದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್:- ಹಿಂದೆ ಕಾಗೋಡು ತಿಮ್ಮಪ್ಪನವರು ಮಾತನಾಡಿದ್ದು ಕಡತದಲ್ಲಿದೆ. ಅವರು ಇಲ್ಲಿ ಕುಳಿತಿದ್ದಾಗ, ಸರ್ಕಾರಕ್ಕೆ ಅಧಿಕಾರಿಗಳ ಮೇಲೆ ಹಿಡಿತವಿಲ್ಲ ಎಂದು ಮಾತನಾಡಿದ್ದರು. ಈಗ ನಿಮಗೆ ಅಧಿಕಾರಿಗಳ ಮೇಲೆ ಹಿಡಿತವಿಲ್ಲವೇ?

ಶ್ರೀ ಜಗದೀಶ್ ಶೆಟ್ಟರ್:- ಆಗಲೇ ನಾನು ಪ್ರಸ್ತಾಪ ಮಾಡಿದ್ದೇವೆ. ಎಲ್ಲಿ ತಕ್ಷಣ ಖರೀದಿ ಕೇಂದ್ರಗಳನ್ನು ಪ್ರಾರಂಭ ಮಾಡಬೇಕಾಗಿತ್ತೋ ಅಲ್ಲಿ ಪ್ರಾರಂಭ ಮಾಡಲಿಲ್ಲ ಎನ್ನುವುದು ಮುಖ್ಯ. ಹಿಂದೆ ಮುಖ್ಯ ಮಂತ್ರಿಗಳು, ಕೃಷಿ ಸಚಿವರು, ಆಹಾರ ಸಚಿವರು, ನಾವು ಎಲ್ಲರೂ ಸೇರಿ ದೆಹಲಿಗೆ ಡೆಲಿಗೇಷನ್ ತೆಗೆದುಕೊಂಡು ಹೋಗಿದ್ದೆವು. ಕೇಂದ್ರದ ಆಹಾರ ಸಚಿವರನ್ನು ಮತ್ತು ಕೃಷಿ ಸಚಿವರನ್ನು ಭೇಟಿ ಆಗಿದ್ದೆವು. ಆಗ ಗ್ರೇಡರ್ಸ್ ಸಮಸ್ಯೆ, ತೇವಾಂಶದ ಕ್ವಾಲಿಟಿ ಪ್ರಶ್ನೆ ಮತ್ತು ಮಿನಿಮಮ್ ಸಪೋರ್ಟ್ ಪ್ರೈಸ್ ಪ್ರಕಾರ ಹಣ ಕೊಡುವುದು ಇವನ್ನೆಲ್ಲಾ ಮಾನ್ಯ ಶಾಂತಕುಮಾರ್ ಮತ್ತು ನಿತೀಶ್ ಕುಮಾರ್‌ರವರ ಜೊತೆ ಮಾತನಾಡಿದಂಥ ಸಂದರ್ಭದಲ್ಲಿ ಅವರು ಒಂದೇ ಮಾತು ಹೇಳಿದರು. ರೈತರ ಉತ್ಪನ್ನಗಳ ಬೆಲೆ ಕುಸಿಯುತ್ತಿರುವಂಥ ಈ ಸಂದರ್ಭದಲ್ಲಿ ಕೇಂದ್ರ ಘೋಷಣೆ ಮಾಡಿದ ಪ್ರಕಾರ ನೀವು ಎಷ್ಟೇ ಕ್ವಾಂಟಿಟಿ ಪರ್ಚೇಸ್ ಮಾಡಿದರೂ ನಾವು ಹಣ ಕೊಡಲು ತಯಾರಿದ್ದೇವೆ ಎನ್ನುವ ಮಾತನ್ನು ಹೇಳಿದರು. ತೇವಾಂಶ ಮತು ಇನ್ನಿತರ ಕೆಲವು ತಾಂತ್ರಿಕ ದೋಷಗಳ ಬಗ್ಗೆ ಕೆಲವೊಂದು ಕನ್‌ಸೆಷನ್ ಕೊಡಲು ನಾವು ತಯಾರಿದ್ದೇವೆ ಎನ್ನುವ ಮಾತನ್ನೂ ಹೇಳಿದರು. ಅಷ್ಟಾದಮೇಲೆ ಇವರು ಖರೀದಿ ಕೇಂದ್ರಗಳನ್ನು ಬೇಗನೆ ತೆಗೆಯಬೇಕಾಗಿತ್ತು. ಏಕೆ

ವಿಳಂಬ ಮಾಡಿದರು ಎನ್ನುವ ಪ್ರಶ್ನೆಯನ್ನು ನಾನು ಕೇಳುತ್ತಿದ್ದೇನೆ. ಮಾನ್ಯ ಎಸ್.ಎಸ್. ಪಾಟೀಲರು ಹೇಳಿದಂತೆ, ಮುಂಡರಗಿಯಲ್ಲಿ ಖರೀದಿ ಕೇಂದ್ರವನ್ನು ಅನೌನ್ಸ್ ಮಾಡಿದರು ಅಷ್ಟೇ. ಅಲ್ಲಿ ಇನ್ನೂ ಕೆಲಸ ಏಕೆ ಚಾಲೂ ಆಗಿಲ್ಲ? ಎಫ್.ಸಿ.ಐ.ನವರು ತಪ್ಪು ಮಾಡಿದರೆ ನಾವು ನೀವು ಇಬ್ಬರೂ ಸೇರಿ ಮಾಡಿಸೋಣ. ಹಾಗಾದರೆ ಇಲ್ಲಿಯವರೆ ನಿಮ್ಮ ರಾಜ್ಯಸರ್ಕಾರದವರು ಮತ್ತು ಮಂತ್ರಿಗಳು ಏನು ಮಾಡುತ್ತಿದ್ದರು? ಬರೀ ಧಾರವಾಡ ಜಿಲ್ಲೆಯನ್ನಲಿ ಅಲ್ಲ, ಎಲ್ಲ ಕಡೆಯದೂ ಹೇಳುತ್ತಿದ್ದೇನೆ, ಎಲ್ಲೆಲ್ಲಿ ಖರೀದಿ ಕೇಂದ್ರಗಳನ್ನು ತೆಗೆದಿದ್ದಾರೆ ಅಲ್ಲಿಗೆ ಜಿಲ್ಲಾ ಉಸ್ತುವಾರಿ ಸಚಿವರಾಗಲೀ, ಅಧಿಕಾರಿಗಳಾಗಲೀ ಅಥವಾ ಸಂಬಂಧಪಟ್ಟ ಸಚಿವರಾಗಲೀ ಯಾರು ವಿಸಿಟ್ ಮಾಡಿಲ್ಲ. ಪತ್ರಿಕೆಗಳ ದಿನನಿತ್ಯ ಬರುತ್ತಿತ್ತು. ಖರೀದಿ ಕೇಂದ್ರಗಳಲ್ಲಿ ಸಮಸ್ಯೆಯಾಗಿದೆ, ಖರೀದಿ ಮಂದಗತಿಯಿಂದ ಆಗುತ್ತಿದೆ, ಅಧಿಕಾರಿಗಳು ಸಹಕಾರ ಕೊಡುತ್ತಿಲ್ಲ, ವ್ಯಾಪಾರಸ್ಥರು, ದಳ್ಳಾಳಿಗಳು ಲಾಭ ಮಾಡಿಕೊಳ್ಳುತ್ತಿದ್ದಾರೆ, ಹೀಗೆ ರೈತರಿಗೆ ನೂರೆಂಟು ವಿಘ್ನಗಳು, ನೂರೆಂಟು ತೊಂದರೆಗಳು ರೈತರು ತಿಂಗಳುಗಟ್ಟಲೆ ಕಾಯ್ದುಕೊಂಡು ಕುಳಿತಿದ್ದಾರೆ. ಲಕ್ಷಾಂತರ ಟನ್ ಮೆಕ್ಕೆಜೋಳ ಖರೀದಿ ಕೇಂದ್ರದ ಮುಂದೆ ಬಂದು ಬಿದ್ದಿದೆ. ಖರೀದಿ ಮಾಡಿದ್ದನ್ನು ಲಿಫ್ಟ್ ಮಾಡುವಂಥ ಪರಿಸ್ಥಿತಿ ಇಲ್ಲ. ಇವರಿಗೆ ವೇರ್‌ಹೌಸ್ ಸಿಗುತ್ತಿಲ್ಲ. ಕೊನೆಗೆ ಲಾರಿಗಳೂ ಸಿಗುತ್ತಿಲ್ಲ. ಎಂಥ ಶೋಚನೀಯ ಪರಿಸ್ಥಿತಿ ಇದೆ ಎಂದರೆ, ಜಿಲ್ಲಾಧಿಕಾರಿಗಳು ಎಂಥ ಪರಿಸ್ಥಿತಿಯಲ್ಲಿ ಇದ್ದಾರೆ ಎಂದರೆ, ಇವರಿಂದ 30-40 ಲಾರಿಗಳನ್ನು ಮಾಡಲು ಆಗುತ್ತಿಲ್ಲ. ಅಂದರೆ, ನಮ್ಮ ರಾಜ್ಯದಲ್ಲಿ ಲಾರಿಗಳು ಮಾಯವಾಗಿಬಿಟ್ಟವೋ ಹೇಗೆ? ಲಾರಿಗಳನ್ನು ಬಾಡಿಗೆಗೆ ತೆಗೆದುಕೊಳ್ಳಲು ಹಣ ಕೊಡುತ್ತಾರೆ. ಇಷ್ಟೆಲ್ಲಾ ಹಣವನ್ನು ಕೊಡುತ್ತಿದ್ದರೂ, ಜಿಲ್ಲಾಧಿಕಾರಿಗಳಿಗೆ ಲಾರಿಗಳನ್ನು ಮಾಡಲು ಆಗುತ್ತಿಲ್ಲ. ಅಲ್ಲಿದ್ದಂಥ ಉತ್ಪನ್ನಗಳನ್ನು ಲಿಫ್ಟ್ ಮಾಡಲು ಆಗುತ್ತಿಲ್ಲ. ಈ ಪರಿಸ್ಥಿತಿ ಎಲ್ಲ ಖರೀದಿ ಕೇಂದ್ರಗಳಲ್ಲಿ ಇದೆ. ಯಾವುದೋ ಒಂದು ಜಿಲ್ಲೆಯಲ್ಲಿ, ಯಾವುದೋ ಒಂದು ಮೂಲೆಯಲ್ಲಿ ಏನೋ ತೊಂದರೆಯಾಗಿದೆ ಎಂದರೆ ಅಡ್ಡಿಯಿಲ್ಲ. ಗಂಗಾವತಿ, ರಾಯಚೂರು, ನವಲುಗುಂದ, ನರಗುಂದ ಹುಬ್ಬಳ್ಳಿ, ಕೊಪ್ಪಳ ಮುಂಡರಗಿ ಎಲ್ಲ ಕಡೆಯೂ ತೊಂದರೆಯಾಗಿದೆ. ಹಾಗಾದರೆ ಇದನ್ನು ನೋಡುವವರು ಯಾರು? ಆಹಾರ ಸಚಿವರಾಗಲೀ ಕೃಷಿ ಸಚಿವರಾಗಲೀ ತೋಟಗಾರಿಕಾ ಸಚಿವರಾಗಲೀ ಎಲ್ಲಾದರೂ ಒಂದು ಖರೀದಿ ಕೇಂದ್ರಕ್ಕೆ ವಿಸಿಟ್ ಮಾಡಿದ್ದಾರೆಯೇ? ಮಾನ್ಯ ಮುಖ್ಯಮಂತ್ರಿಗಳು ಎಲ್ಲೆಲ್ಲೋ ಸರ್‌ಪ್ರೈಸ್ ವಿಸಿಟ್ ಮಾಡುತ್ತಿದ್ದಾರೆ. ಇಲ್ಲಿ ಲಕ್ಷಾಂತರ ರೈತರು ತೊಂದರೆಯಲ್ಲಿದ್ದಾರೆ. ಅವರು ಯಾವುದಾದರೂ ಒಂದು ಖರೀದಿ ಕೇಂದ್ರಕ್ಕೆ ಸರ್‌ಪ್ರೈಸ್ ವಿಸಿಟ್‌ಮಾಡಿ ನೋಡಿದ್ದಾರೆ ರೈತರ ಪರಿಸ್ಥಿತಿ ಏನು ಎನ್ನುವುದು ಗೊತ್ತಾಗುತ್ತಿತ್ತು. ನಾವು ಖರೀದಿ ಕೇಂದ್ರಗಳಿಗೆ ಹೋದರೆ, ಅಲ್ಲಿನ ರೈತರಿಂದ ತಪ್ಪಿಸಿಕೊಂಡು ಬರಲು ಆಗುವುದಿಲ್ಲ. ಯಾವುದೇ ಪಕ್ಷದ ರಾಜಕಾರಣಿ ಅಥವಾ ಜನಪ್ರತಿನಿಧಿ ಅಲ್ಲಿಗೆ ಹೋದರೆ, ರೈತರು ಅವರಿಗೆ ಮುತ್ತಿಗೆ ಹಾಕಿ, ಇಲ್ಲಿ ನಮ್ಮ ಪರಿಸ್ಥಿತಿ ಹೀಗೆ ಇದೆ, ನಮ್ಮ ಸಮಸ್ಯೆಯನ್ನು ಬಗೆಹರಿಸಿ ಎಂದು ಘೇರಾವು ಹಾಕುವಂಥ ಪ್ರಸಂಗವನ್ನು ನಾವು ನೋಡಿದ್ದೇವೆ. ನಮಗೆ ಅಲ್ಲಿಂದ ಹೊರಗೆ ಬರಲು ಆಗುತ್ತಿರಲಿಲ್ಲ. ಇವತ್ತೂ ಅದೇ ಪರಿಸ್ಥಿತಿ ಮುಂದುವರೆದಿದೆ. 28ನೇ ತಾರೀಖಿಗೆ ಮೆಕ್ಕೆಜೋಳ ಖರೀದಿ ಮಾಡುವುದನ್ನು ಕೇಂದ್ರ ಸರ್ಕಾರದವರು ಬಂದ್

ಮಾಡಿಬಿಟ್ಟರು ಎಂದು ಇವರು ಹೇಳುತ್ತಾರೆ. ಹಾಗಾದರೆ ಇಲ್ಲಿಯವರೆಗೆ ಇವರು ಏನು ಮಾಡಿದರು ಎಂದು ಕೇಳುತ್ತಿದ್ದೇನೆ. ಇದಕ್ಕಾಗಿ ನಿನ್ನೆಯ ದಿವಸ ದೊಡ್ಡ ಗದ್ದಲ ಎಬ್ಬಿಸಿಬಿಟ್ಟರು. ಆದರೆ ಇಲ್ಲಿಯವರೆಗೆ ರಾಜ್ಯ ಸರ್ಕಾರದವರು ಮಲಗಿಕೊಂಡು ಬಿಟ್ಟಿದ್ದರೋ ಹೇಗೆ? ಅವರ ನಿಧಿ ಎಲ್ಲಿದೆ? ಎಲ್ಲವನ್ನೂ ನಾವೇ ಖರೀದಿ ಮಾಡಿದೆವು ಎಂದು ರಾಜ್ಯಪಾಲರ ಭಾಷಣದಲ್ಲಿ ಹೇಳುತ್ತಾರೆ. ''ಕರ್ನಾಟಕದಲ್ಲಿ ಇದೇ ಮೊದಲನೇ ಬಾರಿಗೆ ಭಾರೀ ಪ್ರಮಾಣದಲ್ಲಿ ಸರ್ಕಾರವು ಪ್ರತಿ ಕ್ವಿಂಟಾಲ್‌ಗೆ 445 ರೂಪಾಯಿ ದರದಲ್ಲಿ ಮುಸುಕಿನ ಜೋಳ ಸಂಗ್ರಹಿಸುವ ಕಾರ್ಯವನು ಪ್ರಾರಂಭಿಸಿತು. ಫೆಬ್ರವರಿ 20ರೊಳಗಾಗಲೇ ಸುಮಾರು 16 ಲಕ್ಷ ಕ್ವಿಂಟಾಲ್ ಮುಸುಕಿನ ಜೋಳವನ್ನು ಸಂಗ್ರಹಿಸಲಾಗಿದೆ'' ಎಂದು ಹೇಳಿದ್ದಾರೆ. ಇದಕ್ಕೆ ನಾವು ರೊಕ್ಕ ಕೊಟ್ಟಿದ್ದೇವೆ ಎಂದು ಹೇಳುತ್ತಾರೆ. ''ತೊಗರಿ ಸಂಗ್ರಹಣೆಯನ್ನು ಸಹ ಪ್ರಾರಂಭಿಸಲಾಗಿದೆ. ಎಂದೂ ಹೇಳಿದ್ದಾರೆ. ಹಾಗಾದರೆ ಖರೀದಿಯ ರೊಕ್ಕ ರಾಜ್ಯ ಸರ್ಕಾರದ್ದೇ? ಇಲ್ಲಿಯವರೆಗೆ ಕೇಂದ್ರ ಸರ್ಕಾರ ಎಫ್.ಸಿ.ಐ ಮುಖಾಂತರ 200 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಹಣವನ್ನು ಕೊಟ್ಟು ಮೆಕ್ಕೆಜೋಳ ಮತ್ತು ಬೇರೆ ಉತ್ಪನ್ನಗಳನ್ನು ಖರೀದಿ ಮಾಡಿದೆ. ಅವರು 200 ಕೋಟಿ ರೂಪಾಯಿಗಿಂತ ಹೆಚ್ಚಿಗೆ ಹಣವನ್ನು ಇನ್‌ವೆಸ್ಟ್ ಮಾಡಿ ಖರೀದಿ ಮಾಡಿದ್ದಾರೆ. ಇಷ್ಟಾದರೂ ಇವರು ಕೇಂದ್ರ ಸರ್ಕಾರದ ಮೇಲೆ ಜವಾಬ್ದಾರಿಯನ್ನು ಹೇರುತ್ತಾರೆ. ಹಾಗಾದರೆ ಇದರಲ್ಲಿ ನಿಮ್ಮ ಜವಾಬ್ದಾರಿ ಏನೂ ಇಲ್ಲವೇ? ರೈತರ ಸಲುವಾಗಿ ನಿಮ್ಮ ಕಾಳಜಿ ಏನು? 28ನೇ ತಾರೀಖಿಗೆ ಖರೀದಿ ಮುಗಿಯಿತು. ಅನಾಹುತವಾಯಿತು ಎಂದು ಆಗ ನಮ್ಮೆಲ್ಲಾ ಶಾಸಕರು ಬಹಳ ಗಾಭರಿಯಾಗಿಬಿಟ್ಟರು. ಹಾಗಾದರೆ ರಾಜ್ಯ ಸರ್ಕಾರದ ಖಜಾನೆಯಲ್ಲಿ ರೊಕ್ಕವು ಇಲ್ಲವೇ? ರಾಜ್ಯ ಸರ್ಕಾರದ 75 ಕೋಟಿ ರೂಪಾಯಿ ಆವರ್ತ ನಿಧಿ ಎಲ್ಲಿದೆ? ಅದು ಎಲ್ಲಿ ಹೋಯಿತು? ಎಲ್ಲಿದೆ ಎಂದು ದೀಪ ಹಚ್ಚಿ ಅದನ್ನು ಹುಡುಕಬೇಕಾಗಿದೆ. ಎ.ಪಿ.ಎಂ.ಸಿ.ಯಿಂದ 50 ಕೋಟಿ ರೂಪಾಯಿ ಎಂದು ಹೇಳಿದ್ದಾರೆ. ಎ.ಪಿ.ಎಂ.ಸಿ ಯವರು ನಿಮಗೆ ಏಕೆ ಕೊಡಬೇಕು? ರಾಜ್ಯ ಸರ್ಕಾರದ ನಿಧಿ ಇಲ್ಲವೇ? ಎ.ಪಿ.ಎಂ.ಸಿ.ಯಿಂದ ಎಷ್ಟು ಸಂಗ್ರಹವಾಗಿದೆ ಎನ್ನುವುದಕ್ಕೆ ಇವರು ಉತ್ತರ ಕೊಡಬೇಕು. ನಿನ್ನೆ ಅವರು ಬಹಳ ಗಾಬರಿಯಾದರು. ಅದಕ್ಕಾಗಿ ಹೇಳುತ್ತಿದ್ದೇನೆ. ಗಾಬರಿ ಏಕೆ ಆಗಬೇಕು? ಅವರದೇ ಸರ್ಕಾರವಿದೆ. ಮುಖ್ಯಮಂತ್ರಿಗಳಿದ್ದರು. ರೈತರಿಗೆ ತೊಂದರೆಯಾಗಿದ್ದರೆ ರಾಜ್ಯ ಸರ್ಕಾರದ ರೊಕ್ಕ ಹಾಕಲಿ. ಆಂಧ್ರಪ್ರದೇಶದಲ್ಲಿ ಏನಾಗಿದೆ? ನಿನ್ನೆ ಅವರು ಉದ್ವೇಗದಿಂದ ವರ್ತಿಸದೇ ಸಮಾಧಾನದಿಂದ ವಿಚಾರ ಮಾಡಬೇಕಾಗಿತ್ತು. ಡಬ್ಲ್ಯು.ಟಿ.ಓ. ಬಗ್ಗೆ, ಗ್ಯಾಟ್ ಬಗ್ಗೆ ಮಾತನಾಡುತ್ತಾರೆ ಎಂದು ಮುಖ್ಯಮಂತ್ರಿಗಳು ಹೇಳುತ್ತಾರೆ. ಆದರೆ ಡಬ್ಲ್ಯು.ಟಿ.ಓ.ಗೆ ಸೈನ್ ಮಾಡಿದವರು ಯಾರು, ಗ್ಯಾಟಿಗೆ ಸೈನ್ ಮಾಡಿದವರು ಯಾರು ಎನ್ನುವ ಬಗ್ಗೆ ವಿಚಾರ ಮಾಡುವುದಿಲ್ಲ. ಡಬ್ಲ್ಯು.ಟಿ.ಓ. ದಿಂದ ಎಫೆಕ್ಟ್ ಆಗಿದೆ, ರೈತರಿಗೆ ತೊಂದರೆಯಾಗಿದೆ. ಅದರ ಬಗ್ಗೆ ಚರ್ಚೆಯಾಗಲಿ. ಡಬ್ಲ್ಯು.ಟಿ.ಓ. ದಿಂದ, ಗ್ಯಾಟ್ ಒಪ್ಪಂದದಿಂದ ರೈತರಿಗೆ ತೊಂದರೆಯಾಗಿರುವ ಬಗ್ಗೆ ತೀವ್ರವಾದಂಥ ಚರ್ಚೆಯಾಗಬೇಕು ಎಂದು ನಾನು ಹಿಂದಿನ ಅಧಿವೇಶನದಲ್ಲೇ ಹೇಳಿದ್ದೆ. ಒಂದು ವಾರ ಅಧಿವೇಶನ ಕರೆಯಿರಿ, ಆಗ ಬೇರೆ ಯಾವುದೇ ವಿಷಯ ಮಾತನಾಡುವುದು ಬೇಡ, ಇದರ ಬಗ್ಗೆ ಚರ್ಚೆ ಮಾಡಿ, ಇದಕ್ಕೆ ಪರಿಹಾರವನ್ನು

ಹುಡುಕೋಣ ಎಂದು ಹೇಳಿದ್ದೆ. ಡಬ್ಲ್ಯು.ಟಿ.ಓ. ಅಗ್ರಿಮೆಂಟ್‌ನಿಂದ ಹೊರಬರಬೇಕಾದರೆ ಏನು ಮಾಡಬೇಕು ಎಂದು ನಾವೆಲ್ಲರೂ ಸೇರಿ ಚಿಂತನೆ ಮಾಡೋಣ. ಡಬ್ಲ್ಯು.ಟಿ.ಓ. ಮತ್ತು ಗ್ಯಾಟ್ ಒಪ್ಪಂದದಿಂದ ರೈತರಿಗೆ ಮತ್ತು ಕೃಷಿ ಉತ್ಪನ್ನಗಳಿಗೆ ತೊಂದರೆಯಾಗಿದೆ. ಈ ಬಗ್ಗೆ ನಾವೆಲ್ಲರೂ ಸೇರಿ ಪ್ರಧಾನ ಮಂತ್ರಿಗಳ ಬಳಿಗೆ ಹೋಗೋಣ. ಇದರ ಬಗ್ಗ ಚರ್ಚೆಯಾಗಲಿ, ಇದರ ಬಗ್ಗೆ ಒಂದು ರೆಸೊಲ್ಯೂಷನ್ ಮಾಡೋಣ. ಇದರ ಅಡ್ವಾಂಟೇಜ್ ಏನು, ಡಿಸ್-ಅಡ್ವಾಂಟೇಜ್ ಏನು, ಪರಿಣಾಮವೇನು ಎನ್ನುವ ಬಗ್ಗೆ ಒಂದು ರೆಸೊಲ್ಯೂಷನ್ ಮಾಡಿ ಕೇಂದ್ರ ಸರ್ಕಾರದ ಬಳಿ ಹೋಗೋಣ. ಅದಕ್ಕೆ ಇವರು ತಯಾರಿದ್ದಾರೆಯೇ? ರೈತರಿಗೆ ತೊಂದರೆ ಆಗುವುದಾದರೆ ಯಾವುದೇ ಸರ್ಕಾರಕ್ಕಾದರೂ ಸರಿ ಹೇಳಲು ನಾವು ತಯಾರಾಗಬೇಕಾಗುತ್ತದೆ. ಅದು ಬಿಟ್ಟು ಸುಮ್ಮನೆ ಎಂದು ಹೇಳಿಕೆ ಕೊಡುವುದು, ಎಲ್ಲ ಕೇಂದ್ರದ ಜವಾಬ್ದಾರಿ, ಕೇಂದ್ರದ ಆಮದು ನೀತಿ ಹಾಗಿದೆ, ಹೀಗಿದೆ ಎಂದು ಹೇಳುವುದು ಸರಿಯೇ? ನಿನ್ನೆ ಯಶವಂತ ಸಿನ್ಹಾರವರು ಮಂಡಿಸಿದ ಬಜೆಟ್ ಅನ್ನು ನಾವು ನೋಡಿದ್ದೇವೆ. ಆಮದಾಗುವಂಥ ಉತ್ಪನ್ನಗಳ ಮೇಲೆ ಹೆಚ್ಚಿನ ಸುಂಕವನ್ನು ಹಾಕಿದ್ದಾರೆ. ಡಬ್ಲ್ಯು.ಟಿ.ಓ. ಎಫೆಕ್ಟ್‌ನಿಂದ ಹೊರ ಬರಬೇಕು ಎನ್ನುವ ಉದ್ದೇಶದಿಂದ ಆಮದಾಗುವಂಥ ಆಹಾರ ಪದಾರ್ಥಗಳ ಮೇಲೆ ಹೆಚ್ಚಿನ ಅಂಥರೆ ಮ್ಯಾಕ್ಸಿಮಂ ಎಷ್ಟು ಸುಂಕ ವಿಧಿಸಲು ಸಾಧ್ಯವೋ ಅಷ್ಟು ಸುಂಕವನ್ನು ವಿಧಿಸಿದ್ದಾರೆ. ಹೀಗಾಗಿ ಇವತ್ತು ಕೇಂದ್ರ ಸರ್ಕಾರವೂ ಇದರ ಬಗ್ಗೆ ಪ್ರಯತ್ನ ಮಾಡುತ್ತಿದೆ, ವಿಚಾರ ಮಾಡುತ್ತಿದೆ. ಇದರಿಂದ ರೈತರಿಗೆ ಮತ್ತು ರೈತರ ಉತ್ಪನ್ನಗಳಿಗೆ ತೊಂದರೆಯಾಗುತ್ತಿದೆ, ಡಬ್ಲ್ಯು.ಟಿ.ಓ. ಎಫೆಕ್ಟ್‌ನಿಂದ ಹೊರಬರಲು ಏನು ಮಾಡಬೇಕು, ಅದಕ್ಕೆ ಪರಿಹಾರವೇನು ಎನ್ನುವ ಬಗ್ಗೆ ಚಿಂತನೆ ನಡೆಯುತ್ತಿದೆ. ಇವತ್ತು ಡಬ್ಲ್ಯು.ಟಿ.ಓ. ಪರವಾಗಿ ನಾವ್ಯಾರೂ ಮಾತನಾಡುತ್ತಿಲ್ಲ. ಡಬ್ಲ್ಯು.ಟಿ.ಓ. ದಿಂದ ರೈತರು ಬೆಳೆದಂಥ ಬೆಳೆಯ ಬೆಲೆಯ ಪರಿಣಾಮ ಏನಾಗುತ್ತಿದೆ ಎನ್ನುವ ಚಿಂತನೆ ನಡೆಯುತ್ತಿದೆ, ನಡೆಯಬೇಕು. ಈ ಚಿಂತನೆ ವ್ಯಾಪಕವಾಗಿ ನಡೆಯಲಿ. ಆದರೆ, ನಮ್ಮ ರಾಜ್ಯದಲ್ಲಿ ರೈತರು ಬೆಳೆದಂಥ ಯಾವುದೇ ಉತ್ಪನ್ನಗಳಿಗೆ ಬೆಲೆ ಇಲ್ಲ. ನಮ್ಮ ರಾಜ್ಯದ ರೈತರ ಹಿತದ ಸಲುವಾಗಿ ಕೇಂದ್ರ ಸರ್ಕಾರ ಎಫ್.ಸಿ.ಐ. ಮುಖಾಂತರ 200 ಕೋಟಿ ರೂಪಾಯಿಗಳ ಹಣವನ್ನು ನೀಡಿ ರೈತರ ಉತ್ಪನ್ನಗಳನ್ನು ಖರೀದಿ ಮಾಡಿದೆ. ಹಾಗಾದರೆ ನಮ್ಮ ರಾಜ್ಯ ಸರ್ಕಾರದ ಕೆಲಸವೇನು? ನಮ್ಮ ರಾಜ್ಯ ಸರ್ಕಾರ ಎಷ್ಟು ಖರೀದಿ ಮಾಡಿದೆ ಎಂಬುದನ್ನು ಅಂಕಿಅಂಶಗಳ ಸಹಿತ ಕೊಡಬೇಕು. ಮೊದಲು ಮಾನ್ಯ ಮುಖ್ಯಮಂತ್ರಿಗಳು 100 ಕೋಟಿ ರೂಪಾಯಿಗಳ ಅವರ್ತ ನಿಧಿಯನ್ನು ಮಾಡುತ್ತೇವೆಂದು ಹೇಳಿದ್ದರು. ಆಮೇಲೆ ಏಕೆ ಹಿಂದಕ್ಕೆ ಸರಿದರೋ ಗೊತ್ತಾಗಿಲ್ಲ. ಅನಂತರ 100ಕೋಟಿ ರೂಪಾಯಿಗಳ ಅವರ್ತ ನಿಧಿ ಬದಲು ಅದನ್ನು 75 ಕೋಟಿ ರೂಪಾಯಿಗಳಿಗೆ ಇಳಿಸಿ ಮೂರು ನಾಲ್ಕು ತಿಂಗಳ ಹಿಂದೆ ಅನೌನ್ಸ್ ಮಾಡಿದರು. ಈ 75 ಕೋಟಿ ಕೋಟಿ ರೂಪಾಯಿಗಳ ಆವರ್ತ ನಿಧಿಯಲ್ಲಿ 50 ಕೋಟಿ ರೂಪಾಯಿಗಳು ಎಪಿ ಎಂಸಿ ಯಿಂದ ಮತ್ತು ಮತ್ತು 25 ಕೋಟಿ ರೂಪಾಯಿಗಳು ರಾಜ್ಯಸರ್ಕಾರದಿಂದ ಎಂದು ನಿರ್ಧರಿಸಿ ಮಾಡಿದ್ದಾರೆ. ಎ.ಪಿ ಎಂ.ಸಿ ಯಲ್ಲಿ ಕೆಲವು ಶ್ರೀಮಂತ ಮತ್ತು ಇನ್ನು ಕೆಲವು ಬಡ ಸಂಸ್ಥೆಗಳು ಇವೆ. ಕೆಲವೊಂದು ಬಡ ಎಪಿ ಎಂಸಿಗಳು ತಮ್ಮ ಆರ್ಥಿಕ ಪರಿಸ್ಥಿತಿ ಸರಿಯಿಲ್ಲದ ಕಾರಣ ಈ ಹಣವನ್ನು ಒದಗಿಸುವುದಕ್ಕೆ

ಒದ್ದಾಡುತ್ತಿವೆ. ಇಂಥ ಎಪಿಎಂಸಿಗಳಿಗೆ ಕೆಲವೊಂದು ಅಭಿವೃದ್ಧಿ ಕಾರ್ಯಚಟುವಟಿಕೆಗಳನ್ನು ಮಾಡಲಿಕ್ಕೆ ಅವುಗಳಿಗೇ ಹಣ ಇಲ್ಲ. ಎಲ್ಲಾ ಎಪಿಎಂಸಿಯುವರು 50 ಕೋಟಿ ರೂಪಾಯಿಗಳನ್ನು ಅವರ್ತ ನಿಧಿಗೆ ಕೊಡಬೇಕೆಂದು ಹೇಳಿದಾಗ, ಅವರು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳಿದರು. ಎಲ್ಲಾ ಎಪಿಎಂಸಿ ಅಧ್ಯಕ್ಷರ ಮೀಟಿಂಗ್ ಕರೆಸಿ ಅಲ್ಲಿ ಸಭೆ ನಡೆಸಿದ ಸಂದರ್ಭದಲ್ಲಿ, ನಾವು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿದರು. ಆ ಮೇಲೆ ಸೆಕ್ಷನ್ 126 'ಎ' ಪ್ರಕಾರ ಸರ್ಕಾರ ಆರ್ಡಿನೆನ್ಸ್ ತಂದು, ನಿಮ್ಮನ್ನು ಸೂಪರ್‌ಸೀಡ್ ಮಾಡುತ್ತೇವೆಂದು ಹೇಳಿ, ಆಮೇಲೆ ಮೂರನೇ ಎರಡು ಮೆಜಾರಿಟಿ ಇದ್ದುದನ್ನು 50 ಪರ್ಸೆಂಟ್‌ಗೆ ಇಳಿಸಿದರು. ಇದನ್ನು ಏಕೆ ಮಾಡಿದರು ಎಂದರೆ ಮೆಜಾರಿಟಿ ಇದ್ದೆ ನೊ ಕಾನ್‌ಫಿಡೆನ್ಸ್ ಮೋಷನ್' ತರಬಹುದು. ಇದರ ಸಲುವಾಗಿ ಸರ್ಕಾರದವರು ಆರ್ಡಿನೆನ್ಸ್ ತೆಗೆದುಕೊಂಡು ಬಂದರು. ಹೀಗಾಗಿ ಹೆದರಿಕೆಯಿಂದ ಎಪಿಎಂಸಿಯವರು ಹಣವನ್ನು ಆವರ್ತನಿಧಿಗೆ ಕೊಟ್ಟರು. ಆದರೆ ಎಷ್ಟು ಹಣ ಕೊಡಬೇಕೆಂದು ಎಪಿ ಎಂಸಿಗೆ ಟಾರ್‌ಗೆಟ್‌ಗೆ ಫಿಕ್ಸ್ ಮಾಡಿದರೋ ಅಷ್ಟು ಹಣ ಬರಲಿಲ್ಲ. ಹಾಗಾದರೆ ಇಲ್ಲಿಯವರೆಗೆ ಎ.ಪಿ. ಎಂ.ಸಿಯಿಂದ ಎಷ್ಟು ಹಣ ಸಂಗ್ರಹವಾಯಿತು? ಅದರಲ್ಲಿ ಎಷ್ಟು ಹಣ ಖರ್ಚಾಗಿದೆ? ಈ ಮಾಹಿತಿಯನ್ನು ಕೊಡಬೇಕು. ಎ.ಪಿ.ಎಂ.ಸಿ.ಯಿಂದ ಹಣ ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಏನು ಹಕ್ಕು ಇದೆ? ರಾಜ್ಯಸರ್ಕಾರದಿಂದ 25 ಕೋಟಿ ರೂಪಾಯಿಗಳನ್ನು ಆವರ್ತನಿಧಿಗೆ ಯಾವಾಗ ಕೊಡಲಾಯಿತು? ಎಷ್ಟು ಖರ್ಚಾಯಿತು ಇದರ ಅಂಕಿಅಂಶಗಳನ್ನು ಕೊಡಬೇಕು. ಎ.ಪಿ. ಎಂ.ಸಿಯಿಂದ 50 ಕೋಟಿ ರೂಪಾಯಿಗಳು ಮತ್ತು ರಾಜ್ಯ ಸರ್ಕಾರದಿಂದ 25 ಕೋಟಿ ರೂಪಾಯಿಗಳು ಹೀಗೆ ಒಟ್ಟು 75 ಕೋಟಿ ರೂಪಾಯಿಗಳ ಆವರ್ತನಿಧಿ ಇದ್ದಲ್ಲಿ ಕಳೆದ ಮೂರು ತಿಂಗಳುಗಳಲ್ಲಿ ಎಷ್ಟು ಹಣವನ್ನು ಖರ್ಚು ಮಾಡಿದಿರಿ, ಎಷ್ಟು ಉತ್ಪನ್ನಗಳನ್ನು ಖರೀದಿ ಮಾಡಿದಿರಿ ಎಂಬುದರ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಬೇಕು. ಆಗ ರೈತರ ಸಲುವಾಗಿ ಏನು ಮಾಡಿದ್ದಾರೆಂಬ ರಾಜ್ಯಸರ್ಕಾರದ ಹಣೆಬರಹ ಸಾರ್ವಜನಿಕರಿಗೆ, ರೈತರಿಗೆ ಗೊತ್ತಾಗುತ್ತದೆ. ಆದರೆ ನೀವು ಶ್ವೇತಪತ್ರವನ್ನು ಹೊರಡಿಸುತ್ತಿಲ್ಲ. ನಿಮ್ಮ ಸರ್ಕಾರದ ಈ ಆವರ್ತನಿಧಿ ಇನ್ನೂ ಕೂಡ ಅಸ್ತಿತ್ವಕ್ಕೆ ಬಂದಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಈ ರಾಜ್ಯಸರ್ಕಾರ ಆವರ್ತನಿಧಿಗೆ 25 ಕೋಟಿ ರೂಪಾಯಿಗಳನ್ನು ಇವತ್ತಿನವರೆಗೆ ಕೊಟ್ಟಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ರಾಜ್ಯದಲ್ಲಿ ರೈತರು ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಸಿಗದೆ ರೈತರ ಹಾಹಾಕಾರ ನಡೆದಿದೆ. ರಾಜ್ಯಸರ್ಕಾರಕ್ಕೆ 75 ಕೋಟಿ ರೂಪಾಯಿಗಳ ಸಂಗ್ರಹ ಮಾಡುವುದಕ್ಕಾಗದಿದ್ದರೂ ಸಹ ಕೇಂದ್ರ ಸರ್ಕಾರದ ಮೇಲೆ ಬೊಟ್ಟು ಮಾಡಿ ತೋರಿಸುತ್ತಿದ್ದೀರಿ. 'ನಾವು 75 ಕೋಟಿ ರೂಪಾಯಿಗಳನ್ನು ಆವರ್ತನಿಧಿಗೆ ಕೊಟ್ಟಿದ್ದೇವೆ, ನೀವು 100 ಕೋಟಿ ರೂಪಯಿಗಳನ್ನು ಆವರ್ತನಿಧಿಗೆ ಕೊಡಬೇಕೆಂದು' ಕೇಂದ್ರ ಸರ್ಕಾರಕ್ಕೆ ರಾಜ್ಯಸಾರ್ಕರದವರು ಕೇಳಿದ್ದಾರೆ. ಬಹುಶಃ ಇಡೀ ದೇಶದಲ್ಲಿ ಈ ರೀತಿ ಕೇಳಿರುವುದು ಯಾವುದಾದರೂ ಉದಾಹರಣೆ ಇದೆಯೇ? ಈ ಆವರ್ತನಿಧಿಗೆ ಕೇಂದ್ರ ಸರ್ಕಾರ ಕಾಂಟ್ರಿಬ್ಯೂಷನ್ ಮಾಡಬೇಕು, ಮೆಕ್ಕೆಜೋಳವನ್ನು ಖರೀದಿ ಮಾಡುವ ಅವಧಿ ಇವತ್ತಿಗೆ ಮುಗಿಯುತ್ತದೆ, ಆ ಅವಧಿಯನ್ನು ವಿಸ್ತರಣೆ ಮಾಡಬೇಕು ಇಲ್ಲದಿದ್ದರೆ ಲಾ ಅಂಡ್ ಪ್ರಾಬ್ಲಮ್ ಆಗುತ್ತದೆ ಎಂದು ರಾಜ್ಯ ಸರ್ಕಾರದಿಂದ ಹೇಳುತ್ತಿದ್ದೀರಿ. ಲಾ ಅಂಡ್ ಆರ್ಡರ್‌ರನನ್ನು

ಮೈನ್‌ಟೈನ್ ಮಾಡುವುದು ರಾಜ್ಯಸರ್ಕಾರದ ಜವಾಬ್ದಾರಿಯಲ್ಲವೇ? ರೈತರ ಬಗ್ಗೆ ಕಾಳಜಿ ವಹಿಸಿ ಕೆಲಸ ಮಾಡುವಂಥದ್ದು ನಿಮ್ಮ ಸರ್ಕಾರದ ಜವಾಬ್ದಾರಿಯಾಗಿದೆ. ಏನದರೂ ತೊಂದರೆ ಆಗಿದ್ದರೆ ಎಲ್ಲರೂ ಸೇರಿ ಕೇಂದ್ರ ಸರ್ಕಾರವನ್ನು ಕೇಳೋಣ. ಆದರೆ ಇಲ್ಲಿ ರಾಜ್ಯ ಸರ್ಕಾರ ಯಾವುದೇ ಜವಾಬ್ದಾರಿಯಿಂದ ತನ್ನ ಕರ್ತವ್ಯವನ್ನು ನಿರ್ವಹಿಸದೆ ಪ್ರತಿಯೊಂದಕ್ಕೂ ಕೇಂದ್ರಸರ್ಕಾರದ ಮೇಲೆ ಬೊಟ್ಟು ಮಾಡಿ ತೋರಿಸುವಂಥ ವರ್ತನೆ ಏನಿದೆ ಅದು ಸರಿಯಲ್ಲ. ಇವತ್ತು ಆಂಧ್ರಪ್ರದೇಶದಲ್ಲಿ ಆವರ್ತನಿಧಿಗೆ 70 ಪರ್ಸೆಂಟ್ ಹಣವನ್ನು ಆ ರಾಜ್ಯ ಸರ್ಕಾರದವರೇ ಕಾಂಟ್ರಿಬ್ಯೂಷನ್ ಮಾಡುತ್ತಿದ್ದಾರೆ., 30 ಪರ್ಸಂಟ್ ಹಣವನ್ನು ಕೇಂದ್ರ ಸರ್ಕಾರದವರು ಕಾಂಟ್ರಿಬ್ಯೂಷನ್ ಮಾಡುತ್ತಿದ್ದಾರೆ. ಆಂಧ್ರಪ್ರದೇಶದಲ್ಲಿ ಆ ರಾಜ್ಯಸರ್ಕಾರದವರು ರೈತರ ಉತ್ಪನ್ನಗಳನ್ನು ಖರೀದಿಮಾಡುತ್ತಿದ್ದು ಅಲ್ಲಿ ರೈತರ ಸಮಸ್ಯೆಗಳಿಗೆ ಸಾಕಷ್ಟು ಪರಿಹಾರ ಸಿಕ್ಕಿದೆ. ಆದರೆ ಇಲ್ಲಿ ಏಕೆ ಅದು ಆಗುತ್ತಿಲ್ಲ? ನಿಮ್ಮ ರಾಜ್ಯಸರ್ಕಾರದ ಜವಾಬ್ದಾರಿ ಏನೂ ಬೇಡವೇ? ರೈತರ ಬಗ್ಗೆ ಬೆಳಿಗ್ಗೆಯಿಂದ ಸಂಜೆಯವರೆಗೆ ಮಾತನಾಡುತ್ತೀರಿ ಆದರೆ ಜವಾಬ್ದಾರಿಯಿಂದ ಏನೂ ಕೆಲಸವನ್ನು ಮಾಡುವುದಿಲ್ಲ. ರೈತರ ಉತ್ಪನ್ನವನ್ನು ಎಫ್‌ಸಿಐ ಮುಖಾಂತರ ಕೇಂದ್ರದವರು ಮಾಡಬೇಕೇ? ರಾಜ್ಯಸರ್ಕಾರದ ಜವಾಬ್ದಾರಿ ಏನೂ ಇಲ್ಲವೇ? ಖರೀದಿ ಕೇಂದ್ರದಿಂದ ಮಂದಗತಿಯಲ್ಲಿ ಖರೀದಿ ಎಂದು ಪತ್ರಿಕೆಯಲ್ಲಿ ಬಂದಿದೆ, ಕೇಳಿದರೆ ಸಿಬ್ಬಂದಿ ಇಲ್ಲ, ಹಮಾಲರು ಇಲ್ಲ, ಲಾರಿ ಸಿಗುವುದಿಲ್ಲ ಎಂದು ಹೆಳುತ್ತಾರೆ. ಹಾಗಾದರೆ ರಾಜ್ಯಸರ್ಕಾರದ ಜವಾಬ್ದಾರಿ ಏನು? ಇವೆಲ್ಲ ಸಮಸ್ಯೆ ಬಗೆಹರಿಸುವುದಕ್ಕೆ ಆಗದ ಮೇಲೆ ಅಲ್ಲಿಗೆ ಉಸ್ತುವಾರಿ ಸಚಿವರು ಏಕೆ ಇರಬೇಕು? ಅಲ್ಲಿ ಅಧಿಕಾರಿಗಳು ಏಕೆ ಇದ್ದೀರಿ? ಜಿಲ್ಲಾಧಿಕಾರಿಗಳು ಏಕೆ ಇದ್ದೀರಿ? ಐ.ಟಿ. ಬಗ್ಗೆ, ಕಂಪ್ಯೂಟರ್ ಬಗ್ಗೆ ಹೈಟೆಕ್ ಬಗ್ಗೆ ಮಾತನಾಡುವಂಥ ಸರ್ಕಾರಕ್ಕೆ ಇವತ್ತು ನಾಲ್ಕು ಸಿಬ್ಬಂದಿಯನ್ನು ನೇಮಕ ಮಾಡುವುದಕ್ಕೆ ಆಗುವುದಿಲ್ಲ, ಉತ್ಪನ್ನಗಳ ಸಾಗಾಣಿಕೆಗೆ ಕಡೆಯ ಪಕ್ಷ 50 ಲಾರಿಗಳನ್ನು ಅರೇಂಜ್ ಮಾಡುವುದಕ್ಕಾಗುವುದಿಲ್ಲ. ಇವು ಇದ್ದರೆ ಲಿಫ್ಟ್ ಮಾಡುವುದಕ್ಕಾಗುತ್ತಿಲ್ಲ. ರೈತರು ಬೆಳೆದಂಥ ಉತ್ಪನ್ನ ತಿಂಗಳಗಟ್ಟಲೆ ಹೊಲದಲ್ಲಿ ಬಿದ್ದಿರುತ್ತದೆ ಇಂಥ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಆಗದಿರುವ ಸರ್ಕಾರ ಇನ್ನು ಹೈಟೆಕ್ ಬಗ್ಗೆ ಮಾತನಾಡುವುದರಲ್ಲಿ ಏನು ಪ್ರಯೋಜನ ಆಗುತ್ತದೆ. ಇತ್ತೀಚೆಗೆ ಎಲ್ಲಾ 700 ಹೋಬಳಿಗಳಿಗೆ 'ರೈತ ಮಿತ್ರ' ಎಂದು ಒಂದೊಂದು ಕಂಪ್ಯೂಟರ್ ಸರ್ಕಾರದಿಂದ ಕೊಟ್ಟಿದ್ದಾರೆ. ಅದರಲ್ಲಿ ಈ ದೇಶದ್ದು, ನಾಡಿದ್ದು ಎಲ್ಲಾ ಮಾಹಿತಿ ಸಿಗುತ್ತದೆ ಎಂದು ಹೇಳಿದ್ದಾರೆ. ಅದನ್ನು ತೆಗೆದುಕೊಂಡು ಆ ರೈತ ಏನು ಮಾಡಬೇಕು? ಈ ಸರ್ಕಾರದಿಂದ ಒಂದು ಖರೀದಿ ಕೇಂದ್ರವನ್ನು ಸರಿಯಾಗಿ ಮೈನ್‌ಟೈನ್ ಮಾಡುವುದಕ್ಕಾಗುತ್ತಿಲ್ಲ, ಇನ್ನು ರೈತ ಮಿತ್ರ ಎನ್ನುವ ಕಂಪ್ಯೂಟರ್ ಇಟ್ಟುಕೊಂಡು ರೈತ ಏನು ಮಾಡುತ್ತಾನೆ? ಅದನ್ನು ಹಾಳು ಬಾವಿಗೆ ಎಸೆಯಿರಿ . ರೈತ ಮಿತ್ರ ಎಂದು ಮಾಡಿ ಅದಕ್ಕೆ ಒಂದು ಕಚೇರಿಯನ್ನು ಪ್ರಾರಂಭ ಮಾಡಿದಿರಿ. ಆದರೆ ಆ ಕಚೇರಿಯಲ್ಲಿ ಮೇಜು ಇಲ್ಲ, ಕುರ್ಚಿ ಇಲ್ಲ, ಸಿಬ್ಬಂದಿ ಇಲ್ಲ. ಕೇವಲ ಹೆಸರಿಗೆ ಒಂದು ಯೋಜನೆ ಎಂದು ಮಾಡಿದ್ದೀರಿ. ಅದರ ಹೆಸರಿನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಇಡುವುದು ಇದೆ.

ಶ್ರೀ ಡಿ.ವಿ.ಸದಾನಂದ ಗೌಡ:- ಅದು ರೈತ ಮಿತ್ರ, ಇತ್ತಕಡೆ ಸರ್ಕಾರ ರೈತರ ಶತ್ರು.

ಶ್ರೀ ಸಿ.ಎಸ್.ನಾಡಗೌಡ:- ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಬಳಸತಕ್ಕಂಥ ಪದ ಅಷ್ಟು ಸರಿಯಿಲ್ಲ. ಸರ್ಕಾರ ಇಟ್ಟಂಥ ಹೆಸರು ಅದು ' ರೈತ ಮಿತ್ರ' ಅಥವಾ ಯಾವುದೇ ಪದ ಇರಲಿ, ರೈತರ ದ್ರೋಹಿಗಳು ಅಥವಾ ವಿರೋಧಿಗಳು ಎಂದು ಹೇಳುವುದರಲ್ಲಿ ಅರ್ಥ ಇದೆಯೇ ಎಂದು ಯೋಚನೆ ಮಾಡಬೇಕು. ಸರ್ಕಾರ ಯಾವ ಉದ್ದೇಶದಿಂದ ಈ ಯೋಜನೆಯನ್ನು ಪ್ರಾರಂಭ ಮಾಡಿದೆ ಎನ್ನುವುದನ್ನು ಸ್ವಲ್ಪ ತಿಳಿದುಕೊಳ್ಳಬೇಕಾಗುತ್ತದೆ. ಇವತ್ತು ರೈತ ಎಷ್ಟು ಪ್ರಮಾಣದಲ್ಲಿ ಬಿಳಿಜೋಳ ಬೆಳೆಯಬೇಕು, ಗೋಧಿ ಎಷ್ಟು ಪ್ರಮಾಣದಲ್ಲಿ ಬೆಳೆಯಬೇಕು, ತೊಗರಿ ಎಷ್ಟು ಪ್ರಮಾಣದಲ್ಲಿ ಬೆಳೆಯಬೇಕು ಎನ್ನುವುದು ಗೊತ್ತಿಲ್ಲ. ರೈತರಿಗೆ ಆ ಮಾಹಿತಿಯನ್ನು ಒದಗಿಸುವಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ ಆ ರೈತಮಿತ್ರ ಯೋಜನೆಯ ಕೇಂದ್ರಗಳು ಪ್ರಾರಂಬವಾದ ಮೇಲೆ ಉತ್ತರವನ್ನು ರೈತರು ನಿಮಗೆ ಕೊಡುತ್ತಾರೆ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಈ ಸರ್ಕಾರದವರು ಕಂಪ್ಯೂಟರ್‌ನಲ್ಲಿಯೇ ಆಡಳಿತ ಮಾಡುವರು. ವಿರೋಧ ಪಕ್ಷದ ನಾಯಕರು ಸರ್ಕಾರಕದಕೆ ಪತ್ರ ಬರೆದರೆ ಅದಕ್ಕೆ ಉತ್ತರ ಕೊಡಲಿಕ್ಕೆ ಸಂಬಂಧಪಟ್ಟ ಕಾರ್ಯದರ್ಶಿ ಐದು ತಿಂಗಳ ಕಾಲಾವಕಾಶ ತೆಗೆದುಕೊಳ್ಳುತ್ತಾರೆ. ಹೈಟೆಕ್ ಆಡಳಿತ ಯಾವ ರೀತಿ ನಡೆಯುತ್ತಿದೆ ಎಂದು ಇದರಿಂದ ಗೊತ್ತಾಗುತ್ತಿದೆಯಲ್ಲವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಇತ್ತೀಚೆಗೆ ಖರೀದಿ ಕೇಂದ್ರ ರಾಯಚೂರಿನಲ್ಲಿ ಪ್ರಾರಂಭವಾಯಿತು. '' ರಾಯಚೂರಿನಲ್ಲಿ 15 ದಿನಗಳಲ್ಲಿಯೇ ಮುಚ್ಚಿದ ಖರೀದಿ ಕೇಂದ್ರ'' ಎಂದು ಪತ್ರಿಕೆಯಲ್ಲಿ ಬಂದಿದೆ. ಪ್ರಾರಂಭ ಮಾಡಿದ ಹದಿನೈದು ದಿವಸಗಳಲ್ಲಿ ಆ ಕೇಂದ್ರವನ್ನು ಸರ್ಕಾರದಿಂದ ಮುಚ್ಚಿಬಿಟ್ಟರು. ಏಕೆಂದರೆ, ಖರೀದಿ ಮಾಡಿದ ಪಕ್ಷದಲ್ಲಿ ರೈತರಿಗೆ ಪೇಮೆಂಟ್ ಮಾಡುವುದಕ್ಕೆ ಹಣವೇ ಇಲ್ಲ. 75 ಕೋಟಿ ರೂಪಾಯಿಗಳ ಅವರ್ತನಿಧಿ ಬಗ್ಗೆ ಹೇಳಿಬಿಟ್ಟರೆ ರಾಜ್ಯ ಸರ್ಕಾರದ ಗತಿ ಮುಗಿದುಹೋಗಿಬಿಡುತ್ತದೆ ಇಲ್ಲಿಯತನಕ ಏನು ಖರೀದಿ ಕೇಂದ್ರಗಳನ್ನು ತೆರೆದಿದ್ದಾರೆ ಅದರ ಬಗ್ಗೆ ಏನಾಗಿದೆ ಎಂಬುದರ ಕತೆ ಸರ್ಕಾರದ ಕಡೆಯಿಂದ ಹೇಳಲಿ. ಮುಂದೆ ಭತ್ತದ ಖರೀದಿ ಕೇಂದ್ರವನ್ನು ತೆರೆಯಬೇಕಾಗುತ್ತದೆ. ಭತ್ತ ಮಾರುಕಟ್ಟೆಗೆ ಬರುವುದಕ್ಕೆ ಪ್ರಾರಂಭವಾಗಿದೆ, ಆದರೆ ಇನ್ನೂ ಸರ್ಕಾರದ ಕಡೆಯಿಂದ ಖರೀದಿ ಕೇಂದ್ರಗಳನ್ನು ತೆರೆಯುವುದಕ್ಕೆ ಪ್ರಾರಂಭ ಮಾಡಿಲ್ಲ. ಬಿಳಿ ಜೋಳ ಇನ್ನುಮೇಲೆ ಮಾರುಕಟ್ಟೆಗೆ ಬರುವುದಕ್ಕೆ ಪ್ರಾರಂಭವಾಗುತ್ತದೆ. ಇದರ ಬಗ್ಗೆ ಸರ್ಕಾರದ ಕಡೆಯಿಂದ ಸರಿಯಾದ ಯೋಜನೆ ಇಲ್ಲ. ನಮ್ಮ ಕಡೆ ಜಿಲ್ಲಾಧಿಕಾರಿಯನ್ನು ಹೋಗಿ ಕೇಳಿದರೆ, ಗೋಡ್‌ನ್ ಇಲ್ಲ, ಲಾರಿಗಳು ಸಿಗುತ್ತಿಲ್ಲ ಎಂದು ಹೇಳುತ್ತಾರೆ. ಆಡಳಿತದಲ್ಲಿ ಇರುವಂಥವರು ಏನುರೈತ ವಿರೋಧಿ ನೀತಿಯನ್ನು ಅನುಸರಿಸುತ್ತಿದ್ದಾರೆ ಅದೇ ರೀತಿ ಅಧಿಕಾರಿಗಳು ಸಹಿತ ನಡೆದುಕೊಳ್ಳುತ್ತಿದ್ದಾರೆ. ಬೆಳಗಾಂನಲ್ಲಿ

ಬಹಳಷ್ಟು ಸ್ಮಗ್ಲಿಂಗ್ ನಡೆಯುತ್ತಿದೆ, ಇಲಿ ಸಿಟ್ ಲಿಕ್ಕರ್ ಬರುತ್ತಿದೆ, ಇದು ಗೋವಾ ಬೆಳಗಾಂ ಕಡೆಯಿಂದ ಬರುತ್ತಿದೆ. ಆದರೆ ಬೆಳಗಾಂನಲ್ಲಿರತಕ್ಕಂಥ ಎಸ್‌ಪಿ ಯವರು ಇಂಥ ಸ್ಮಂಗ್ಲಿಂಗ್ ಸರಕುಗಳನ್ನು ಆಗಲೀ, ಕಲಬೆರಕೆ ಹೆಂಡವನ್ನಾಗಲಿ ಮಾರುವವರನ್ನು ಹಿಡಿಯುವುದಿಲ್ಲ. ಆದರೆ, ಯಾರೋ ನಾಲ್ಕೈದು ಜನ ರೈತರು ಚಕ್ಕಡಿ ಮೇಲೆ ಹುಲ್ಲು ತೆಗೆದುಕೊಂಡು ಹೋದರೆ ಅಲ್ಲಿಗೆ ಸ್ವತಃ ಎಸ್.ಪಿ ಯವರೇ ಹೋಗಿ ರಾಷ್ಟ್ರೀಯ ಹೆದ್ದಾರಿ ಮೇಲೆ ಚಕ್ಕಡಿಯಲ್ಲಿ ಹುಲ್ಲು ತೆಗೆದುಕೊಂಡು ಹೋಗುವುದು ತಪ್ಪು. ರಸ್ತೆ ಬ್ಲಾಕ್ ಮಾಡುತ್ತಿದ್ದೀರಿ ಎಂದು ದಂಡ ಹಾಕುತ್ತಾರೆ. ನಮ್ಮ ಮಾನ್ಯ ಶಾಸಕರಾದ ಕಡೋಲ್ಕರ್‌ರವರು ರಾತ್ರಿ 12 ಗಂಟೆಗೆ ಅಲ್ಲಿಯ ಎಸ್.ಪಿ.ಯವರ ಹತ್ರಿ ಡೆಲಿಗೇಷನ್ ತೆಗೆದುಕೊಂಡು ಹೋಗುತ್ತಾರೆ. '' ಹೌದು ರೈತರು ತಪ್ಪು ಮಾಡಿದ್ದಾರೆ,

4.40 ಪಿ.ಎಂ.

ಅದಕ್ಕೆ ನಾನು ದಂಡ ಹಾಕಿದ್ದೇನೆ '' ಎಂದು ಹೇಳುತ್ತಾರೆ. ವಾರ್ನಿಂಗ್ ಮಾಡಿ ಬಿಡಿ, ರೈತರಿಗೆ ದಂಡ ಕೊಡಲು ಹಣವಿಲ್ಲ ಎಂದರೆ, ಯಾರೇ ತಪ್ಪು ಮಾಡಲಿ ನಾವು ಅವರಿಗೆ ದಂಡ ಹಾಕುತ್ತೇವೆ ಎನ್ನುತ್ತಾರೆ. ಗೂಡ್ಸ್ ಸ್ಮಗ್ಲಿಂಗ್ ಮಾಡುತ್ತಾರೆ, ಬೆಳಗಾಂನಲ್ಲಿ ಇಲ್ಲಿಸಿಟ್ ಲಿಕ್ಕರ್ ಸರಬರಾಜಾಗುತ್ತದೆ, ಮರ್ಡರ್ಸ್ ಆಗುತ್ತಿವೆ, ಧಾರವಾಡ ಜಿಲ್ಲೆಯಲ್ಲಿ ಶಾಸಕರ ಮೇಲೆ ಹತ್ಯೆ ಯತ್ನಗಳಾಗುತ್ತಿವೆ, ಅಂಥವರನ್ನು ನೀವು ಹಿಡಿಯಿರಿ. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಮಾಡುವ ಕೆಲಸವನ್ನು ಒಬ್ಬ ಎಸ್.ಪಿ. ಬಂದು ರಸ್ತೆಯಲ್ಲಿ ನಿಂತು ರೈತರಿಗೆ ದಂಡ ಹಾಕುತ್ತಾರೆ. ಇದೇನು ರಾಜ್ಯ ಸರ್ಕಾರ ? ನಾನು ಅಪ್ರಿಷಿಯೇಟ್ ಮಾಡಬೇಕು. ಇಂಥ ಅಧಿಕಾರಿಗಳೂ ಇದ್ದಾರೆ. ಇದರ ಬಗ್ಗೆ ನಾನು ಆ ಎಸ್.ಪಿ. ಯವರೊಡನೆ ಮಾತನಾಡಿ, ನೀವೇ ಸ್ವತಃ ಎಸ್.ಪಿ. ಯಾಗಿದ್ದು, ರೈತರಿಗೇಕೆ ತೊಂದರೆ ಕೊಡುತ್ತೀರಿ? ಎಂದರೆ, ನಾನು ಮಾಡಿದ್ದು ಸರಿ ಎನ್ನುತ್ತಾರೆ. ಇಂಥವರು ಜನಸಾಮಾನ್ಯರ, ರೈತರ ಬಗ್ಗೆ ಯಾವ ರೀತಿ ಕಾಳಜಿ ವಹಿಸುತ್ತಾರೆ? ಅಧಿಕಾರಿಗಳ ಮೇಲೆ ಹಿಡಿತವಿಲ್ಲದಿರುವ ರಾಜ್ಯ ಸರ್ಕಾರದವಿದು. ಅಧಿಕಾರಿಗಳು ರೈತರ ಸಮಸ್ಯೆಗಳಿಗೆ ಸರಿಯಗಿ ಸ್ಪಂದಿಸುತ್ತಿಲ್ಲ. ರಾಜ್ಯ ಸರ್ಕಾರದ ನಡಾವಳಿ ಹೇಗಿದೆ ನೋಡಿ? ಸಣ್ಣಪುಟ್ಟ ಮೀನುಗಳಾದ ಕಾರಕೂನರನ್ನು ಮತ್ತು ಅಧಿಕಾರಿಗಳನ್ನು ಹಿಡಿದು ಸಸ್ಪೆಂಡ್ ಮಾಡುತ್ತಾರೆ. ಆದರೆ ಐ.ಎ.ಎಸ್ ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವುದಕ್ಕೆ ಕ್ಯಾಬಿನೆಟ್ ಡಿಸಿಷನ್ ತೆಗೆದುಕೊಂಡರೂ, ಅದನ್ನು ದಕ್ಕಿಸಿಕೊಳ್ಳುವ ಕೆಪಾಸಿಟಿ ಇವರಿಗಿಲ್ಲ. ಧಾರವಾಡ ಜಿಲ್ಲೆಯಲ್ಲಿ ಇವತ್ತು ಖರೀದಿ ಕೇಂದ್ರದ ಅನಾಹುತವಾಯಿತು, ರೈತರ ಆತ್ಮಹತ್ಯೆ ಆಯಿತು, ಖರೀದಿ ಕೇಂದ್ರಗಳು ಸರಿಯಾಗಿ ಮೈನ್‌ಟೈನ್ ಆಗಲಿಲ್ಲ, ಇದಕ್ಕೆ ಅಧಿಕಾರಿಗಳೇನು ನಿರ್ಲಕ್ಷ್ಯ ಮಾಡಿದ್ದಾರೆ. ಅವರನ್ನು ಸಸ್ಪೆಂಡ್ ಮಾಡಬೇಕೆಂದು ರಾಜ್ಯ ಸರ್ಕಾರ ಕ್ಯಾಬಿನೆಟ್‌ನಲ್ಲಿ ಡಿಸಿಷನ್ ತೆಗೆದುಕೊಂಡಿದೆ. ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ನಿಗಮದ ವ್ಯವಸ್ಥಾಪಕ ನಿರ್ದೇಶಕರಾದ ಮತ್ತು ಹಿರಿಯ ಐ.ಎ.ಎಸ್. ಅಧಿಕಾರಿಯಾದ ಶ್ರೀ ಬಿ.ಎಲ್.ಶ್ರೀಧರ್, ಧಾರವಾಡ ಜಿಲ್ಲೆಯ ಪ್ರಬಾರ ಜಿಲ್ಲಾಧಿಕಾರಿಯಾದ ಶ್ರೀ ಸಿ.ಎಸ್. ಆದೋನಿ, ಆಹಾರ ಇಲಾಖೆಯ ಜಿಲ್ಲಾ ಮ್ಯಾನೇಜರ್ ಆದ ಶ್ರೀ ಶಿವರಾಜಪ್ಪ ಈ ಮೂವರನ್ನು ಕೆಲಸದ ನಿರ್ಲಕ್ಷ್ಯದ ಮೇಲೆ ಸಸ್ಪೆಂಡ್ ಮಾಡಲು ಡಿಸಿಷನ್ ತೆಗೆದುಕೊಂಡರು.

ಅದು ಪತ್ರಿಕೆಯಲ್ಲಿಯೂ ವರದಿಯಾಯಿತು. ಮುಂದೆ, ಪತ್ರಿಕೆಯಲ್ಲಿ ವರದಿಯಾಗಿ ಒಂದು ವಾರವಾದರೂ, ಅವರಿಗೆ ನೋಟೀಸ್ ಜಾರಿಯಾಗಲಿಲ್ಲ. ಅವರಿಗೆ ಹೆದರಿಕೆ ಶುರುವಾಯಿತು. ಸಸ್ಪೆಂಡ್ ಆರ್ಡರ್ ಆದ ಮರುದಿವಸ ಪತ್ರಿಕೆಯಲ್ಲಿ ವರದಿಯಾದ ಮೇಲೆ ಐ.ಎ.ಎಸ್. ಮತ್ತು ಅಧಿಕಾರ ಲಾಬಿ ಶುರುವಾಯಿತು. ಅವರನ್ನು ಸಸ್ಪೆಂಡ್ ಮಾಡಬೇಡಿ ಮಾಡಿದರೆ ನಿಮಗೆ ಬರೋಬರಿ ಆಗುವುದಿಲ್ಲವೆನ್ನುವುದೂ ಶುರುವಾಯಿತು. ಒಂದುಕ್ಯಾಬಿನೆಟ್‌ನಲ್ಲಿ ಏನು ಡಿಸಿಷನ್ ತೆಗೆದುಕೊಂಡಿದ್ದರೋ, ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕಾಗುವುದಿಲ್ಲ. ನೋಟೀಸ್ ಜಾರಿ ಮಾಡುವುದಕ್ಕಾಗುವುದಿಲ್ಲ. ಮುಂದೆ, ಇನ್ನೊಂದು ಸಾರಿ ಕ್ಯಾಬಿನೆಟ್ ಸೇರಿತು. ಮತ್ತೊಮ್ಮೆ ಅಲ್ಲಿ ಚರ್ಚೆಯಾಯಿತು, ಕೆಲವು ಮಂತ್ರಿಗಳು ಅವರು ಒಳ್ಳೆಯವರು, ಸಸ್ಪೆಂಡ್ ಮಾಡಬೇಡಿ ಎಂದರು. ಅವರು ತಪ್ಪು ಮಾಡಿದ್ದಾರೆಂದು ಕೆಲವು ಮಂತ್ರಿಗಳು ಹೇಳಿದರು. ಮತ್ತೊಂದು ಕ್ಯಾಬಿನೆಟ್ ಸಭೆಯಲ್ಲಿ ಮತ್ತೆ ಅದರ ಬಗ್ಗೆ ಚರ್ಚೆಯಾಯಿತು. ನಮಗೆ ಎಲ್ಲಾ ಹೇಳಿದ್ದಾರೆ. ಯಾರು ತಪ್ಪು ಮಾಡಿದ್ದಾರೆಂಬುದು ಪ್ರೆಮಾಫೆಸಿ ಕಂಡುಬಂದರೆ, ಅವರನ್ನು ಸಸ್ಪೆಂಡ್ ಮಾಡಲು ಇವರಿಗೆ ಧೈರ್ಯವಿಲ್ಲ.

ಶ್ರೀ ಎಂ. ಮಹದೇವ್ (ರೇಷ್ಮೆ ಮತ್ತು ಜವಳಿ ಸಚಿವರು):- ನಮ್ಮ ಕ್ಯಾಬಿನೆಟ್‌ನಲ್ಲಾದ ಡಿಸಿಷನ್ ನಿಮಗೆ ಹೇಗೆ ಗೊತ್ತಾಗುತ್ತದೆ ?

ಶ್ರೀ ಎ. ರಾಮದಾಸ್:- ಕ್ಯಾಬಿನೆಟ್ ಸಭೆಯಲ್ಲಿ ಏನೇನು ನಡೆಯುತ್ತದೆಂಬುದನ್ನು ಒಡಕಿನ ಮಧ್ಯೆ ಯಾರ್ಯಾರಿದ್ದಾರೆ ಅವರು ಇನ್‌ಫರ್ಮೇಷನ್ ಕೊಡುತ್ತಿದ್ದಾರೆ. ಬಿರುಕು ಪ್ರಾರಂಭವಾಗಿದೆ, ಅದರ ಮೂಲಕ ಮೆಸೇಜ್ ಬರುತ್ತಿದೆ.

ಶ್ರೀ ಎಂ. ಮಹದೇವ:- ನಮ್ಮ ಸರ್ಕಾರ ಭಾರೀ ಗಟ್ಟಿಯಾಗಿದೆ, 5 ವರ್ಷಗಳ ಕಾಲ ಶ್ರೀ ಎಸ್.ಎಂ. ಕೃಷ್ಣರವರೇ ಮುಖ್ಯಮಂತ್ರಿಗಳಾಗಿ ಒಳ್ಳೆಯ ಆಡಳಿತ ಕೊಡುತ್ತಾರೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:- ನಿಮ್ಮದು ಟ್ರಾನ್ಸ್‌ಪರೆಂಟ್ ಸರ್ಕಾರವಲ್ಲವೇ, ಆದರಿಂದಲೇ ಎಲ್ಲವೂ ಎಲ್ಲರಿಗೂ ಗೊತ್ತಾಗುತ್ತದೆ.

ಶ್ರೀ ಎಸ್. ಸುರೇಶ್‌ಕುಮಾರ್:- ಇವರ ಸಚಿವಸಂಪುಟ ಎಷ್ಟು ಸುದೃಢ, ಬಲವಾಗಿದೆ ಎಂದರೆ, ಅದು ಪಕ್ಷದ ಸರ್ಕಾರವೋ, ಸಮ್ಮಿಶ್ರ ಸರ್ಕಾರವೋ ಎಂಬ ಸಂಶಯ ಬರುತ್ತದೆ. ಎಜುಕೇಷನ್ ಇಲಾಖೆಯನ್ನು ತೆಗೆದುಕೊಂಡರೆ ಟೆಕ್ಸ್‌ಟೈಲ್‌ನವರಿಗೆ ಆಗುವುದಿಲ್ಲ, ಟೆಕ್ಸ್‌ಟೈಲ್ ತೆಗೆದುಕೊಂಡರೆ, ಎಜುಕೇಷನ್ ಇಲಾಖೆಯವರಿಗಾಗುವುದಿಲ್ಲ. ಇದು ಸರ್ಕಾರ.

ಶ್ರೀ ರಮಾನಾಥ ರೈ (ಮೀನುಗಾರಿಕೆ ಮತ್ತು ಬಂದರು ಸಚಿವರು):- ದೇಶದ ಸರ್ಕಾರದ ಬಗ್ಗೆ ಚಿಂತಿಸಿ.

ಶ್ರೀ ಎಂ. ಮಹದೇವ:- ನಮ್ಮದು ಪ್ರಜಾಪ್ರಭುತ್ವವನ್ನು ಎತ್ತಿಹಿಡಿಯುವ ಸರ್ಕಾರ.

ಶ್ರೀ ಎಸ್. ಸುರೇಶ್‌ಕುಮಾರ್:- ಮೆಜೆಸ್ಟಿಕ್ ಏರಿಯಾ ಒಳ್ಳೆಯ ಪ್ರಜಾಪ್ರಭುತ್ವದ ಜಾಗ. ಅಲ್ಲಿ ಎಲ್ಲರೂ ಹೊಡೆದಾಡುತ್ತಾರೆ. ಅದು ಪ್ರಜಾಪ್ರಭುತ್ವ ಅದಕ್ಕಿಂತ ಬೇಕೇ?

ಶ್ರೀ ಎ. ರಾಮದಾಸ್ :- ಅದಕ್ಕಿಂತ ಹೊಡೆದಾಟಬೇಕೆ? ಕ್ಯಾಬಿನೆಟ್ ಒಳಗೆ, ಹೊರಗೆ ಇದಕ್ಕಿಂತ ಬೇಕೇ?

ಶ್ರೀ ಡಿ.ವಿ. ಸದಾನಂದಗೌಡ :- ಕೇಂದ್ರದ ಎನ್ ಡಿ ಎ ಸರ್ಕಾರ ಎಷ್ಟು ಬಲಿಷ್ಠವಾಗಿದೆ ಎಂಬ ಬಗ್ಗೆ ರಮಾನಾಥ ರೈ ಯವರಿಗೆ ಸಂಶಯ ಬಂದಿದೆ. ಅದು ಸಮ್ಮಿಶ್ರ ಸರ್ಕಾರವಲ್ಲ. ಅದು ಒಂದೇ ಪಾರ್ಟಿಯ ಸರ್ಕಾರ. ಇಲ್ಲಿ ಸಮ್ಮಿಶ್ರ ಸರ್ಕಾರದ್ದಾಗಿದೆ ಎಂಬ ಬಗ್ಗೆ ರಮಾನಾಥ ರೈ ಯವರಿಗೆ ಸ್ವಲ್ಪ ಸಂಶಯವಾಗಿದೆ.

ಶ್ರೀ ಎಂ. ಮಹದೇವ :- ನಿಮ್ಮ ಸರ್ಕಾರ ಬಿದ್ದು ಹೋಗುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್ :- ಆ ಮೂವರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವ ನಿರ್ಣಯ ಕೈಗೊಳ್ಳುವುದಕ್ಕೆ ಎರಡು ಬಾರಿ ಕ್ಯಾಬಿನೆಟ್ ಮೀಟಿಂಗ್ ಆಯಿತು. ಇನ್ನು ದೊಡ್ಡ ದೊಡ್ಡ ಯೋಜನೆಗಳ ಬಗ್ಗೆ ಯಾವಾಗ ನಿರ್ಣಯ ಕೈಗೊಳ್ಳುತ್ತಾರೆಯೋ, ಗೊತ್ತಾಗುತ್ತಿಲ್ಲ. ಕೇವಲ ಹೈ-ಟೆಕ್, ಐ.ಟಿ.ಬಗ್ಗೆ ನಿರ್ಣಯಗಳಾಗುತ್ತವೆ. ಬೇರೇನೂ ಆಗುವುದಿಲ್ಲ. ಆ ಮೂವರನ್ನು ಸಸ್ಪೆಂಡ್ ಮಾಡುವುದಕ್ಕಾಗುವುದಿಲ್ಲ. ಎರಡು ಬಾರಿ ಕ್ಯಾಬಿನೆಟ್ ಸೇರಿ, ಚರ್ಚಿಸಿ, ಸಸ್ಪೆಂಡ್ ಮಾಡಿದರು. ಎನ್‌ಡಿಎ., ಎಫ್‌ಡಿಎ ಅನ್ನು ಸಸ್ಪೆಂಡ್ ಮಾಡುತ್ತೀರಿ, ಅವರು ಆರು ತಿಂಗಳು, ಒಂದು ವರ್ಷ ತಾವು ತಪ್ಪು ಮಾಡಿಲ್ಲವೆಂದು ಹೇಳುತ್ತಾ ಅಡ್ಡಾಡುತ್ತಾರೆ. ಅವರ ಸಸ್ಪೆನ್‌ಷನ್ ರಿವೋಕ್ ಮಾಡುವುದಕ್ಕಾಗುವುದಿಲ್ಲ. ಈ ಮೂವರು ಒಳ್ಳೆಯವರೋ, ಕೆಟ್ಟವರೋ ಎಂದು ನಾನು ಹೇಳುವುದಿಲ್ಲ. ತಪ್ಪಾಗಿದೆ ಎಂದು ಕಂಡುಬಂದಿದೆ. ಅವರು ನಿರ್ಲಕ್ಷ್ಯ ಮಾಡಿದ್ದಾರೆಂದು ಪ್ರೈಮಾಫೆಸಿ ಕಂಡುಬಂದಿದೆ ಎಂದು ತಿಳಿದು ಅವರನ್ನು ಸಸ್ಪೆಂಡ್ ಮಾಡಿದ್ದೀರಿ, ಅದಕ್ಕೆ ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿ ನಿರ್ಣಯ ಕೈಗೊಂಡಿದ್ದೀರಿ. ಈ-ಮೇಲ್, ಹೈ-ಟೆಕ್ ಇದ್ದರೂ ಅವರಿಗೆ ನೋಟೀಸ್ ಜಾರಿ ಮಾಡಲಾಗಲಿಲ್ಲ. ಪತ್ರಿಕೆಯಲ್ಲಿ ವರದಿಯಾದರೂ ಆ ಅಧಿಕಾರಿಗಳು ಆರಾಮವಾಗಿದ್ದಾರೆ. ದಿನನಿತ್ಯದ ಕೆಲಸ ಮಾಡುತ್ತಾರೆ. ನಿರ್ಲಕ್ಷ್ಯ ಮಾಡುವಂಥ ಅಧಿಕಾರಿ, ಸಸ್ಪೆಂಡ್ ಆದ ಅಧಿಕಾರಿ ತನ್ನ ಕಛೇರಿಯಲ್ಲಿ ಕುಳಿತು ಕೆಲಸ ಮಾಡುತ್ತಾರೆಂದರೆ, ಮುಂದೆ ಅವರು ಹೇಗೆ ಸರಿಯಾಗಿ ಕೆಲಸ ಮಾಡುತ್ತಾರೆ? ಜನರು ಅವರ ಹತ್ತಿರ ಹೇಗೆ ಹೋಗುತ್ತಾರೆ? ಅವರ ಬಗ್ಗೆ ಹೇಗೆ ನಂಬಿಕೆ ಬರುತ್ತದೆ? ಒಂದು ವಾರವಾದರೂ ಅವರಿಗೆ ನೋಟೀಸ್ ಜಾರಿಯಾಗುವುದಿಲ್ಲ. ಹೈ-ಟೆಕ್ ತೆಗೆದುಕೊಂಡೇನು ಮಾಡುತ್ತೀರಿ? ರಾಜ್ಯದ ಪರಿಸ್ಥಿತಿ ಹೀಗಿದೆ. ಧಾರವಾಡ ಜಿಲ್ಲೆಯಲ್ಲಿ ನಡೆದ ಸಮಾರಂಭವೊಂದರಲ್ಲಿ ರಾಜ್ಯಪಾಲರು ಭಾಗವಹಿಸಿದ್ದರು. ಅಲ್ಲಿ ಸಸ್ಪೆಂಡ್ ಆದ ಅಧಿಕಾರಿಯೇ ಅನೌನ್ಸ್‌ಮೆಂಟ್, ಪ್ರಸ್ತಾವನೆ ಎಲ್ಲಾ ಮಾಡಿದ್ದಾರೆ. ಅವರು ಸಸ್ಪೆಂಡ್ ಆಗಿದ್ದಾರೆಂದು ಪತ್ರಿಕೆಯಲ್ಲಿ ವರದಿಯಾಗಿದೆ. ನಮ್ಮ ಜಿಲ್ಲಾ ಉಸ್ತುವಾರಿ ಸಚಿವರು ಎ.ಎಂ. ಹಿಂಡಸಗೇರಿ ಮತ್ತು ಹೆಚ್. ಕೆ. ಪಾಟೀಲ್‌ರೂ ಅಲ್ಲೇ ಇದ್ದರು ಅವರು ಸಸ್ಪೆಂಡ್ ಆದ ಅಧಿಕಾರಿಯ ಅಕ್ಕಪಕ್ಕದಲ್ಲೇ ಕುಳಿತಿದ್ದಾರೆ. ಇದರಿಂದ, ಜನರಿಗೆ ಯಾವ ಸಿಗ್ನಲ್ ಹೋಗುತ್ತದೆ? ಐ.ಎ.ಎಸ್. ಮತ್ತು ಕೆ.ಎ.ಎಸ್. ಅಧಿಕಾರಿಗಳನ್ನು ಸಸ್ಪೆಂಡ್ ಮಾಡುವ ಹಾಗಿಲ್ಲ. ಅವರನ್ನು ಮುಟ್ಟುವ ಹಾಗಿಲ್ಲ, ಮುಟ್ಟಿದರೆ ರಾಜ್ಯಸರ್ಕಾರ ಬೀಳುತ್ತದೆ, ಎಂಬ ಹೆದರಿಕೆ ರಾಜ್ಯಸರ್ಕಾರದ್ದು. ಪ್ರೆಸ್ ರಿಪೋರ್ಟರ್ಸ್, ಸಸ್ಪೆಂಡ್ ಆದ ಅಧಿಕಾರಿಗಳು ಇರುವ ಸಭೆಯಲ್ಲಿ ನೀವೇಕೆ ಭಾಗವಹಿಸಿದ್ದೀರಿ ಎಂದು ಕೇಳಿದರೆ, ಸಚಿವರು ಗೊತ್ತಿಲ್ಲವೆನ್ನುತ್ತಾರೆ.

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು):- ಅಂಥ ಪ್ರಶ್ನೆ ಬಂದಿಲ್ಲ. ಅದು ಸರ್ಕಾರಿ ಕಾರ್ಯಕ್ರಮವಾಗಿರದೆ, ರೆಡ್‌ಕ್ರಾಸ್ ಕಾರ್ಯಕ್ರಮವಾಗಿತ್ತು. ಸರ್ಕಾರಿ ಕಾರ್ಯಕ್ರಮಕ್ಕೆ ಅವರು ಬಂದಿಲ್ಲ, ಅಲ್ಲಿ ನನ್ನನ್ನು ಯಾರೂ ಕೇಳಿಲ್ಲ.

ಶ್ರೀ ಜಗದೀಶ್‌ಶೆಟ್ಟರ್:- ಸರ್ಕಾರಿ ಕಾರ್ಯಕ್ರಮವಲ್ಲದಿದ್ದರೆ, ಸಸ್ಪೆಂಡ್ ಆದ ಅಧಿಕಾರಿಗಳ ಜೊತೆ ಕಾರ್ಯಕ್ರಮ ಮಾಡಬಹುದು. ಜಿಲ್ಲಾ ಉಸ್ತುವಾರಿ ಸಚಿವರು, ಸಚಿವರು, ಸಸ್ಪೆಂಡ್ ನಿರ್ಣಯ ತೆಗೆದುಕೊಂಡ ಎಷ್ಟು ದಿವಸಗಳಿಗೆ ನೋಟೀಸ್ ಜಾರಿಯಾಯಿತೆಂದು ಹೇಳಲಿ? ಧಾರವಾಡ ಜಿಲ್ಲಾ ಪಂಚಾಯತ್ ಸಭೆಯಲ್ಲಿ ಶ್ರೀ ಆದೋನಿ ಒಳ್ಳೇಯ ಕೆಲಸ ಮಾಡಿದ್ದಾರೆ ರೈತರ ಪರವಾಗಿಕೆಲಸ ಮಾಡಿದ್ದಾರೆ, ಅವರು ತಪ್ಪು ಮಾಡಿಲ್ಲವೆಂದು ಕಾಂಗ್ರೆಸ್ ಪಕ್ಷದ ಮೆಜಾರಿಟಿ ಇದ್ದ, ಅಧ್ಯಕ್ಷರು, ಒಂದು ರೆಸಲ್ಯೂಷನ್ ಪಾಸ್ ಮಾಡುತ್ತಾರೆ. ಆಮೇಲೆ, ಸಚಿವರು ಹೋಗಿ ಅಧ್ಯಕ್ಷರನ್ನು ಕರೆಸಿ ಮಾತನಾಡಿದ ಮೇಲೆ ಮತ್ತೊಂದೆರಡು ದಿವಸಗಳಿಗೆ, ನಾನು ಆ ರೀತಿ ಹೇಳಿಲ್ಲ ಎಂದು ಸ್ಟೇಟ್‌ಮೆಂಟ್ ಕೊಡುತ್ತಾರೆ. ಎರಡು ಕ್ಯಾಬಿನೆಟ್ ಸಭೆಯ ನಿರ್ಣಯವಾಗಿ, ನೋಟೀಸ್ ಜಾರಿಯಾದ ಮೇಲೆ ಎರಡು ದಿವಸಗಳಲ್ಲಿ ಅವರ ಸಸ್ಪೆನ್‌ಷನ್ ರಿವೋಕ್ ಆಗುತ್ತದೆ. ರಾಜ್ಯ ಸರ್ಕಾರದವರು ನಾಟಕ ಮಾಡುತ್ತಿದ್ದೀರಾ? ಜನರಿಗೆ ಮರುಳ ಮಾಡುತ್ತೀರಾ? ನೀವು ರೈತರ ಪರವಾಗಿ ಇದ್ದೇವೆಂದು ಹೇಳಿಕೊಂಡು ರೈತರಿಗಾಗಿ ತೆರೆದಿರುವ ಖರೀದಿ ಕೇಂದ್ರದಲ್ಲಿ ಯಾರೇ ತಪ್ಪು ಮಾಡಿದರೂ ಕೂಡ ಅವರನ್ನು ನಾವು ಸಸ್ಪೆಂಡ್ ಮಾಡುತ್ತೇವೆ. ಟರ್ಮಿನೇಟ್ ಮಾಡುತ್ತೇವೆಂದು ಹೇಳಿ ಮತ್ತೆರಡು ದಿವಸದಲ್ಲಿ ಐಎಎಸ್ ಲಾಬಿಗೆ ಮಣಿದು ಪುನಃ ಸಚಿವ ಸಂಪುಟದಲ್ಲಿ ನಿರ್ಣಯ ಕೈಗೊಂಡು ಸಸ್ಪೆಂಡ್ ಆಗಿದ್ದಂಥವರನ್ನು ಎರಡುದಿವಸದೊಳಗೆ ಪನಃ ರಿವೋಕ್ ಮಾಡುತ್ತೀರಿ, ಅಂದರೆ ಒಬ್ಬರಿಗೊಂದು ರೂಲ್ ಮತ್ತೊಬ್ಬರಿಗೊಂದು ರೂಲ್. ಸಣ್ಣ ಮೀನು ಮಾತ್ರ ಬಲಿಯಾಗಬೇಕು ದೊಡ್ಡ ಮೀನುಗಳು ಮಾತ್ರ ಪಾರಾಗಬೇಕು. ಇದೇನು ನಿಮ್ಮ ಪರಿಸ್ಥಿತಿ? ಇದೇನಾ ನಿಮ್ಮ ಸರ್ಕಾರದ ನಡವಳಿಕೆ? ಅದಕ್ಕಾಗಿ ಇವತ್ತು ನೀವು ಆಡಳಿತದಲ್ಲಿ ಬಿಗಿಯನ್ನು ಕಳೆದುಕೊಂಡಿದ್ದೀರಿ. ಇವತ್ತು ಅಧಿಕಾರಿಗಳು ನಿಮ್ಮ ಮಾತನ್ನು ಕೇಳದಿರುವಂಥ ಪರಿಸ್ಥಿತಿ ಮುಂದುವರೆದಿದೆ. ಇಂಥ ಸ್ಥಿತಿಯಲ್ಲಿ ಖರೀದಿ ಕೇಂದ್ರದ ವ್ಯವಸ್ಥೆ ಹೇಗೆ ಮಾಡುವುದಕ್ಕೆ ಸಾಧ್ಯವಿದೆ? ಜಿಲ್ಲಾಧಿಕಾರಿಗಳು ಕೂಡ ನಿಮ್ಮ ಹಿಡಿತದಲ್ಲಿ ಇಲ್ಲ, ಒಂದು ಸಣ್ಣ ಪುಟ್ಟ ಸಮಸ್ಯೆಯನು ಕೂಡ ಅವರು ಬಗೆಹರಿಸಿಕೊಳ್ಳುವುದಕ್ಕಾಗುತ್ತಿಲ್ಲ, ರೈತರಿಗೆ ಸಮಾಧಾನ ಮಾಡುವಂಥ ಸ್ಥಿತಿ ಇಲ್ಲ. ಹೀಗಿರುವಾಗ ಏನಾದರೂ ಸ್ವಲ್ಪ ಹೆಚ್ಚು ಕಡಿಮೆ ಆದರೆ ಕೇಂದ್ರ ಸರ್ಕಾರವೇ ಕಾರಣವೆಂದು ಹೇಳುತ್ತೀರಿ, ರಾಜ್ಯ ಸರ್ಕಾರದ್ದು ಏನು ಪಾಲು ಇದೆ ಅದನ್ನಾದರೂ ಹೇಳಿ. ಪಕ್ಕದ ರಾಜ್ಯವಾದ ಆಂಧ್ರಪ್ರದೇಶದಲ್ಲಿ ಇಂಥ ಸ್ಥಿತಿಯಲ್ಲಿ ಅವರುಏನು ಮಾಡುತ್ತಾರೆಂದು ತಿಳಿದುಕೊಳ್ಳಲು ನೀವು ಯಾರನ್ನಾದರೂ ಅಲ್ಲಿಗೆ ಕಳುಹಿಸಿ ಕೊಡಿ, ಏಕೆಂದರೆ ಕನ್ನಡ ಪ್ರಭ ಪತ್ರಿಕೆಯಲ್ಲಿ ಬಂದಂಥ ಒಂದು ಸ್ಟೇಟ್‌ಮೆಂಟ್‌ನ್ನು ನಾನೀಗ ಓದುತ್ತೇನೆ. '' ಆಂಧ್ರಪ್ರದೇಶದಲ್ಲಿ ಬೆಲೆ ಕುಸಿತ, ಕೃಷಿ ಉತ್ಪನ್ನಗಳು ಮಾರುಕಟ್ಟೆ ಪ್ರವೇಶಿಸಿ ಬೆಂಬಲ ಬೆಲೆಯಲ್ಲಿ ಖರೀದಿಸಲು ಅಲ್ಲಿನ ತೆಲುಗುದೇಶಂ ಸರ್ಕಾರ ಮುಂದಾಗಿದೆ. ಕೃಷಿ ಉತ್ಪನ್ನಗಳ ಖರೀದಿಯಲ್ಲಿ ಶೇಕಡ 70 ರಷ್ಟು ಹಣವನ್ನು ಆ ರಾಜ್ಯ ಸರ್ಕಾರ ಹಾಗೂ ಶೇಕಡ 30 ರಷ್ಟು ಹಣವನ್ನು ಕೇಂದ್ರ ಸರ್ಕಾರ ತೊಡಗಿಸುತ್ತದೆ. ಇದು ನಿಮಗ್ಯಾಕೆ ಇಲ್ಲ?

ಆಂಧ್ರಪ್ರದೇಶದಲ್ಲಿರುವ ಮಾದರಿ ನಮ್ಮಲ್ಲಿ ಏಕೆ ಇಲ್ಲ, ಎನ್ನುವ ಪ್ರಶ್ನೆ ಈಗ ಉದ್ಭವಿಸಿದೆ. ಈ ವಿಚಾರ ಪತ್ರಿಕೆಯಲ್ಲಿ ಬಂದಿದೆ, ನಾಳೆ ಅಲ್ಲಿಗೆ ಯಾರನ್ನಾದರೂ ಕಳುಹಿಸಿ ವರೆಫೈ ಮಾಡಿ. ನೀವು ಕೇವಲ ಆವರ್ತನಿಧಿಯೆಂದು ಮಾಡಿರುವುದು ಹೇಳುವುದಕ್ಕಷ್ಟೆ ಆವರ್ತನಿಧಿ ಸಂಗ್ರಹ ಮಾಡಲಿಕ್ಕೆ ಆಗಲಿಲ್ಲ.

ಶ್ರೀ ಆರ್. ಬಿ. ತಿಮ್ಮಾಪುರ್(ಕೃಷಿ ಮಾರುಕಟ್ಟೆ ಸಚಿವರು):- ಮಾನ್ಯ ಉಪಾಧ್ಯಕ್ಷರೇ, ಎಪಿ.ಎಂ.ಸಿ ಯಿಂದ ಒಟ್ಟು 50 ಕೋಟಿ ರೂಪಾಯಿಗಳ ಬಗ್ಗೆ ಸರ್ಕಾರ ತೀರ್ಮಾನ ತೆಗೆದುಕೊಂಡಿದೆ. ಹಂತ ಹಂತವಾಗಿ ಅಂದರೆ ಈಗೇನು 26 ಕೋಟಿ ರೂಪಾಯಿ ಕೊಡಬೇಕು ಎಂದು ಹಾಕಿಕೊಂಡಿದ್ದೆವು, ಎಪಿಎಂಸಿ ಯಿಂದ ಹಣ ಬಂದು ಈಗಾಗಲೇ ಸೇರಿದೆ. ಅದರ ಜೊತೆ ಸರ್ಕಾರದಿಂದ ಐದು ಕೋಟಿ ರೂಪಾಯಿ ಹಣವನ್ನು ಈಗಾಗಲೇ ಮಂಜೂರಾತಿ ನೀಡಿದ್ದಾರೆ, ನಮ್ಮ ಹತ್ತಿರ ಹಣ ಇದೆ ಹಣದ ತೊಂದರೆ ಇಲ್ಲ. ಇದರ ಜೊತೆಗೆ ಆಲೂಗೆಡ್ಡೆ, ಈರುಳ್ಳಿ, ತೊಗರಿ ಖರೀದಿಯಲ್ಲಿ ಸರ್ಕಾರ ಭಾಗಿಯಾಗಿದ್ದು ಖರೀದಿ ಮಾಡುತ್ತಿದೆ ಎಂದು ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಎನ್. ಯೋಗೇಶ್ ಭಟ್:- ಮಾನ್ಯ ಉಪಾಧ್ಯಕ್ಷರೆ, ಹಣ ಬಿಡುಗಡೆ ಆಗಿಲ್ಲ ಆದರೆ ತೀರ್ಮಾನವಾಗಿದೆ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ಹಾಗೆ ಹಣ ಇನ್ನೂ ಬಿಡುಗಡೆಯಾಗಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಆಲೂಗೆಡ್ಡೆ ಖರೀದಿ ಬಗ್ಗೆ ತಿಳಿಸಿದರು. ಮಾನ್ಯ ಸಹಕಾರ ಸಚಿವರು, ಸುಮಾರು ಆರು ಕೋಟಿ ರೂಪಾಯಿಗಳು ಆಲೂಗೆಡ್ಡೆ ಕೊಳೆತು ನಷ್ಟವಾಗಿದೆ ಎಂದು ಹೇಳಿದ್ದರು, ಇದರ ಬಗ್ಗೆ ತಾವು ಏನು ಹೇಳುತ್ತೀರಿ? ತಾವು ಕೂಡ ಆ ಸಭೆಯಲ್ಲಿ ಇದ್ದೀರಿ. ತಮ್ಮ ಇಲಾಖೆಯಲ್ಲಿರುವ ಹಾಸ್ಟೆಲ್‌ಗಳಿಗೆ ಹಾಗೂ ಇತರೆ ಬೇರೆ ಬೇರೆ ಕಡೆಗಳಲ್ಲಿ ಕೊಳೆತು ಹೋಗಿರುವಂಥದ್ದನ್ನು ಸರಬರಾಜು ಮಾಡುವಂಥದ್ದು ಇದನ್ನೆಲ್ಲಾ ವ್ಯವಸ್ಥೆ ಮಾಡುತ್ತೇವೆಂದು ಅವರು ಹೇಳುತ್ತಿದ್ದಾರೆ. ಹಾಗಾದರೆ ಅವರು 6 ಕೋಟಿ ರೂಪಾಯಿ ಮೌಲ್ಯದ ಆಲೂಗೆಡ್ಡೆಯನ್ನು ಖರೀದಿ ಮಾಡಿ ಅದನ್ನು ಇಟ್ಟುಕೊಂಡಿದ್ದೀರಾ ಎಂಬುದರ ಬಗ್ಗೆ ಸ್ಪಷ್ಟೀಕರಣ ಕೊಡಲಿ. ಆಲೂಗೆಡ್ಡೆಯನ್ನು ಇಟ್ಟುಕೊಳ್ಳಲು ಶೀಥಿಲಕೇಂದ್ರಗಳು ಇರಲಿಲ್ಲವೆ? ಆ ಆರೂ ಕೋಟಿ ರೂಪಾಯಿ ಮೌಲ್ಯದ ಆಲೂಗೆಡ್ಡೆ ಏನಾಯಿತು ಎಂಬುದರ ಬಗ್ಗೆ ಅವರು ಹೇಳಲಿ.

ಶ್ರೀ ಆರ್. ಬಿ. ತಿಮ್ಮಾಪುರ್:- ಒಟ್ಟಾರೆ ಆರು ಕೋಟಿ ರೂಪಾಯಿ ಮೌಲ್ಯದ ಆಲೂಗೆಡ್ಡೆಯನ್ನು ಖರೀದಿ, ಧಾರಣೆ ಇಲ್ಲದೇ ಇರುವುದರಿಂದ ಶೀಥಿಲಕೇಂದ್ರಗಳಲ್ಲಿ ಇಡತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಅದಾಗ್ಯೂ ಇನ್ನೂ ರೇಟ್ ಬಂದಿದ್ದರಿಂದ ಹಾಗೂ ಎರಡು ತಿಂಗಳ ನಂತರ ಆಲೂಗೆಡ್ಡೆಯ ಪರಿಸ್ಥಿತಿ ಸರಿಯಾಗಿ ಇರುವುದಿಲ್ಲ ಅದು ಕೊಳೆಯುತ್ತದೆ ಎನ್ನುವ ಅಧಿಕಾರಿಗಳ ವರದಿಯ ಪ್ರಕಾರ, ಜಿಲ್ಲಾ ಪಂಚಾಯತ್ ಹಾಗೂ ಹಾಸ್ಟೆಲ್‌ಗಳಿಗೆ ಕಳುಹಿಸುವಂಥಾದ್ದು, ಎಪಿಎಂಸಿ ಮುಖಾಂತರ ನಾವು ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಕೊಳೆತು ಹೋದಂಥ ಆಲೂಗೆಡ್ಡೆ ಯಾವುದೂ ಇಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ:- ಅವರೇ ಕೊಳೆತು ಹೋಗಿದೆ ಹಾಳಾಗಿದೆ ಎಂದು ಹೇಳಿದ್ದಾರೆ.

ಶ್ರೀ ಆರ್.ಬಿ. ತಿಮ್ಮಾಪುರ್ :- ಕೊಳೆತು ಹೋಗುವ ಪರಿಸ್ಥಿತಿ ಬಂದಿದೆ ಎಂದು ಹೇಳಿದ್ದಾರೆಯೇ ವಿನಹ ಕೊಳೆತು ಹೋಗಿಲ್ಲ.

ಶ್ರೀ ವಿ.ಕೃಷ್ಣಪ್ಪ:- ಎಲ್ಲಾ ಪಂಚಾಯಿತಿಗಳಿಗೂ ಕೊಳೆತ ಆಲೂಗೆಡ್ಡೆಯನ್ನು ಒಂದೊಂದು ರೂಪಾಯಿನಂತೆ ಸರಬರಾಜು ಮಾಡಿದ್ದಾರೆ ಇದರ ಬಗ್ಗೆ ಮಾನ್ಯ ಸಚಿವರು ಏನು ಹೇಳುತ್ತಾರೆ?

ಶ್ರೀ ಆರ್.ಬಿ. ತಿಮ್ಮಾಪುರ್:- ರೈತರಿಂದ ಖರೀದಿಸಲ್ಪಟ್ಟ ಆಲೂಗೆಡ್ಡೆಗೆ ಮಾರುಕಟ್ಟೆಯಲ್ಲಿ ಸರಿಯಾದ ಧಾರಣೆ ಇಲ್ಲದೇ ಇರುವುದರಿಂದ ಜಿಲ್ಲಾ ಪಂಚಾಯಿತಿ ಮುಖಾಂತರ ಅದನ್ನು ಹಂಚತಕ್ಕಂಥ ವ್ಯವಸ್ಥೆ ಮಾಡಿದ್ದೇವೆ. ಅದು ಒಂದು ರೂಪಾಯಿ ಅಥವಾ ಎರಡು ರೂಪಾಯಿಗಳಿಗೆ ಒಂದು ಕೆ.ಜಿ.ಇರಬಹುದು. ಆದರೆ ಆಲೂಗೆಡ್ಡೆ ಸಂಪೂರ್ಣವಾಗಿ ಕೊಳೆತು ಹೋಗುವುದಕ್ಕಿಂತಲೂ ಪಂಚಾಯಿತಿಗಳ ಮುಖಾಂತರ ಕೊಡುವುದು ತಪ್ಪೇನಿಲ್ಲ. ರೈತನಿಗೆ ನಾವು ಹಣ ವಾಪಸ್ ಕೊಟ್ಟು ಕೆಲವು ಸಂದರ್ಭಗಳಲ್ಲಿ ಆವರ್ತ ನಿಧಿ ಲೂಸಿಂಗ್ ಫಂಡ್ ಆಗಬಹುದು. ಆದರೆ, ರೈತರ ನೆರವಿಗೆ ನಾವು ಬಂದಿದ್ದೇವೆನ್ನುವ ಸಂತೋಷ ನಮ್ಮ ಸರ್ಕಾರಕ್ಕೆ ಇದೆ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ.

ಶ್ರೀ ವಿ.ಕೃಷ್ಣಪ್ಪ:- ನಾಳೆ ತಾವು ಬೇಕಾದರೆ ಒಂದು ಚೀಲ ತರಿಸಿ ನೋಡಿ ಅದರಲ್ಲಿ ಸುಮಾರು 5-10 ಕೆ.ಜಿ.ಕೂಡ ಉಳಿಯುವುದಿಲ್ಲ. ಸರ್ಕಾರ ಏಕೆ ಅವುಗಳನ್ನು ಜಿಲ್ಲಾ ಪಂಚಾಯಿತಿಗಳ ಮೂಲಕ ಸರಬರಾಜು ಮಾಡುತ್ತಿದೆ?

ಶ್ರೀ ಬಿ.ಎನ್. ಬಚ್ಚೇಗೌಡ :- ಈ ರೀತಿ ತಾವು ಹೇಳಿದರೆ ಹೇಗೆ? ತಾವೇ ಆರು ಕೋಟಿ ರೂಪಾಯಿನಷ್ಟು ನಷ್ಟವಾಗಿದೆ ಎಂದು ಹೇಳಿ, ಇವತ್ತು 50 ಪೈಸೆಗೆ ಅಥವಾ ಒಂದು ರೂಪಾಯಿಗೆ ಅದನ್ನು ಬೇರೆ ಕಡೆ ಕೊಟ್ಟಿದ್ದೇವೆಂದು ಡಿಫೆಂಡ್ ಮಾಡಿಕೊಂಡರೆ ತಮ್ಮ ಹೇಳಿಕೆಯ ಬಗ್ಗೆ ಏನಾಯಿತು? ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ತಾವು ಅವುಗಳನ್ನು ಶೀಥಿಲ ಕೇಂದ್ರದಲ್ಲಿ ಸರಿಯಾಗಿ ಇಡಲು ಏಕೆ ವ್ಯವಸ್ಥೆ ಮಾಡಲಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ:- ಈ ಕಡೆ ಇದ್ದಾಗ ಸಾಕಷ್ಟು ಶೀಥಿಲ ಕೇಂದ್ರಗಳನ್ನು ಕಟ್ಟುತ್ತೇವೆಂದು ಇಲ್ಲಿ ಕುಳಿತು ಹೇಳಿದ್ದೀರಿ, ಈಗ ಎಷ್ಟು ಕಟ್ಟಿದ್ದೀರಿ?

ಶ್ರೀವಿ.ಕೃಷ್ಣಪ್ಪ:- ಬೆಂಗಳೂರು ಸುತ್ತಮುತ್ತ ಬೇಕಾದಷ್ಟು ಶೀಥಿಲ ಕೇಂದ್ರಗಳು ಖಾಲಿ ಇದ್ದು ಅದರಲ್ಲಿ ಇವರು ಸ್ಟಾಕ್ ಮಾಡಲಿ.

ಶ್ರೀ ಕಾಗೋಡು ತಿಮ್ಮಪ್ಪ :- ನಿಮ್ಮ ಊರಿನಲ್ಲಿ ಇರುವುದು ನಮಗೆ ಗೊತ್ತಿದೆ ಇವರ ಊರಿನಲ್ಲಿ ಇದೆಯೇ?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಎಪಿಎಂಸಿ ಸಚಿವರು ಎದ್ದು ನಿಂತರು, ಇವರು ಎ ಪಿ ಎಂಸಿ ಯಿಂದ 50 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿ ಕೊಡುವವರು. ಇಲ್ಲಿಯವರೆಗೆ ಎಷ್ಟು

ಸಂಗ್ರಹ ಮಾಡಿ ಕೊಟ್ಟಿದ್ದಾರೆ ? 50 ಕೋಟಿ ರೂಪಾಯಿಗಳನ್ನು ಸಂಗ್ರಹ ಮಾಡಿ ಕೊಟ್ಟಿದ್ದೀರಾ? ಆವರ್ತನಿಧಿಗೆ 50 ಕೋಟಿ ಸಂಗ್ರಹ ಆಗಿದೆಯೇ? ದಯಮಾಡಿ ತಾವು ಈ ವಿಷಯ ಹೇಳಬೇಕು. ಎಪಿಎಂಸಿ ಯವರು 50 ಕೋಟಿಯಲ್ಲಿ ಎಷ್ಟು ಕೊಟ್ಟಿದ್ದಾರೆ ? ಸಂಗ್ರಹ ಮಾಡುತ್ತೇವೆಂದು ಸಚಿವರು ಹೇಳಿದರು, ಇಲ್ಲಿಯವರೆಗೆ ಎಷ್ಟು ಸಂಗ್ರಹ ಮಾಡಿದ್ದೀರಿ? ಸಂಗ್ರಹ ಆಗಿದೆಯೋ ಇಲ್ಲವೋ?

ಶ್ರೀ ಆರ್. ಬಿ. ತಿಮ್ಮಾಪುರ್:- ಸಂಗ್ರಹಣೆ ಮಾಡಬೇಕು ಎನ್ನುವ ಗುರಿಯನ್ನು ಇಟ್ಟುಕೊಂಡಿದ್ದೇವೆ. ಆ ಪ್ರಕಾರ ಸಂಗ್ರಹಣೆ ಮಾಡಿ ಕೊಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮ ಉತ್ತರ ನೋಡಿದರೆ ಇದು ಕೂಡ ಮೊಗಂ ಉತ್ತರನೇ ಇದೆ. ಇವತ್ತು ನಿಮ್ಮಿಂದ ನಾವು ಸ್ಪಷ್ಟವಾದ ಉತ್ತರವನ್ನು ನಿರೀಕ್ಷೆಮಾಡಿದ್ದೆವೆ. ಕೊಟ್ಟಿರುವ 50 ಕೋಟಿ ರೂಪಾಯಿಯ ಗುರಿಯಲ್ಲಿ ನೀವು ಎಷ್ಟು ಸಂಗ್ರಹಣೆ ಮಾಡಿದ್ದೀರಿ? ಇದರ ಬಗ್ಗೆ ಸಚಿವರು ಸರಿಯಾದ ಉತ್ತರ ಹೇಳುತ್ತಿಲ್ಲ. ಇದರ ಬಗ್ಗೆ ಎಷ್ಟು ಸಂಗ್ರಹವಾಗಿದೆ ಎಂದು ಹೇಳುವಂಥ ಧೈರ್ಯವೂ ಕೂಡ ಇಲ್ಲ. ಸಂಗ್ರಹಣೆ ಆಗಿಲ್ಲ ಎನ್ನುವ ಸಂಶಯ ನನಗೆ ಬರುತ್ತದೆ. ಸಂಗ್ರಹಣೆ ಆಗಿದ್ದರೆ ಯಾವ ರೈತರಿಗೆ ದುಡ್ಡು ಕೊಟ್ಟಿದ್ದೀರಿ? ಸಂಗ್ರಹಣೆ ಆಗಿಲ್ಲದಿದ್ದರೆ ರೈತರಿಗೆ ಹೇಗೇ ದುಡ್ಡು ಕೊಡುತ್ತೀರಿ? ಎಲ್ಲಾ ಹಣವನ್ನು ಕೇಂದ್ರ ಸರ್ಕಾರದವರು ಕೊಡಬೇಕೆ? ಸುಮಾರು ತಿಂಗಳಿಂನಿಂದ ರೈತರಿಗೆ ಬಟವಾಡೆ ಆಗುತ್ತಿಲ್ಲ. ಬೇಕಾದರೆ ನರಗುಂದ, ನವಲಗುಂದಕ್ಕೆ ಬನ್ನಿ ನಾನು ತೋರಿಸುತ್ತೇನೆ. ನಿಮ್ಮ ಹತ್ತಿರ ದುಡ್ಡು ಇಲ್ಲದೇ ಇರುವುದರಿಂದ ರೈತರಿಗೆ ಪೇಮೆಂಟ್ ಮಾಡಿಲ್ಲ, ಕೊಬ್ಬರಿಗೆ ಸುಮಾರು ಮೂರು ಕೋಟಿ ರೂಪಾಯಿ ಕೊಡುವಂಥದ್ದು ಬಾಕಿ ಇದೆ. ಮೆಕ್ಕೆ ಜೋಳ 10 ಕೋಟಿ ರೂಪಾಯಿ ಬಾಕಿ ಇದೆ.

ಶ್ರೀ ಕಾಗೋಡು ತಿಮ್ಮಪ್ಪ:- ಸ್ವಾಮಿ ಮೆಕ್ಕೆ ಜೋಳ ಇದರಿಂದ ಕೊಡೋದಲ್ಲ ಕೇಂದ್ರ ಸರ್ಕಾರ ಕೊಡುವಂಥದ್ದು..

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮ ಜವಾಬ್ದಾರಿ ಏನು ಇದೆ ಎಂದು ನಾನು ಕೇಳಲಿಚ್ಚಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ:- ಇಡೋದೋ, ಕೊಳ್ಳೋದೋ, ನೋಡೋದೋ ಯಾವುದನ್ನು ನಾವು ಮಾಡಬೇಕು.

ಶ್ರೀ ಜಗದೀಶ್ ಶೆಟ್ಟರ್:- ಅದನ್ನು ನೀವು ಸರಿಯಾಗಿ ಮಾಡುತ್ತಿಲ್ಲ.

ಶ್ರೀ ಎಂ. ಡಿ. ಲಕ್ಷ್ಮೀನಾರಾಯಣ:- ತಿಪಟೂರು, ತುರುವೇಕೆರೆ, ಈ ಭಾಗದಲ್ಲಿ ಸುಮಾರು ಒಂದೂವರೆ ತಿಂಗಳಿನಿಂದ 20 ಕೋಟಿ ರೂಪಾಯಿ ಹಣ ಕೊಟ್ಟಿಲ್ಲ. ಖರೀದಿ ಮಾಡಿ ಹಣ ಕೊಟ್ಟಿಲ್ಲ.

(ಗೊಂದಲ)

ಶ್ರೀ ಕೆ. ಷಡಾಕ್ಷರಿ :- ಅದು ರಾಜ್ಯ ಸರ್ಕಾರದ್ದಲ್ಲ ಕೇಂದ್ರ ಸರ್ಕಾರದಿಂದ ಹಣ ಬರಬೇಕಾಗಿದೆ. ಪಾರ್ಲಿಮೆಂಟ್‌ನಲ್ಲೂ ಕೂಡ ಗಲಾಟೆ ನಡೆಯುತ್ತಿದೆ. ನಫೆಡ್‌ನಿಂದ ಹಣ ಬರಬೇಕಾಗಿದೆ.

ಶ್ರೀ ಎಂ.ಡಿ.ಲಕ್ಷ್ಮೀನಾರಾಯಣ :- ಕೇಂದ್ರ ಸರ್ಕಾರ ಇರಬಹುದು ಇವರು ಏನು ಮಾಡುತ್ತಾರೆ? ಇವರ ಹತ್ತಿರ ಹಣವಿಲ್ಲ. ಶ್ರೀ ಸಿ.ಚನ್ನಿಗಪ್ಪ ರೈತರಿಂದ ತೆಗೆದುಕೊಂಡಿರತಕ್ಕಂಥದ್ದಕ್ಕೆ ಹಣ ಕೊಡದೇ ಈ ಪುಸ್ತಕದಲ್ಲಿ ಸುಳ್ಳು ಹೇಳಿದರೆ ಹೇಗೆ? ಯಾವುದೇ ಸರ್ಕಾರ ಇರಬಹುದು ರೈತರ ಗೋಳನ್ನು ಅರ್ಥ ಮಾಡಿಕೊಳ್ಳಬೇಕು. ರೈತರ ಸಂಕಷ್ಟಗಳನ್ನು ಪರಿಹರಿಸದೇ ಹೋದರೆ ಯಾವುದೇ ಸರ್ಕಾರ ಕೂಡ ಉಳಿಯುವುದಿಲ್ಲ. ಆದ್ದರಿಂದ, ರೈತರಿಗೆ ರೈತರಿಗೆ ಎಷ್ಟು ಬಾಕಿ ಕೊಡಬೇಕು ಅದನ್ನು ಕೊಡತಕ್ಕಂಥ ಕೆಲಸವನ್ನು ಮಾಡಬೇಕು.

ಶ್ರೀ ಕಾಗೋಡು ತಿಮ್ಮಪ್ಪ :- ನೀವು ನಿಖರವಾಗಿ ಇಂಥಿಂಥ ಕಡೆ ಇಷ್ಟು ಬಾಕಿ ಕೊಡಬೇಕು ಎಂದು ದಾಖಲಾತಿ ಸಮೇತ ಕೊಟ್ಟರೆ ನಾವು ಕೂಡ ಹೌದು ಎಂದು ಹೇಳಬಹುದು. ಸುಮ್ಮನೆ ಒಂದು ಮಾತು ಹೇಳಿದರೆ ಹೇಗೆ?

ಶ್ರೀ ಎಂ.ಡಿ ಲಕ್ಷ್ಮೀನಾರಾಯಣ:- ಇದು ಬರೀ ಮಾತಲ್ಲ, ತುರುವೇಕೆರೆ, ತಿಪಟೂರು, ಅರಸೀಕೆರೆ, ಈ ಕಡೆ ಸಾಕಷ್ಟು ಬಾಕಿ ಇದೆ. ಸುಮಾರು ಒಂದೂವರೆ ತಿಂಗಳಿನಿಂದ ರೈತ ಸಾಯುತ್ತಿದ್ದಾನೆ. ನಫೆಡ್‌ನವರು ಖರೀದಿ ನಿಲ್ಲಿಸಿದ್ದಾರೆ.

ಶ್ರೀ ಅರಗಜ್ಞಾನೇಂದ್ರ :- 12.5 ಕೋಟಿ ರೂಪಾಯಿಗಳನ್ನು ಎಣ್ಣೆ ಬೀಜವನ್ನು ಖರೀದಿ ಮಾಡಿ ಕೇವಲ 2.5 ಕೋಟಿ ರೂಪಾಯಿಗಳನ್ನು ಕೊಟ್ಟು ಉಳಿದ 10 ಕೋಟಿ ರೂಪಾಯಿಗಳನ್ನು ಕೊಟ್ಟಿಲ್ಲವೆಂದು ದಿನಾಂಕ 20-2-2001 ರಂದು ಸನ್ಮಾನ್ಯ ಮುಖ್ಯ ಮಂತ್ರಿಯವರಿಗೆ ಪತ್ರ ಬರೆದು ತಿಳಿಸಿದ್ದಾರೆ. ಇಂಥ ಪರಿಸ್ಥಿತಿಯಲ್ಲಿ ರೈತರು ಏನು ಮಾಡಬೇಕು?

ಶ್ರೀ ಕಾಗೋಡು ತಿಮ್ಮಪ್ಪ:- ಎಲ್ಲಿ, ಯಾವಾಗ ಎಷ್ಟು ಖರೀದಿ ಮಾಡಿದ್ದಾರೆ ಎಂಬುದರ ಬಗ್ಗೆ ಮಾಹಿತಿ ಕೊಡಿ.

ಶ್ರೀ ಅರಗ ಜ್ಞಾನೇಂದ್ರ :- ಈ ವಿಷಯದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರಿಗೆ ಬರೆದಿರತಕ್ಕಂಥ ಪತ್ರದ ಒಂದು ಕಾಪಿ ನನ್ನ ಹತ್ತಿರ ಇದೆ. ಇದನ್ನು ತಮಗೆ ಕಳುಹಿಸಿಕೊಡುತ್ತೇನೆ.

ಶ್ರಿ ಜಗದೀಶ್ ಶೆಟ್ಟರ್ ಸನ್ಮಾನ್ಯ ಉಪಾಧ್ಯಕ್ಷರೆ, ತಾಲ್ಲೂಕು ವ್ಯವಸಾಯ ಉತ್ಪನ್ನ ಮಾರುಕಟ್ಟೆ ಸಹಕಾರ ಸಂಘ, ತಿಪಟೂರು, ಇವರು ಬರೆದಿರುವಂಥ ಪತ್ರದ ಕಾಪಿಯನ್ನು ನಮ್ಮ ಶಾಸಕರು ಕೊಟ್ಟಿದ್ದಾರೆ. ಇದನ್ನು ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.'' ಬೆಂಬಲ ಬೆಲೆಯಲ್ಲಿ ಖರೀದಿಸಿದ ಕೊಬ್ಬರಿ ಹಣ ಬಿಡುಗಡೆ ಆಗದೇ ಇರುವ ಬಗ್ಗೆ. ಈ ವಿಷಯವನ್ನು ಉಲ್ಲೇಖ ಮಾಡಿ ಪತ್ರ ಬರೆದಿರುತ್ತಾರೆ. '' ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ ಆದೇಶದಂತೆ ದಿನಾಂಕ 13:01:2001 ರಂದು ನಮ್ಮ ಸಂಘವು

ಬೆಂಬಲ ಬೆಲೆಯಲ್ಲಿ ಚೀಲ ಕೊಬ್ಬರಿಯನ್ನು ಖರೀದಿಸಿರುತ್ತದೆ. ಇದರಲ್ಲಿ 29, 169 ಚೀಲ ಕೊಬ್ಬರಿಯನ್ನು ವೇರ್ ಹೌಸ್ ಮತ್ತು ಹೊರರಾಜ್ಯಗಳ ಸಫೆಡ್, ಬೆಂಗಳೂರು ಇವರಿಗೆ ಸಲ್ಲಿಸಿರುತ್ತಾರೆ. ಇದರ ಬಾಬ್ತು ಕೇವಲ 1 ಕೋಟಿ 35 ಲಕ್ಷ 63 ಸಾವಿರ ರೂಪಾಯಿ ಮಾತ್ರ ಬಂದಿದ್ದು, ಇನ್ನು 2 ಲಕ್ಷ 67 ಸಾವಿರ ರೂಪಾಯಿ ಸಫೆಡ್ ನಿಂದ ಬರಬೇಕಾಗಿರುತ್ತದೆ. ರೈತರಿಂದ ಖರೀದಿಸಿದ ಉಳಿಕೆ 5, 311 ಚೀಲ ಕೊಬ್ಬರಿ ನಮ್ಮ ಸಂಘದಲ್ಲಿಯೇ ಇದ್ದು, ವೇರ್‌ಹೌಸ್ ಮತ್ತು ಲಾರಿಯ ವ್ಯವಸ್ಥೆ ಇಲ್ಲದೇ ತೊಂದರೆಯಾಗಿರುತ್ತದೆ. ರೈತರಿಂದ ಖರೀದಿಸಿದ 5 ಕೋಟಿ 11ಲಕ್ಷದ 40 ಸಾವಿರ ರೂಪಾಯಿಗಳ ಕೊಬ್ಬರಿಗೆ ಚೆಕ್‌ಗಳನ್ನು ನೀಡಿದ್ದು, ಬ್ಯಾಂಕಿನಲ್ಲಿ ಹಣ ಇಲ್ಲದೇ ಚೆಕ್‌ಗಳು ವಾಪಸ್ಸು ಬಂದಿರುತ್ತದೆ. ರೈತರಿಗೆ ಒಂದು ತಿಂಗಳಿಂದ ಹಣ ಸಿಗದೆ ಬಹಳ ತೊಂದರೆಯಾಗಿದೆ.

ಶ್ರೀ ಕೆ. ಷಡಕ್ಷರಿ :- ಇದು ನಪೆಡ್‌ಗೆ ಸಂಬಂಧಪಟ್ಟಿದ್ದು. ಆದ್ದರಿಂದ ಇದಕ್ಕೆ ಕೇಂದ್ರ ಸರ್ಕಾರದಿಂದ ಹಣ ಕೊಡಬೇಕಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇವತ್ತಿನದಿವಸ ಯಾರೇ ತಪ್ಪು ಮಾಡಿರಲಿ, ನೀವು ರೈತರಿಗೆ ಅನುಕೂಲ ಮಾಡತಕ್ಕಂಥ ಕೆಲಸವನ್ನು ಮಾಡಬೇಕು.

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ:- ಇದಕ್ಕೆ ರಾಜ್ಯ ಸರ್ಕಾರ ಹಣ ಕೊಡಬೇಕೇ ಅಥವಾ ನಪೆಡ್ ಕೊಡಬೇಕೆಂಬುದರ ಬಗ್ಗೆ ದಯವಿಟ್ಟು ಸನ್ಮಾನ್ಯ ಸಿಂಧ್ಯರವರು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್:- ಮೆಕ್ಕೆ ಜೋಳವನ್ನು ಎಫ್.ಸಿ.ಐ. ಮುಖಾಂತರ ಖರೀದಿ ಮಾಡಲಾಗುತ್ತಿದೆ. ಇಲ್ಲಿ ಹಣ ಕೊಡದೇ ಹೋದರೆ ನೀವು ಬಿಡುತ್ತೀರಾ? ಆದುದರಿಂದ, ಇಲ್ಲಿಯೂ ಸಹ ಏಕೆ ಹಣ ಕೊಟ್ಟಿಲ್ಲವೆಂದು ಕೇಳಬೇಕು.

ಶ್ರೀ ಕಾಗೋಡು ತಿಮ್ಮಪ್ಪ:- ನಫೇಡ್ ಕೊಟ್ಟಿರುವಂಥ ಹಣವನ್ನು ನಾವು ಏನಾದರೂ ಉಳಿಸಿಕೊಂಡು ರೈತರಿಗೆ ಕೊಡದೇ ಹೋಗಿದ್ದರೆ ನೀವು ಈಗ ಹೇಳುತ್ತಿರುವುದು ಸರಿ ಇರುತ್ತಿತ್ತು.

ಶ್ರೀ ಜಗದೀಶ್ ಶೆಟ್ಟರ್:- ಒಂದು ತಿಂಗಳಿಂದ ರೈತರಿಗೆ ಹಣ ಕೊಡದೇ ಇರುವ ಬಗ್ಗೆ ನೀವು ನಫೆಡ್ ಸಂಸ್ಥೆಗೆ ಏಕೆ ಹಣ ಕೊಟ್ಟಿಲ್ಲವೆಂದು ಕೇಳಬೇಕು. ಇವತ್ತಿನದಿವಸ ನಪೆಡ್ ಕೇಂದ್ರದ್ದಿರಲಿ ಅಥವಾ ಯಾರದ್ದೇ ಇರಲಿ, ನೀವು ಕೇಳತಕ್ಕಂಥ ಹಕ್ಕು ನಿಮಗೆ ಇದೆ. ಆದರೆ ಈ ರೀತಿಯಾಗಿ ಏಕೆ ಮಾಡಲಿಲ್ಲ ಎಂಬುದು ನಮಗೆ ಗೊತ್ತಾಗುತ್ತಿಲ್ಲ. ರೈತರ ಹಿತಾಸಕ್ತಿಯನ್ನು ನೀವು ಏಕೆ ಕಾಪಾಡುತ್ತಿಲ್ಲ?

ಶ್ರೀ ಕಾಗೋಡು ತಿಮ್ಮಪ್ಪ :- ನಫೆಡ್ ಏಕೆ ಹಣ ಕೊಟ್ಟಿಲ್ಲವೆಂದು ಕೇಳುವುದಕ್ಕೆ ಎಲ್ಲರೂ ಹೋಗೋಣ ಬನ್ನಿ.

ಶ್ರೀ ಎಸ್.ಎಸ್. ಪಾಟೀಲ್:- ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಾಗೋಡು ತಿಮ್ಮಪ್ಪನವರು ಹಿರಿಯ ಸಚಿವರಾಗಿದ್ದಾರೆ. ತಾವು ದಯವಿಟ್ಟು ಸೀರಿಯಸ್ ಆಗಿ ಈ ವಿಚಾರವನ್ನು ತಿಳಿದುಕೊಳ್ಳಬೇಕು. ಅದೇನೆಂದರೆ, ಸನ್ಮಾನ್ಯ ಶ್ರೀ ದೇವೇಗೌಡರು ಪ್ರಧಾನಮಂತ್ರಿಯಾಗಿದ್ದಂಥ ಸಂದರ್ಭದಲ್ಲಿ ನಮಗೆ 10 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆಂದು ಹೇಳಿದರು. ಆಗ ನಾವು ಹಣ ಕೊಟ್ಟು ಖರೀದಿ ಮಾಡಿ ಅನಂತರ ಇದಕ್ಕೆ ಸಂಬಂಧಪಟ್ಟ ಹಣವನ್ನು ಕೇಂದ್ರದಿಂದ ತರಿಸಿಕೊಂಡೆವು. ಈ ಪದ್ಧತಿ ನಿಮಗೂ ಕೂಡ ಗೊತ್ತಿದೆ. ಆದರೆ ಈಗ ದುಡ್ಡು ಕೊಡುವುದಕ್ಕೆ ನಿಮ್ಮ ಹತ್ತಿರ ದುದ್ದು ಇಲ್ಲ. ಆದ್ದರಿಂದ ಸುಮ್ಮನೆ ಏನೇನೂ ಹೇಳುವುದಕ್ಕೆ ಹೋಗಬೇಡಿ. ಇವತ್ತಿನದಿವಸ ರೈತರು ಸಾಯುತ್ತಿದ್ದಾರೆ. ಆದ್ದರಿಂದ, ಮೊದಲು ರಾಜ್ಯ ಸರ್ಕಾರ ಖರೀದಿ ಮಾಡಿ ಅನಂತರ ಕೇಂದ್ರದಿಂದ ಹಣವನ್ನು ರಿಲೀಸ್ ಮಾಡಿಸಿಕೊಳ್ಳಬೇಕು.

(ಗೊಂದಲ)

ಉಪಾಧ್ಯಕ್ಷರು:- ಒಂದೇ ಬಾರಿ ಎಲ್ಲರೂ ಎದ್ದು ನಿಂತುಕೊಂಡು ಮಾತನಾಡಿದರೆ ಯಾವುದೂ ಕೂಡ ರೆಕಾರ್ಡ್‌ಗೆ ಹೋಗುವುದಿಲ್ಲ.

ಶ್ರೀ ಎಸ್.ಎಸ್.ಪಾಟೀಲ್:- ಮಾನ್ಯ ಬಿ. ಆರ್. ಪಾಟೀಲ್‌ರವರು ಸಹ ಎಪಿಎಂಸಿ ಛೇರ್ಮನ್ ಆಗಿದ್ದರು. ಆದ್ದರಿಂದ, ಎಪಿ ಎಂಸಿ ಹಣದಿಂದ ಏನು ಮಾಡುತ್ತೇವೆ ಎಂಬುದನ್ನು ಹೇಳಿ? ರೈತರಿಗೆ ಹಣ ಕೊಡುವುದರ ವಿರುದ್ಧ ನೀವು ಮಾತನಾಡುವುದು ತಪ್ಪು. ರೈತರಿಗೆ ಹಣ ಕೊಡುವುದಕ್ಕೋಸ್ಕರ ಮೊದಲು ನೀವು ಖರ್ಚು ಮಾಡಿ, ಅನಂತರ ಕೇಂದ್ರದಿಂದ ತರಿಸಿಕೊಳ್ಳತಕ್ಕಂಥ ಪದ್ಧತಿ ನಿಮಗೆ ಗೊತ್ತಿಲ್ಲವೆ? ಎಲ್ಲವನ್ನೂ ನಫೆಡ್ ಕೊಡಬೇಕೆಂದು ತಾವು ಹೇಳುವುದು ಸರಿಯಲ್ಲ. ಮೊದಲು ನೀವು ಖರ್ಚುಮಾಡಿ, ಅನಂತರ ಅವರೇ ಕೊಡುತ್ತಾರೆಯೋ ಅಥವಾ ಇಲ್ಲವೋ ಎಂಬುದನ್ನು ನೋಡಿ.

ಶ್ರೀ ಆರ್.ಬಿ. ತಿಮ್ಮಾಪುರ್:- ಮಾನ್ಯ ಸದಸ್ಯರು ಎಪಿಎಂಸಿ ಹಣದ ಬಗ್ಗೆ ಕೇಳಿದ್ದಾರೆ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ ಈಗ ಉತ್ತರ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ನಾನು ಮೊದಲು ಎಲ್ಲ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಆ ನಂತರ ಎಪಿಎಂಸಿ ಹಣದ ಬಗ್ಗೆ ನೀವು ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿ.

ಶ್ರೀ ಡಿ. ಆರ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ನಮ್ಮ ದೇಶದ ಪ್ರಧಾನ ಮಂತ್ರಿಗಳಾದ ಸನ್ಮಾನ್ಯ ಶ್ರೀ ಅಟಲ್ ಬಿಹಾರಿ ವಾಜಪೇಯಿರವರು ಪತ್ರಿಕೆಗೆ ನೀಡಿರತಕ್ಕಂಥ ಹೇಳಿಕೆಯನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ

"The farmers need not fear now. Measures have been taken to hike customs duty to face challenges posed by the World Trade Organisations." ಈ ರೀತಿಯಾದ ಸದ್ಬುದ್ಧಿ ನಮ್ಮ ಪ್ರಧಾನಮಂತ್ರಿಯವರಿಗೆ ಬರಬೇಕಾದರೆ 840 ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳಬೇಕಾಯಿತು.

(ಗೊಂದಲ)

ಶ್ರೀ ಎಸ್.ಸುರೇಶ್‌ಕುಮಾರ್:- ನಿಮ್ಮ ಕಾಂಗ್ರೆಸ್ಸಿಗರಾದ ಶ್ರೀ ಮನಮೋಹನ್ ಸಿಂಗ್ ಮತ್ತು ಮಾನ್ಯ ನರಸಿಂಹರಾವ್‌ರವರು ಹಾಗೂ ಮಾನ್ಯ ಪ್ರಣವ್‌ಮುಖರ್ಜಿ, ಇವತ್ತಿನ ಸ್ಥಿತಿಗೆ ಇವರೆಲ್ಲರೂ ಕೂಡ ಪಿತೃಗಳಾಗಿದ್ದಾರೆ. ಸುಮ್ಮನೆ ನೀವು ಯಾವುದೋ ಒಂದು ಲೇಖನವನ್ನು ಓದಿದರೆ ಹೇಗೆ? 1994 ರಲ್ಲಿ ಆದಂಥ ಈ ನಿರ್ಣಯವನ್ನು ಸುವರ್ಣಾಕ್ಷರಗಳಲ್ಲಿ ಬರೆಯಬೇಕು 830 ಜನ ರೈತರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ನಾವು ಕಾರಣಕರ್ತರೆಂದು ಎದೆ ತಟ್ಟಿಕೊಂಡು ಹೇಳಿಕೊಳ್ಳಿ.

ಶ್ರೀ ಡಿ.ಆರ್. ಪಾಟೀಲ್:- ವ್ಯಾಪಾರಸ್ಥರಿಗೆ ಅನುಕೂಲವಾಗುವ ರೀತಿಯಲ್ಲಿ ನೀವು ಮಾಡಿದ್ದೀರಿ. ಈ ರೀತಿಯಾಗಿ ನಾವು ಖಂಡಿತ ಮಾಡುತ್ತಿರಲಿಲ್ಲ. ಸನ್ಮಾನ್ಯ ಮನಮೋಹನ್ ಸಿಂಗ್‌ರವರು ಇದ್ದಿದ್ದರೆ 24 ಗಂಟೆಯಲ್ಲಿ ಕಸ್ಟಂ ಡ್ಯೂಟಿಯನ್ನು ಜಾಸ್ತಿ ಮಾಡುತ್ತಿದ್ದರು.

ಶ್ರೀ ಎ. ರಾಮದಾಸ್:- ಸನ್ಮಾನ್ಯ ಉಪಾಧ್ಯಕ್ಷರೆ, ನಮ್ಮ ದೇಶದ ಪ್ರಧಾನಮಂತ್ರಿಯವರು ನೀಡಿರತಕ್ಕಂಥ ಪತ್ರಿಕಾ ಹೇಳಿಕೆಯ ಒಂದು ಭಾಗವನ್ನು ಹಿರಿಯ ಸಚಿವರಾದ ಸನ್ಮಾನ್ಯ ಡಿ.ಆರ್. ಪಾಟೀಲ್‌ರವರು ಓದುವ ಬದಲು, ಇವೆಲ್ಲಕ್ಕೂ ಮೂಲಕ ಕಾರಣ ಯಾರು, ಹಾಗೆಯೇ ಈ ಮಗು ಯಾರದು ಎಂಬುದನ್ನು ಮತ್ತು ಗ್ಯಾಟ್ ಹಾಗೂ ಡಬ್ಲ್ಯೂ.ಟಿ.ಓ.ಗೆ ಯಾರು ಸಹಿ ಮಾಡಿದ್ದಾರೆ ಎಂಬುದು ಅವರು ತಿಳಿದುಕೊಳ್ಳಬೇಕು. ಇವರ ಅಕ್ರಮ ಕೂಸನ್ನು ನಾವು ಬೆಳೆಸತಕ್ಕಂಥ ಹೊಣೆಭಾರ ನಮಗೆ ಬಂದಿದೆ ಎಂಬುದನ್ನು ಅವರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಡಿ. ಆರ್.ಪಾಟೀಲ್ :- ವ್ಯಾಪಾರಸ್ಥರು ನಿಮಗೆ ಸಪೋರ್ಟ್ ಮಾಡುತ್ತಾರೆಂಬ ಕಾರಣಕ್ಕಾಗಿ ಇದನ್ನು ನೀವು ಮಾಡಿದ್ದೀರಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ದೇಶದ ಪ್ರಧಾನ ಮಂತ್ರಿಯವರ ಬಗ್ಗೆ ಅವಹೇಳನ ಮಾಡಿದರೆ ನನಗೆ ಮಂತ್ರಿ ಸ್ಥಾನ ಕೊಡುತ್ತಾರೆಂದು ಮಾನ್ಯ ಡಿ.ಆರ್. ಪಾಟೀಲ್‌ರವರು ತಿಳಿದುಕೊಂಡಿದ್ದಾರೆಂದು ಕಾಣುತ್ತದೆ. ಪ್ರಧಾನಮಂತ್ರಿಯವರ ಬಗ್ಗೆ ಹಗುರವಾಗಿ ಮಾತನಾಡುವುದಕ್ಕೆ ಹೋಗಬೇಡಿ. ಇಂಥ ಒಬ್ಬ ಒಳ್ಳೆಯ ಪ್ರಧಾನಮಂತ್ರಿಯವರನ್ನು ಪಡೆದಿರುವಂಥದ್ದು ನಮ್ಮ ದೇಶದ ಸೌಭಾಗ್ಯ.

(ಗೊಂದಲ)

ಶ್ರೀ ಸಿ.ಚೆನ್ನಿಗಪ್ಪ:- ಕೇಂದ್ರ ಮತ್ತು ರಾಜ್ಯಸರ್ಕಾರದ ಜಗಳದಲ್ಲಿ ನಮ್ಮ ರಾಜ್ಯದ ರೈತರ ಹೊಟ್ಟೆಯ ಮೇಲೆ ತಣ್ಣೀರಿನ ಬಟ್ಟೆಯನ್ನು ಹಾಕಿದ್ದೀರಿ. ಇದನ್ನು ಇಬ್ಬರು ಅರ್ಥ ಮಾಡಿಕೊಳ್ಳಬೇಕು.

ಶ್ರೀ ಎಂ.ಚಂದ್ರಪ್ಪ:- ''ಗಂಡ-ಹೆಂಡತಿ ಜಗಳದಲ್ಲಿ ಕೂಸು ಬಡವಾಯಿತು'' ಎಂಬಂತರೆ ನಮ್ಮ ದೇಶದ ರೈತರು ಎರಡು ಸರ್ಕಾರಕದಕ್ಕೂ ಛೀಮಾರಿ ಹಾಕಬೇಕಾಗುತ್ತದೆ.

ಶ್ರೀ ಜಗದೀಶ್ ಶೆಟ್ಟರ್:- ಡಬ್ಲ್ಯೂ.ಟಿ.ಓ. ಮತ್ತು ಗ್ಯಾಟ್ ಒಪ್ಪಂದಕ್ಕೆ ಯಾರ್ಯಾರು ಸಹಿ ಮಾಡಿದ್ದಾರೆ ಎಂಬುದನ್ನು ಮತ್ತು ರೈತರ ಆತ್ಮಹತ್ಯೆಯ ಪಾಪದ ಹೊಣೆಗೆ ಯಾರ್ಯಾರು ಕಾರಣಕರ್ತರು ಎಂಬುದರ ಬಗ್ಗೆ ದೀರ್ಘವಾಗಿ ಚರ್ಚೆ ಆಗಬೇಕಾಗಿದೆ. ಈ ಒಂದು ಜವಾಬ್ದಾರಿಯನ್ನು ನಿಭಾಯಿಸುವುದಕ್ಕೆ ಎಷ್ಟು ಜನ ಮುಖ್ಯ ಮಂತ್ರಿಗಳು ವಿಫಲರಾಗಿ ರೈತರ ಆತ್ಮಹತ್ಯೆಗೆ ಕಾರಣರಾಗಿರುವ ಬಗ್ಗೆ ಚರ್ಚೆ ಆಗಬೇಕಾಗಿದೆ. ಇವತ್ತಿನ ದಿವಸ ರೈತರಿಗೆ ಒಂದು ಪೈಸೆಯನ್ನು ಕೊಡದೇ ರೈತರ ಆತ್ಮಹತ್ಯೆಗೆ ನಮ್ಮ ರಾಜ್ಯ ಸರ್ಕಾರವೇ ಕಾರಣವಾಗಿದೆ 8- 10 ಜನ ರೈತರು ಈಗಾಗಲೇ ನಮ್ಮ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇದಕ್ಕೆ ಮುಖ್ಯಮಂತ್ರಿಯವರು ಜವಾಬ್ಧಾರಿಯಾಗಬೇಕಾಗುತ್ತದೆ. ಖರೀದಿ ಕೇಂದ್ರ ಮಂದಗತಿಯಲ್ಲಿ ಆಗದೇ ಇದ್ದುದರಿಂದ ರೈತರು ಸಾಲಸೋಲ ಮಾಡಿಕೊಂಡಿದ್ದರಿಂದ ಮಾನಸಿಕವಾಗಿ ವ್ಯಥೆಗೊಂಡು ರಾಜ್ಯಸರ್ಕಾರದ ವೈಫಲ್ಯದಿಂದ ಇವತ್ತಿನದಿವಸ ರೈತರು ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ಬಂದಿದೆ. ಇದಕ್ಕೆ ಮಾನ್ಯ ಮುಖ್ಯಮಂತ್ರಿಯವರ ಕಾರಣರಾಗಿರುತ್ತಾರೆ. ಆದ್ದರಿಂದ ಇದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಯ ವರೆ ಉತ್ತರ ಕೊಡಬೇಕಾಗುತ್ತದೆ. ಹಾಗೆಯೇ ಡಬ್ಲ್ಯೂ.ಟಿ.ಓ. ಮತ್ತು ಗ್ಯಾಟ್ ಒಪ್ಪಂದಕ್ಕೆ ಯಾರ್ಯಾರು ಸಹಿ ಮಾಡಿದ್ದಾರೆ ಎಂಬುದರ ಬಗ್ಗೆಯೂ ಕೂಡ ಚರ್ಚೆ ಆಗಬೇಕಾಗಿದೆ. ಸುಮ್ಮನೆ ಬೇಜವಾಬ್ಧಾರಿಯೊಂದ ಯಾವುದೊ ಒಂದು ಸ್ಟೇಟ್‌ಮೆಂಟ್ ಹಿಡಿದುಕೊಂಡು ಹೇಳುವ ನಡವಳಿಕೆ ಸರಿಯಲ್ಲ. ಇವತ್ತು ಇಲ್ಲಿ ನಾನು ಒಂದು ಪ್ರಸ್ತಾಪವನ್ನು ಮಂಡಿಸುತ್ತಿದ್ದೇನೆ.

5. 10 ಪಿ.ಎಂ.

(ಗೊಂದಲ)

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಉಪಾಧ್ಯಕ್ಷರೆ, ತಮ್ಮಲ್ಲಿ ನನ್ನದೊಂದು ಪ್ರಾರ್ಥನೆ. ಮಾನ್ಯ ವಿರೋಧ ಪಕ್ಷದ ನಾಯಕರು ಯಾವ ವಿಷಯದ ಮೇಲೆ ಮಾತನಾಡುತ್ತಿದ್ದಾರೋ ಅದಕ್ಕೆ ಪೂರಕವಾಗಿ ರಾಜ್ಯ ಪಾಲರು ಕೃತಜ್ಞಾಪೂರ್ವಕವಾದ ವಂದನೆಗಳನ್ನು ನಾನು ಇನ್ನು ಸಮರ್ಪಿಸಿರುವುದಿಲ್ಲ.. ನಾನು ಮೂರುದಿನದಿಂದ ಇಲ್ಲಿಯೇ ಕುಳಿತುಕೊಂಡಿದ್ದೇನೆ. ಈ ಜಗದಿಂದ ನಾನು ಮೇಲಕ್ಕೆ ಎದ್ದಿರುವುದಿಲ್ಲ. ಅವರು ಪದೇ ಪದೇ ಚರ್ಚೆಯಾಗಬೇಕೆಂದು ಹೇಳುತ್ತಿದ್ದಾರೆ, ಚರ್ಚೆಯಾಗಲೆಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಉಪಾಧ್ಯಕ್ಷರೆ, ನಾನು ಈಲ್ಡ್ ಆಗಿರುವುದಿಲ್ಲ. ಮಾನ್ಯ ರಾಮಯ್ಯನವರು ಹಿರಿಯ ಸದಸ್ಯರಾಗಿದ್ದಾರೆ, ನಾನು ಅವರು ಮಾತನಾಡುವುದನ್ನು ಕೇಳುತ್ತೇನೆ. ನಿಮಗೆ ಅವಕಾಶವನ್ನು ಕೊಟ್ಟಾಗ ತಾವು ಮಾತನಾಡಬಹುದು.

ಶ್ರೀ ವೈ.ಕೆ. ರಾಮಯ್ಯ:- ಲಿಬರಲೈಜೇಶನ್ ಗ್ಲೋಬಲೈಜೆಶನ್ ಬಗ್ಗೆ ಅವರು ಮಾತನಾಡುತ್ತಿದ್ದಾರೆ, ಅದಕ್ಕಾಗಿ ಚರ್ಚೆಯನ್ನು ಪ್ರಾರಂಭ ಮಾಡಿಬಿಡಿ.

ಉಪಾಧ್ಯಕ್ಷರು : ತಮಗೆ ಅವಕಾಶವನ್ನು ಕೊಡುತ್ತೇನೆ, ತಾವು ಆಗ ಮಾತನಾಡಿ.

ಶ್ರೀ ಡಿ.ವಿ. ಸದಾನಂದಗೌಡ:- ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮೂರು ದಿವಸ ವಿಶೇಷ ಅಧಿವೇಶನ ಕರೆಯುತ್ತೇನೆಂದು ಹೇಳಿದವರು ಈಗ ಅವರು ಎಲ್ಲಿದ್ದಾರೆ? ಈಗ ಅವರು ಕಾಣೆಯಾಗಿ ಬಿಟ್ಟಿದ್ದಾರೆ.

ಶ್ರೀ ವೈ.ಕೆ. ರಾಮಯ್ಯ:- ಅವರು ಬೇಡ, ಈಗ ತಾವು ಪ್ರಾರಂಭ ಮಾಡಿ.

ಶ್ರೀ ಜಗದೀಶ್ ಶೆಟ್ಟರ್:- ಆದರ ಬಗ್ಗೆ ಒಂದು ವಿಶೇಷ ಅಧಿವೇಶನವನ್ನು ಕರೆಯೋಣ.

ಶ್ರೀ ಡಿ.ಬಿ.ಚಂದ್ರೇಗೌಡ(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಲೆಬರಲೈಜೇಶನ್ ಬಗ್ಗೆ ಚರ್ಚೆ ಮಾಡುವುದಕ್ಕೆ ನಮ್ಮ ಅಭ್ಯಂತರವೇನಿಲ್ಲ.ಅಧಿವೇಶನ ಕರೆದಾಗ ವಿಷಯಾಂತರವಾಗುತ್ತದೆ, ಅಧಿವೇಶನವನ್ನು ಕರೆಯದಿದ್ದರೆ ಏಕೆ ಕರೆಯುವುದಿಲ್ಲವೆಂದು ಕೇಳುತ್ತಾರೆ. ರಾಜ್ಯ ಸರ್ಕಾರದ ಜವಾಬ್ದಾರಿ ಎಷ್ಟು? ಕೇಂದ್ರ ಸರ್ಕಾರದ ಜವಾಬ್ದಾರಿ ಎಷ್ಟು? ಸಂಬಂಧ ಏನು ಲಿಬರಲೈಜೇಶನ್ ಹಾಗೂ ಗ್ಲೋಬಲೈಜೇಶನ್ ಮತ್ತು ಗ್ಯಾಟ್ ಅಗ್ರಿಮೆಂಟ್‌ಗೂ ಇದರ ಬಗ್ಗೆ ವಿಶಿಷ್ಟವಾಗಿ ಚರ್ಚೆಯಾಗಬೇಕು. ನಮಗೆ ತಿಳಿದಂತೆ ಹೇಳುತ್ತಾ ಹೋದರೆ ವರ್ಲ್ಡ್ ಟ್ರೇಡ್ ಆರ್ಗನೈಶನ್‌ಗೆ ಸಹಿ ಹಾಕಿ, ತಾವು ನಾನು ಹೇಳುವುದನ್ನು ಕೇಳಬೇಕು. ನೀವು ಈಗಾಗಲೇ ಮಾನ್ಯ ರಾಜ್ಯಪಾಲರ ಭಾಷಣದ ಪ್ರತಿಯನ್ನು ಹಿಡಿದುಕೊಂಡು ಮಾತನಾಡುತ್ತಿದ್ದೀರಿ. ಅದರಲ್ಲಿಯೇ ಚರ್ಚೆ ಮಾಡಬಹುದೆಂದು ನಾನು ಮೊದಲಿನಿಂದಲೇ ಹೇಳುತ್ತಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಮಾನ್ಯ ರಾಮಯ್ಯನವರು ಪ್ರಾರಂಭ ಮಾಡಿಬಿಟ್ಟಿದ್ದರೆ, ಒಳ್ಳೆಯದು ಇತ್ತು.

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಉಪಾಧ್ಯಕ್ಷರೆ, I am referring to the Governor's Address specificailly only in connection with the farmers' problem, not of entirely, but only connected to farmers' problem. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಇವರು ಹೇಳುತ್ತಾರೆ. ಆಗಲೇ ಮಾನ್ಯ ಸಚಿವರು ಉತ್ತರವನ್ನು ಕೊಡಲಿಲ್ಲ. ಅದಕ್ಕಾಗಿ ನನಗೆ ಏನು ಒಂದು ಸಂಶಯ ಬರುತ್ತದೆಂದು 75 ಕೋಟಿ ರೂಪಾಯಿಗಳ ಆವರ್ತನಿಧಿ ಸಂಗ್ರಹವಾಗಿರುವುದಿಲ್ಲ. ಕೃಷಿ ಮಾರುಕಟ್ಟೆಯಲ್ಲಿ ಅದರಲ್ಲೂ ಹಣ್ಣು ಹೂವು ತರಕಾರಿಗಳಂತಹ ಬೇಗನೆ ನಶಿಸುವ ಉತ್ಪನ್ನಗಳ ಮಾರುಕಟ್ಟೆಯಲ್ಲಿ ಮಧ್ಯೆ ಪ್ರವೇಶಿಸುವುದಕ್ಕೆ ನಿರಂತರವಾಗಿ ಅವಶ್ಯಕ ಹಣಕಾಸು ಒದಗಿಸಬೇಕಾದ ಅಗತ್ಯವನ್ನು ಮನಗಂಡು ಸರ್ಕಾರವು 75 ಕೋಟಿ ರೂಪಾಯಿಗಳ ಆವರ್ತಕ ನಿಧಿಯನ್ನು ಸ್ಥಾಪಿಸಿದೆ ಅಷ್ಟೇ. ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಈ ನಿಧಿಗೆ 50 ಕೋಟಿ ರೂಪಾಯಿಗಳನ್ನು ನೀಡುತ್ತವೆ ಅಷ್ಟೆ, ಮುಂದೆ ಹಣವನ್ನು ನೀಡುತ್ತವೆ. ರಾಜ್ಯ ಸರ್ಕಾರ 25 ಕೋಟಿ ರೂಪಾಯಿಗಳನ್ನು ನೀಡುತ್ತದೆ. ರೈತರು ಆತ್ಮಹತ್ಯೆಯನ್ನು ಮಾಡಿಕೊಂಡಮೇಲೆ ಹಣವನ್ನು ನೀಡುತ್ತವೆಯೇ? ಈಗಾಗಲೇ 10ಜನ ರೈತರು ಸತ್ತಿದ್ದಾರೆ. ಇನ್ನುಳಿದ ರೈತರು ಆತ್ಮಹತ್ಯೆ ಮಾಡಿಕೊಂಡ ಮೇಲೆ 50 ಕೋಟಿ ರೂಪಾಯಿಗಳನ್ನು ಕೊಡುತ್ತೀರಾ? ನನಗೆ ರಾಜ್ಯ ಸರ್ಕಾರದ ವೈಖರಿಯ ಬಗ್ಗೆ ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸರ್ಕಾರದವರು ಆವರ್ತನಿಧಿ 100 ಕೋಟಿ ರೂಪಾಯಿಗಳನ್ನು ಕೊಡಬೇಕು ಎಂದು

ಹೇಳುತ್ತಿದ್ದಾರೆ. ಏನಿದರ ಅರ್ಥ? ಕಂಪ್ಯೂಟರ್‌ನ್ನು ಖರೀದಿ ಮಾಡಿದಕ್ಕೆ ಇವತ್ತು 25 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ, ಮಾಹಿತಿ ತಂತ್ರಜ್ಞಾನವನ್ನು ಮಾಡುವುದಕ್ಕೆ 100ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ, ಆದರೆ ಆವರ್ತನಿಧಿಗೆ 100 ಕೋಟಿ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ.

ಶ್ರೀ ವೈ.ಕೆ. ರಾಮಯ್ಯ :- ಮಾನ್ಯ ಉಪಾಧ್ಯಕ್ಷರೆ, ಇದರ ಬಗ್ಗೆ ನನ್ನ ಹಕ್ಕು ಚ್ಯುತಿ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರೆ, ಒಂದು ನಿಮಿಷ ಕೇಳಬೇಕು.

ಶ್ರೀ ಜಗದೀಶ್ ಶೆಟ್ಟರ್:- ನಾನು ಮಾತನಾಡಿ ಮುಗಿಸುತ್ತೇನೆ.

ಉಪಾಧ್ಯಕ್ಷರು:- ತಾವು ಒಂದು ನಿಮಿಷ ಈಲ್ಡ್ ಆಗಬೇಕು, ಏನೋ ಮಾತನಾಡಬೇಕೆಂದು ಹೇಳುತ್ತಿದ್ದಾರೆ, ಮಾನ್ಯ ರಾಮಯ್ಯನವರೆ ತಾವು ಮಾತನಾಡಿ.

ಶ್ರೀ ವೈ.ಕೆ.ರಾಮಯ್ಯ :- ಮಾನ್ಯ ಉಪಾಧ್ಯಕ್ಷರೆ , ಕುದುರೆಯ ಮುಂದೆ ಗಾಡಿ ಕಟ್ಟೋಣವೆ ಅಥವಾ ಗಾಡಿ ಮುಂದೆ ಕುದುರೆಯನ್ನು ಕಟ್ಟೋಣವೇ? ರಾಜ್ಯಪಾಲರ ಭಾಷಣದ ವಿಷಯದಲ್ಲಿ ವಂದನಾ ನಿರ್ಣಯವನ್ನು ಈ ಸದನದಲ್ಲಿ ನಾನು ಇನ್ನೂ ಮಂಡಿಸಿರುವುದಿಲ್ಲ, ವಂದನಾ ನಿರ್ಣಯವನ್ನು ಮಂಡಿಸುವುದಕ್ಕೆ ಮೊದಲೇ ಮಾನ್ಯ ರಾಜ್ಯಪಾಲರ ಭಾಷಣದ ಬಗ್ಗೆ ಪ್ರಸ್ತಾವನೆ ಮಾಡಲಿಕ್ಕೆ ಸಾಧ್ಯತೆ ಇದೆಯೇ? ಎನ್ನುವುದರ ಬಗ್ಗೆ ಮಾನ್ಯ ನಮ್ಮ ಹಿರಿಯ ಸದಸ್ಯರಿದ್ದಾರೆ ಅವರು ಒಪ್ಪಿಕೊಳ್ಳುವುದಾದರೆ ಇದರ ಬಗ್ಗೆ ನನ್ನ ಅಭ್ಯಂತರವೇನಿಲ್ಲ. ನನ್ನ ಪ್ರಶ್ನೆ ಇಷ್ಟೇ ಇದರ ಬಗ್ಗೆ ತಾವು ಒಂದು ರೂಲಿಂಗ್ ಕೊಡಬೇಕು ಸ್ವಾಮಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಮಯ್ಯನವರು ಹಿರಿಯ ಸದಸ್ಯರು ಹಾಗೂ ಕಿರಿಯ ರಾಜಕಾರಣಿಗಳಾಗಿದ್ದಾರೆ. ಅವರು ಕೂಡ ತಾಂತ್ರಿಕತೆಯ ಬಗ್ಗೆ ಹೋಗುತ್ತಾರೆಂದರೆ ನನಗೆ ಅರ್ಥವಾಗುತ್ತಿಲ್ಲ. ಇವತ್ತು ನಾವು ರಾಜ್ಯಪಾಲರ ಭಾಷಣವನ್ನು ರೆಫರ್ ಮಾಡಲಿ ಬಿಡಲಿ, ಸರ್ಕಾರ ಮೂರು ತಿಂಗಳ ಹಿಂದೆಯೆ 100 ಕೋಟಿ ರೂಪಾಯಿಗಳನ್ನು ಆವರ್ತನಿಧಿಯಾಗಿ ಕೊಡುತ್ತದೆಂದು ಘೋಷಣೆ ಮಾಡಿದೆ. ಉಲ್ಲೇಖ ಮಾಡುವುದಕ್ಕೂ ಹಕ್ಕು ಇದೆ. ಒಂದು ಸಲ ರಾಜ್ಯಪಾಲರು ಸದನದಲಿ ಭಾಷಣ ಮಾಡಿ ಹೋದಮೇಲೆ, ನಿಮ್ಮ ಪ್ರಕಾರ ರಾಜ್ಯಪಾಲರ ಪುಸ್ತವನ್ನು ತೆಗೆಯದೇ, ಮಾನ್ಯ ರಾಜ್ಯಪಾಲರು ಹೇಳಿದ್ದಾರೆ ಎನ್ನುವ ಪತ್ರಿಕೆಯ ವರದಿಯ ಬಗ್ಗೆ ಹೇಳುತ್ತೇವೆ. ನಮ್ಮ ಹಿರಿಯ ಸದಸ್ಯರು ಈ ರೀತಿಯಾಗಿ ಏಕೆ ಮಾಡುತ್ತಾರೆನ್ನುವ ಬಗ್ಗೆ ನನಗೆ ವಿಚಿತ್ರವಾಗುತ್ತಿದೆ. ಇದು ಹೋಗಲಿ. ಸರ್ಕಾರದವರು ಕಂಪ್ಯೂಟರ್ ಖರೀದಿ ಮಾಡುವುದಕ್ಕೆ 25 ಕೋಟಿ ರೂಪಾಯಿಗಳನ್ನು ಕೊಡುತ್ತಾರೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯ್ಲಿಯವರು ಆರ್ಥಿಕ ಸುಧಾರಣೆ ಆಯೋಗದ ಒಂದು ವರದಿಯನ್ನು ಮೊನ್ನೆ ಕೊಟ್ಟಿದ್ದಾರೆ. ಅವರು ಒಂದು ಒಳ್ಳೆಯ ಕೆಲಸವನ್ನು ಮಾಡಿರುತ್ತಾರೆ. ಮೊಯ್ಲಿಯವರನ್ನು ನಾವು ಅಪ್ರಿಷಿಯೇಟ್ ಮಾಡಬೇಕು. ಅವರು ಬಹಳ ಡೀಟೇಲ್ ಆಗಿ ಅಭ್ಯಾಸ ಮಾಡಿ ಇವತ್ತು ರಾಜ್ಯದ ಆರ್ಥಿಕ ಪರಿಸ್ಥಿತಿ ಯಾವ ರೀತಿ ಇದೆ, ಯಾವ ರೀತಿಯಾಗಿ ನಾವು ಆರ್ಥಿಕ ಸುಧಾರಣೆ

ಮಾಡಬೇಕು. ಟ್ಯಾಕ್ಸೇಶನ್ ಎಲ್ಲಿ ನಾವು ಇಂಪ್ರೂವ್ ಮಾಡಬೇಕು, ಇದರ ಬಗ್ಗೆ ಎಲ್ಲಿ ಹೆಚ್ಚು ಒತ್ತು ಕೊಡಬೇಕು, ಎಲ್ಲಿ ಸೋರಿ ಹೋಗುತ್ತಿದೆ ಎನ್ನುವ ಬಗ್ಗೆ ಸೀಮಿತವಾದ ಒಂದು ವರದಿಯನ್ನು ಕೊಟ್ಟಿರುತ್ತಾರೆ. ಅವರು ಮಾನ್ಯ ಮುಖ್ಯಮಂತ್ರಿಗಳಿಗೆ ವರದಿಯನ್ನು ಸಲ್ಲಿಸಿದ್ದಾರೆ, ಅದರ ಬಗ್ಗೆ ಪತ್ರಿಕೆಯಲ್ಲಿ ಬಂದಿರುತ್ತದೆ. ಮಾನ್ಯ ಮೊಯ್ಲಿಯವರು ಹೇಳಿದ ಪ್ರಕಾರ ಅಬಕಾರಿ ಲಾಬಿಯಿಂದ 1,450 ಕೋಟಿ ರೂಪಾಯಿಗಳು ಸೋರಿ ಹೋಗುತ್ತಿದೆ. ಇದನ್ನು ಇವರಿಂದ ವಸೂಲು ಮಾಡುವುದಕ್ಕಾಗುವುದಿಲ್ಲ, ಮತ್ತು ಇವರಿಂದ ಆವರ್ತನಿಧಿಗೆ 100 ಕೋಟಿ ರೂಪಾಯಿಗಳನ್ನು ಕೊಟ್ಟು ಸ್ಥಾಪನೆ ಮಾಡುವುದಕ್ಕಾಗುವುದಿಲ್ಲ. ಮಾನ್ಯ ವೀರಪ್ಪ ಮೊಯ್ಲಿಯವರ ವರದಿಯನ್ನು ತಕ್ಷಣವೇ ಸದನಕ್ಕೆ ಮಂಡನೆ ಮಾಡಬೇಕಾಗಿತ್ತು. ಇದನ್ನು ಸಾರ್ವಜನಿಕವಾಗಿ ಪ್ರಕಟ ಮಾಡಬೇಕಾಗಿತ್ತು, ಇವತ್ತು ರಾಜ್ಯಪಾಲರ ಭಾಷಣದ ಮೇಲೆ ಅದನ್ನು ರೆಫರ್ ಮಾಡಿದ್ದಾರೆಂದರೆ ಅದು ಸದನದ ಸ್ವತ್ತಾಗುತ್ತದೆ. ಅದನ್ನು ಸಾರ್ವಜನಿಕವಾಗಿ ಬಹಿರಂಗ ಮಾಡದೆ ಏಕೆ ಮುಚ್ಚಿಟ್ಟಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ನಾನು ಸಂಬಂಧಪಟ್ಟವರಿಗೆ ಈ ಆಯೋಗದ ವರದಿಯ ಒಂದು ಪ್ರತಿಯನ್ನು ಕಳುಹಿಸಿಕೊಡಬೇಕೆಂದು ಕೇಳಿದಾಗ ಅದನ್ನು ಕೊಡುವುದಕ್ಕೆ ಬರುವುದಿಲ್ಲವೆಂದು ಹೇಳಿದರು, ಇದು ಪತ್ರಿಕೆಯಲ್ಲಿ ಬಂದಿದೆ. ಬಜೆಟ್ ಮಂಡನೆಯಾದ ಮೇಲೆ ಆ ವರದಿಯ ಪ್ರತಿಯನ್ನು ಕೊಡುತ್ತೇವೆ ಅಲ್ಲಿಯವರೆಗೆ ಕೊಡುವುದಿಲ್ಲ ವೆಂದು ನನಗೆ ಪತ್ರ ಬಂದಿರುತ್ತದೆ. ಆ ವರದಿಯಲ್ಲಿ ಅಂತಹ ಸೀಕ್ರೇಟ್ ವಿಷಯ ಏನಿದೆ. ನನಗೆ ಅರ್ಥವಾಗುವ ಪ್ರಕಾರ ಉತ್ಪನ್ನಗಳ ಲೀಕೇಜ್ ಬಗ್ಗೆ ಅದರಲ್ಲಿ ಮೆನ್‌ಷನ್ ಮಾಡಿರಬೇಕು. ಅಬಕಾರಿ ಯಾವ ರೀತಿಯಾಗಿ ಸೋರಿ ಹೋಗುತ್ತಿದೆ ಅದೇ ರೀತಿ ಬೇರೆ ಬೇರೆಯದ್ದು ಸೋರಿ ಹೋಗುತ್ತಿದೆ. ಅದಕ್ಕಾಗಿ ಇದನ್ನು ರಾಜ್ಯ ಸರ್ಕಾರ ಬಹಿರಂಗ ಮಾಡುವುದಕ್ಕೆ ತಯಾರಿಲ್ಲವೆಂದು ನನ್ನ ಭಾವನೆಯಾಗಿದೆ. ರಾಜ್ಯದ ರೈತರ ಪರಿಸ್ಥಿತಿಯನ್ನು ನೋಡಿ, ಇವತ್ತು ಇವರು ಕೇಂದ್ರ ಸರ್ಕಾರದ ಕಡೆ ನೋಡಿದೆ, 200 ಕೋಟಿ ರೂಪಾಯಿಗಳ ಆವರ್ತನಿಧಿಯನ್ನು ಪ್ರಾರಂಭ ಮಾಡಬೇಕಾಗಿತ್ತು. ಯಾವುದಕ್ಕೋ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಇವತ್ತು ಲಕ್ಷಾಂತರ ಜನ ರೈತರು ಸಾಯುತ್ತಿದ್ದಾರೆ. ಇವರು 200 ಕೋಟಿ ರೂಪಾಯಿಗಳ ಆವರ್ತನಿಧಿಯನ್ನು ಏಕೆ ಸ್ಥಾಪನೆ ಮಾಡಿಲ್ಲ. ಮಾಡಿದ್ದರೆ ಇವರ ಗಂಟು ಏನು ಹೋಗುತ್ತಿತ್ತು. ಇದನ್ನು ಇವರು ಮಾಡಬೇಕಾಗಿತ್ತು. ಮಾನ್ಯ ಖರ್ಗೆಯವರು ಇಲ್ಲಿಯೇ ಇದ್ದಾರೆ, ಮೆಕ್ಕೆಜೋಳ ಹಾಗೂ ತೊಗರಿ ಖರೀದಿ ಕೇಂದ್ರಗಳ ಬಗ್ಗೆ ಒಂದು ಉದಾಹರಣೆಯನ್ನು ಕೊಡಬೇಕು. ತೊಗರಿ ಇವತ್ತು 250 ಕೋಟಿ ರೂಪಾಯಿಗಳಷ್ಟು ಮಾರುಕಟ್ಟೆಗೆ ಬರುತ್ತಿದೆ. ರಾಜ್ಯ ಸರ್ಕಾರ ಮೊದಲು ಪ್ರಕಟ ಮಾಡಿದ್ದು ಒಂದು ಕೋಟಿ ರೂಪಾಯಿಗಳ ಆವರ್ತನಿಧಿ, ಮತ್ತೆ 3 ಕೋಟಿ ರೂಪಾಯಿಗಳ ಆವರ್ತನಿಧಿ ಮಾಡಿತ್ತು; ಅಂದರೆ ಜನರ ಚಳುವಳಿ ಹಾಗೂ ಒತ್ತಡಗಳಿಂದ ಮಾಡಲಾಯಿತು. ಕನಿಷ್ಟ ರೈತರ ತೊಗರಿಯನ್ನು ಖರೀದಿ ಮಾಡಲು 20-30 ಕೋಟಿ ರೂಪಾಯಿಗಳ ಆವರ್ತನಿಧಿಯನ್ನು ಕೊಟ್ಟಿದ್ದಾರೆ. ಮಾರ್ಕೇಟ್ ಇಂಟರ್‌ವೆನ್‌ಷನ್ ಮಾಡಿದ್ದಾರೆ ಇಷ್ಟೊಂದು ತೊಂದರೆಯಾಗುತ್ತಿರಲಿಲ್ಲ. ಇಷ್ಟೊಂದು ಒತ್ತಡ ಬೀಳುತ್ತಿರಲಿಲ್ಲ. ಇವರು ಮಂದಗತಿಯಲ್ಲಿ ಖರೀದಿ ಕೇಂದ್ರವನ್ನು ತೆರೆದಿರುವುದರಿಂದ ಇವತ್ತಿನ ದಿವಸ ಖರೀದಿ

ಮಾಡುವ ಕೆಲಸ ನಿಧಾನವಾಗಿದೆ. ಇದಕ್ಕಾಗಿ ರಾಜ್ಯ ಸರ್ಕಾರದವರು ಆವರ್ತನಿಧಿಯನ್ನು ಇಡಲಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಅದನ್ನು ಇವರು ಮಾಡಿಲ್ಲ. ಇವರಿಗೆ ಎಲ್ಲಾ ಕೇಂದ್ರ ಸರ್ಕಾರವೇ ಮಾಡುವುದಾದರೆ ರಾಜ್ಯ ಸರ್ಕಾರ ಏತಕ್ಕಾಗಿ ಇರಬೇಕು? ಕರ್ನಾಟಕ ರಾಜ್ಯದಲ್ಲಿರುವಂತಹ ರೈತರು ಸಿಟಿಜನ್ ಅಲ್ಲವೋ ರಾಜ್ಯ ಸರ್ಕಾರದವರು ಇವರ ಬಗ್ಗೆ ಏಕೆ ಇಷ್ಟು ನಿಷ್ಕಾಳಜಿ ಮಾಡುತ್ತಿದ್ದಾರೆಂಬುದು ನನಗಂತೂ ಅರ್ಥವಾಗುತ್ತಿಲ್ಲ. ಅದಕ್ಕಾಗಿ ನಾನು ಇಲ್ಲಿ ಕೆಲವು ಬೇಡಿಕೆಗಳನ್ನು ಇಡುತ್ತಿದ್ದೇನೆ. ರಾಜ್ಯ ಸರ್ಕಾರವು ತಕ್ಷಣ 200 ಕೋಟಿ ರೂಪಾಯಿಗಳ ಆವರ್ತನಿಧಿಯನ್ನು ಸ್ಥಾಪನೆ ಮಾಡಬೇಕು. ಇವತ್ತಿನ ದಿವಸ ಖರೀದಿ ಕೇಂದ್ರಗಳಲ್ಲಿ ದೊಡ್ಡ ರೀತಿಯಲ್ಲಿ ತೀವ್ರಗತಿಯಿಂದ ಖರೀದಿ ಮಾಡುವ ಪ್ರಕ್ರಿಯೆ ಆಗಬೇಕಾಗಿದೆ. ಮೆಕ್ಕೆ ಜೋಳದ ಖರೀದಿಯನ್ನು ನಿಲ್ಲಿಸದೆ ಕಂಟಿನ್ಯೂ ಆಗಿ ಮೆಕ್ಕೆಜೋಳವನ್ನು ಖರೀದಿ ಮಾಡುವ ಕೆಲಸ ಮುಂದುವರಿಯಬೇಕು. ರೈತರ ಬಗ್ಗೆ ನಾನು ಬಹಳ ಮುಖ್ಯವಾಗಿ ಹೇಳುವುದೇನೆಂದರೆ ಇವತ್ತಿನದಿವಸ ರೈತನು ಸಾಲಸೋಲಗಳನ್ನು ಮಾಡಿ ಸಾಲವನ್ನು ತೀರಿಸಲಾರದಂತಹ ಪರಿಸ್ಥಿತಿಯಲ್ಲಿದ್ದಾನೆ. ಆ ಸಾಲವು ಸೊಸೈಟಿ, ಬ್ಯಾಂಕ್, ಗ್ರಾಮೀಣ ಬ್ಯಾಂಕ್, ಖಾಸಗಿ ಕಡೆಯವರಿಂದ ಇರಬಹುದು. ನಾನು ಸಾಕಷ್ಟು ಕಡೆ ಪ್ರವಾಸ ಮಾಡಿದಂತಹ ಸಂದರ್ಭದಲ್ಲಿ ರೈತರು ತಮ್ಮ ಗೋಳನ್ನು ಹೇಳಿಕೊಳ್ಳುತ್ತಿದ್ದಾರೆ. ಇವತ್ತು ರೈತರ ಆಸ್ತಿಯನ್ನು ಜಪ್ತಿ ಮಾಡುವ ಬಗ್ಗೆ ಬ್ಯಾಂಕಿನಿಂದ ನೀವು ಸಾಲವನ್ನು ತೀರಿಸಬೇಕು ಇಲ್ಲದಿದ್ದರೆ ಮನೆಗೆ ಜಪ್ತಿಗೆ ಬರುತ್ತೇವೆಂದು ಬ್ಯಾಂಕಿನಿಂದ ರೈತರ ಮನೆಗೆ ನೋಟೀಸ್ ಹೋಗುತ್ತದೆ. ಎಷ್ಟೋ ಜನ ರೈತರು ಜೈಲಿನಲ್ಲಿ ಕೊಳೆಯುತ್ತಿದ್ದಾರೆ. ಹೀಗಾಗಿ ರಾಜ್ಯಸರ್ಕಾರ ಇವತ್ತಿನ ಪರಿಸ್ಥಿತಿಯನ್ನು ನೋಡಿಕೊಂಡು ಈ ಸಾಲ ವಸೂಲಾತಿಯನ್ನು ತಕ್ಷಣ ನಿಲ್ಲಿಸುವಂತೆ ಆದೇಶವನ್ನು ಕೊಡಬೇಕು. ರೈತನ ಮೇಲಿರುವ ಬಡ್ಡಿಯು ಮನ್ನಾ ಆಗಬೇಕು ಹಾಗೆಯೇ ಅಲ್ಪಾವಧಿ ಮತ್ತು ಮಧ್ಯಮಾವದಿ ಸಾಲದ ಅವಧಿಯನ್ನು ದೀರ್ಘಾವಧಿ ಸಾಲವನ್ನಾಗಿ ಪರಿವರ್ತನೆ ಮಾಡಬೇಕು. ಹೀಗೆ ಮಾಡಿದರೆ ಮಾತ್ರ ರೈತರಿಗೆ ಸಮಾಧಾನವನ್ನು ಮಾಡಿದಂತಾಗುತ್ತದೆ. ಇಲ್ಲದಿದ್ದರೆ ರೈತನ ಮನೆಗೆ ನೋಟೀಸ್ ಹೋಗಿ ಆತನ ಮನೆ ಜಪ್ತಿ ಮಾಡತಕ್ಕಂತಹ ಸಂಭವದಿಂದ ಆತನು ಮಾನಸಿಕವಾಗಿ ನೊಂದು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಉದ್ಭವವಾಗುತ್ತದೆ. ಇವತ್ತಿನದಿವಸ ರೈತರ ಹತ್ತಿರಹಣವೂ ಸಹ ಇಲ್ಲ, ಏಕೆಂದರೆ ಅವರಿಗೆ ಮಿನಿಮಮ್‌ಸಪೋರ್ಟ್ ಪ್ರೈಸ್ ಪ್ರಕಾರ ಬೆಲೆಯು ಅವರಿಗೆ ಸಿಗುತ್ತಿಲ್ಲ. ಆ ಬೆಲೆಯು ಸಿಕ್ಕಿದರೂ ಸಹ ಅದನ್ನು ಕಟಾಯಿಸುವಂತದ್ದು ಆಗಿದೆ. ರೈತನು ಏನು ಹಣವನ್ನು ಖರ್ಚು ಮಾಡಿದ್ದಾರೆ ಅದನ್ನು ನೀಗಿಸಲಾರದಂತಹ ಪರಿಸ್ಥಿತಿ ಒದಗಿಬಂದಿದೆ. ಇಂತಹ ಪರಿಸ್ಥಿತಿಯಲ್ಲಿ ಆತನು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಹೋಗುತ್ತಿದ್ದಾನೆ. ಅದ್ದರಿಂದ ಅಂತಹ ಪರಿಸ್ಥಿತಿಯಲ್ಲಿ ಸಾಲ ವಸೂಲಾತಿಯನ್ನು ಮಾಡುವುದನ್ನು ತಕ್ಷಣ ನಿಲ್ಲಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ರೈತರ ವಿದ್ಯುತ್ ಪಂಪ್‌ಸೆಟ್‌ಗಳಿಗೆ ಕನಿಷ್ಠ 10 ತಾಸಾದರೂ ನಿರಂತರವಾದಂತಹ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕೊಡಬೇಕು. ಒಂದೆರಡು ತಾಸು ವಿದ್ಯುಚ್ಛಕ್ತಿ ಸೌಲಭ್ಯವನ್ನು ಕೊಟ್ಟರೆ ಸಾಲದು, ಒಂದೆರಡು ತಾಸು ಮತ್ತು 4 ತಾಸು ಕರೆಂಟನ್ನು ತೆಗೆಯುತ್ತಾರೆ. ಈ ರೀತಿಯಾಗುವುದರಿಂದ ರೈತರ ಟ್ರಾನ್ಸ್‌ಫಾರ್ಮರ್‌ಗಳು ಸುಟ್ಟುಹೋಗಿವೆ. ಹೀಗಾಗಿ ರೈತರು ಅಲ್ಲಿ ಗೋಳಾಡುತ್ತಿದ್ದಾರೆ. ಅವರ ಪಂಪ್‌ಸೆಟ್ಟುಗಳಿಗೆ ಸತತವಾಗಿ ವಿದ್ಯುತ್‌ಚಕ್ತಿ

ಪೂರೈಕೆಯಾಗುತ್ತಿಲ್ಲ. ನೀವು 8 ಅಥವಾ 10 ತಾಸು ಕರೆಂಟ್ ಕೊಡಿ ಆದರೆ ನಿರಂತರವಾಗಿ ಅವರಿಗೆ ವಿದ್ಯುಚ್ಛಕ್ತಿ ಸೌಲಭ್ಯವನ್ನು ಕೊಡಬೇಕು. ಆ ಸೌಲಭ್ಯವನ್ನು ಕೊಡುವುದಕ್ಕೆ ಇವತ್ತು ಸರ್ಕಾರದಿಂದ ಆಗುತ್ತಿಲ್ಲ. ಹೀಗಾಗಿ ಇವತ್ತು ರೈತನು ಈ ಎಲ್ಲಾ ತೊಂದರೆಗಳನ್ನು ಅನುಭವಿಸುತ್ತಿದ್ದಾನೆ. ಇವತ್ತು ರಾಜ್ಯಸರ್ಕಾರದವರು ಕೇವಲ ಹೇಳಿಕೆಗಳನ್ನು ಘೋಷಣೆಗಳನ್ನು ಮಾಡುವುದನ್ನು ಬಿಟ್ಟರೆ ರೈತರ ಪರವಾಗಿ ನಾವು ಸ್ಪಂದನೆ ಮಾಡುತ್ತಿದ್ದೇವೆಂದು ಹೇಳುವಂತಾದ್ದು ಇದು ಕೇವಲ ತೋರಿಕೆಯ ಹಾಗೂ ಬೂಟಾಟಿಕೆಯ ಮಾತಾಗುತ್ತದೆ. ಅದಕ್ಕಾಗಿ ರಾಜ್ಯಸರ್ಕಾರದ ಈ ಒಂದು ರೈತರ ವಿರೋಧಿ ನೀತಿಯನ್ನು ನಾವು ಖಂಡಿಸಬೇಕಾಗುತ್ತದೆ ಇಲ್ಲದಿದ್ದರೆ ಈ ಒಂದು ರೈತರ ಸಮಸ್ಯೆಯನ್ನು ನೀಗಿಸುವುದಕ್ಕೆ ಸಾಧ್ಯವಿಲ್ಲ. ಎಲ್ಲೆಲ್ಲಿ ಖರೀದಿ ಕೇಂದ್ರಗಳನ್ನು ಮಾಡಿದ್ದಾರೆ, ಅಂಕಿಸಂಖ್ಯೆಗಳನ್ನು ಇವರು ತಕ್ಷಣ ಖರೀದಿ ಕೇಂದ್ರಗಳನ್ನು ಮಾಡಿದ್ದಾರೆ ಮತ್ತು ಎಷ್ಟು ಕ್ವಾಂಟಿಟಿಯನ್ನು ಖರೀದಿ ಮಾಡಿದ್ದಾರೆ ಇದರ ಅಂಕಿಸಂಖ್ಯೆಗಳು ಬೇಕಾಗಿದೆ. ಮೆಕ್ಕೆಜೋಳವನ್ನು ಇಲ್ಲಿಯವರೆವಿಗೆ ಎಷ್ಟು ಖರೀದಿಮಾಡಿದ್ದಾರೆ, ಎಷ್ಟು ಖರೀದಿ ಕೇಂದ್ರಗಳಾಗಿವೆ, ಖರೀದಿ ಕೇಂದ್ರ ತೆಗೆದಿದ್ದು ಅದು ಇನ್ನು ಪ್ರಾರಂಭವಾಗದೆ ಇರುವುದು ಎಷ್ಟು ಇದೆ, ಎಷ್ಟು ಕ್ವಾಂಟಿಟಿಯನ್ನು ಖರೀದಿ ಮಾಡಿದ್ದಾರೆಂಬ ಬಗ್ಗೆ ವಿವರಗಳನ್ನು ಕೊಡಬೇಕು. ತೊಗರಿ, ಮೆಕ್ಕೆಜೋಳ, ಗೋವಿನ ಜೋಳ ಇಲ್ಲಿಯವರೆವಿಗೆ ಎಷ್ಟು ಖರೀದಿ ಮಾಡಿದ್ದಾರೆ. ಬೂಟಾಟಿಯ ಬಗ್ಗೆ ಇವರು ಲೆಕ್ಕವನ್ನು ಕೊಡಬೇಕು, ಕೋಲಾರದಲ್ಲಿ, ಇವತ್ತು ಬೂಟಾಟೆಯ ಸಮಸ್ಯೆಯಾಗಿದೆ. ಟೊಮೊಟೋ ಬೆಲೆಯು ಇವತ್ತು ಕುಸಿದಿದೆ. ಬಿಳಿಜೋಳದ ಬಗ್ಗೆ ಇವತ್ತು ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಿದ್ದಾರೆ, ಅಲ್ಲಿ ಎಷ್ಟು ಖರೀದಿಯನ್ನು ಮಾಡುತ್ತಿದ್ದಾರೆ. ಭತ್ತದ ಬಗ್ಗೆ ನೀವು ಎಷ್ಟು ಖರೀದಿ ಕೇಂದ್ರಗಳನ್ನು ಮಾಡಿದ್ದೀರಿ, ಇದನ್ನು ಎಷ್ಟು ಖರೀದಿ ಮಾಡಿದ್ದೀರಿ, ಇಲ್ಲಿ ಕೊಟ್ಟಿರುವ ಅಂಕಿಸಂಖ್ಯೆಗಳನ್ನು ನೋಡಿದರೆ ಬಹುಶಃ ಇವು ಹೆಸರಿಗೆ ಮಾತ್ರ ಖರೀದಿ ಕೇಂದ್ರಗಳಾಗಿವೆ, ಈ ಭತ್ತದ ಬಗ್ಗೆ ರಾಯಚೂರು, ಮಾನ್ವಿ ಸಿಂಧನೂರು , ಗಂಗಾವತಿ, ಕೊಪ್ಪಳ, ಸಿರಗುಪ್ಪ, ಹಾನಗಲ್, ಮದ್ದೂರು, ಮಂಡ್ಯ, ಹಾಸನ, ಮೈಸೂರು, ಶಿವಮೊಗ್ಗ, ಶಿಕಾರಿಪುರ, ಶಿರಾಳಕೊಪ್ಪ, ಬಳ್ಳಾರಿ, ಹೊಸಪೇಟೆ, ಮುಂಡಗೋಡು, ಹಳಿಯಾಳ, ಎನ್.ಆರ್.ಪುರ ಇಲ್ಲಿ ಭತ್ತದ ಬಗ್ಗೆ ಖರೀದಿ ಕೇಂದ್ರಗಳನ್ನು ಮಾಡಿದ್ದಾರೆ. ರಾಯಚೂರಿನಲ್ಲಿ 2, 130 ಕ್ವಿಂಟಾಲ್ ಮಾನ್ವಿಯಲ್ಲಿ 3, 714 ಕ್ವಿಂಟಾಲ್, ಗಂಗಾವತಿಯಲ್ಲಿ 1, 116 ಕ್ವಿಂಟಾಲ್ ಇಷ್ಟು ಕೇಂದ್ರಗಳಲ್ಲಿ ಇದನ್ನು ಖರೀದಿಯನ್ನು ಮಾಡುವುದನ್ನು ಬಿಟ್ಟರೆ ಕೊಪ್ಪಳದಿಂದ ಹಿಡಿದು ಎನ್.ಆರ್. ಪುರದವರೆಗೆ 15 ಕೇಂದ್ರಗಳಲ್ಲಿ ಖರೀದಿ ಮಾಡಿರುವುದು ನಿಲ್ ಆಗಿದೆ. ಇವರು ಏನು ಖರೀದಿಯನ್ನು ಮಾಡಿರುವುದಿಲ್ಲ. ಮತ್ತೆ ಖರೀದಿ ಕೇಂದ್ರವನ್ನು ಏತಕ್ಕಾಗಿ ಮಾಡಿದ್ದೀರಿ ಎಂದು ನಾನು ಹೇಳುತ್ತಿದ್ದೇನೆ. ಇವತ್ತು ನೀವು ತೋರಿಕೆಗೋಸ್ಕರ ರೈತರಿಗೆ ಸಮಾಧಾನ ಮಾಡುವುದಕ್ಕೋಸ್ಕರ ಒಂದು ಬೋರ್ಡ್‌ನ್ನು ಹಾಕಿಕೊಂಡು ಖರೀದಿ ಕೇಂದ್ರವನ್ನು ಪ್ರಾರಂಭ ಮಾಡಿದ್ದೀರಿ. ಆ ಕೇಂದ್ರಗಳಲ್ಲಿ ಒಂದು ದಿವಸವೂ ಸಹ ಭತ್ತವನ್ನು ತೆಗೆದುಕೊಂಡಿರುವುದಿಲ್ಲ. ಅದನ್ನು ಯಾವಾಗ ಪ್ರಾರಂಭ ಮಾಡಿದ್ದೀರಿ ಎಂಬ ಬಗ್ಗೆ ತಾವು ಹೇಳಬೇಕು. ಎಷ್ಟು ಗ್ರೇಡರ್ ಸಿಕ್ಕಲಿಲ್ಲ. ಇದು ಏತಕ್ಕಾಗಿ ಆಗಲಿಲ್ಲ ಅದರ ಬಗ್ಗೆ ತಾವು ಹೇಳಬೇಕು.

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಫುಡ್ ಕಾರ್ಪೋರೇಷನ್ ಆಫ್ ಇಂಡಿಯಾದವರು ಯಾವುದನ್ನು ಖರೀದಿ ಮಾಡಬೇಕು, ಆರಾಜ್ಯ ಸರ್ಕಾರದವರು ಯಾವುದನ್ನು ಖರೀದಿ ಮಾಡಬೇಕು, ಇದನ್ನು ಖರೀದಿ ಮಾಡುವುದಕ್ಕೆ ಇರುವಂತಹ ನಿಯಮಗಳೇನು, ಗ್ರೇಡರ್ಸ್‌ನ್ನು ನೀವು ಒದಗಿಸಿಕೊಡಬೇಕು. ಮಾನ್ಯ ವಿರೋಧಪಕ್ಷದ ನಾಯಕರು ನನ್ನ ಕ್ಷೇತ್ರವಾದ ಎನ್.ಆರ್.ಪುರದ ಬಗ್ಗೆ ಪ್ರಸ್ತಾಪ ಮಾಡಿದರು, ಅಲ್ಲಿ ಗ್ರೇಡರ್ ಇಲ್ಲವೆಂದು ಖರಿದೀಯಾಗುತ್ತಿಲ್ಲ. ಎಫ್‌ಸಿಐರವರು ಯಾವುದನ್ನು ಖರೀದಿ ಮಾಡುತ್ತಾರೆ, ಕೇಂದ್ರಸರ್ಕಾರದವರು ಯಾವ ಬೆಂಬಲ ಬೆಲೆಯನ್ನು ನಿಗಧಿಮಾಡುತ್ತಾರೋ ಆ ಬೆಂಬಲ ಬೆಲೆಯಲ್ಲಿ ಕೇಂದ್ರ ಸರ್ಕಾರದ ಜವಾಬ್ದಾರಿಯಿಂದ ಕೊಂಡುಕೊಳ್ಳತಕ್ಕಂತಹದ್ದನ್ನು ಕೇಂದ್ರದವರು ಓಪನ್ ಮಾಡುವಂತದ್ದು ಮತ್ತು ಬೇಕಾಗಿರುವಂತಹ ಗ್ರೇಡರ್‌ಗಳನ್ನು ಒದಗಿಸುವುದು ಆಗಬೇಕು. ಆದರೆ ಅದಕ್ಕೆ ಸಾಕಷ್ಟು ಗ್ರೇಡರ್ಸ್‌ನ್ನು ಒದಗಿಸುವುದರಲ್ಲಿ ತೊಂದರೆಯಾಗಿದೆ. ತಾವು ಹೇಳುವುದೇನೆಂದರೆ, ಕನಿಷ್ಠ ಬೆಂಬಲ ಬೆಲೆ 445 ರೂಪಾಯಿಗಳನ್ನು ನಿಗಧಿ ಮಾಡಿದ್ದಾರೆ. ಇದನ್ನು ಯಾರು ಮಾಡಿದ್ದಾರೆ? ಇದನ್ನು ಕೇಂದ್ರ ಸರ್ಕಾರದವರು ಎಫ್‌ಸಿಐರವರ ಮುಖಾಂತರ ಅವರೇ ಮಾಡುತ್ತಾರೆ. ಇಲ್ಲಿ ಗ್ರೇಡರ್ಸ್ ಇಲ್ಲವೆಂದು ಸ್ವಲ್ಪ ತೊಂದರೆಯಾಗುತ್ತದೆ, ಇಲ್ಲಿ ಗ್ರೇಡರ್ಸ್‌ನ್ನು ಒದಗಿಸುವವವರು ಕೂಡ ಎಫ್‌ಸಿಐನವರು.

ಶ್ರೀ ಪಿ. ರಮೇಶ್ :- ಇದನ್ನು ಇಂಪ್ಲಿಮೆಂಟ್ ಮಾಡುವವರು ಯಾರು?

ಶ್ರೀ ಅರಗಜ್ಞಾನೇಂದ್ರ (ತೀರ್ಥಹಳ್ಳಿ):- ಮಾನ್ಯ ಉಪಾಧ್ಯಕ್ಷರೆ, ನಮ್ಮ ತೀರ್ಥಹಳ್ಳಿಯಲ್ಲಿ ನಾವು ಒತ್ತಡವನ್ನು ಹಾಕಿ ಒಂದು ಖರೀದಿ ಕೇಂದ್ರವನ್ನು ಮಾಡಿದ್ದೇವೆ. ಇದನ್ನು ಕೆ ಎಫ್‌ಸಿ ವತಿಯಿಂದ ಶಿವಮೊಗ್ಗ ಜಿಲ್ಲಾಧಿಕಾರಿಯವರು ಮಾಡಿದರು. ಅವರು ಶಿವಮೊಗ್ಗದಿಂದ ವಾರಕ್ಕೆ ಒಂದು ಸಲ ಬರುತ್ತಾರೆ, ಅವುರು 5 ಕ್ವಿಂಟಾಲ್‌ಗಿಂತ ಹೆಚ್ಚಿಗೆ ಭತ್ತವನ್ನು ಕೊಂಡು ಕೊಳ್ಳುವುದಿಲ್ಲ. ನಮ್ಮ ಭಾಗದಲ್ಲಿ 1 ಅಥವಾ 2 ಕ್ವಿಂಟಾಲ್ ಭತ್ತವನನು ಮಾರಾಟ ಮಾಡಿ ಜೀವನ ನಡೆಸುವಂತಹ ಸಣ್ಣ ಸಣ್ಣ ರೈತರುಗಳಿದ್ದಾರೆ. ಅವರು ಅದನು ಕೊಂಡುಕೊಳ್ಳುವುದಿಲ್ಲ, ಕನಿಷ್ಠ ಅಂದರೆ 5 ಕ್ವಿಂಟಾಲ್ ಆಗಬೇಕು. ಒಂದು ವಾರದಲ್ಲಿ ಸೋಮವಾರ ದಿವಸ ಬಂದು ಕುಳಿತಿರುತ್ತಾರೆ, ಯಾವ ಭತ್ತವನ್ನು ಕೇಳಿದರೂ ಸಹ ಇವರು ಇದು ಗ್ರೇಡ್ ಸರಿಯಿಲ್ಲ ಎಂದು ಹೇಳುತ್ತಾರೆ. ಇವರು 2 ತಿಂಗಳುಗಳಲ್ಲಿ 7ಕ್ವಿಂಟಾಲ್ ಭತ್ತವನ್ನು ಖರೀದಿಮಾಡಿದ್ದಾರೆ. ಮಾರ್ಕೇಟ್‌ನಲ್ಲಿ ಬಹಳ ಒಳ್ಳೆಯ ಸಣ್ಣ ಭತ್ತ ರೇಟ್ ಎಷ್ಟಿದೆ ಎಂದರೆ 440 ರೂಪಾಯಿಗಳು ಇದೆ. ಇವತ್ತು ಕೇಂದ್ರಸರ್ಕಾರದ ಬೆಂಬಲ ಬೆಲೆ 540 ರೂಪಾಯಿಗಳು ಇದೆ. 100 ರೂಪಾಯಿಗಳು ಮಾರ್ಕೆಟ್‌ನಲ್ಲಿ ಡಿಫರೆನ್ಸ್ ಇರುವಾಗ, ಒಂದಷ್ಟು ಭತ್ತವನ್ನು ಇವರು ಖರೀದಿಯನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಭತ್ತ ಮತ್ತು ರಾಗಿಯನ್ನು ಕರ್ನಾಟಕ ಫುಡ್ ಕಾರ್ಪೊರೇಷನ್‌ವರು ಖರೀದಿಯನ್ನು ಮಾಡುವರು. ಒಟ್ಟಿನಲ್ಲಿ ಹೇಳುವುದಾದರೆ ನಾಮಾಕಾವಸ್ಥೆಗಾಗಿ ಒಂದು ಖರೀದಿ ಕೇಂದ್ರವನ್ನು ತೆರೆದಿದ್ದಾರೆ, ಇದರಿಂದ ಯಾವ ರೈತನಿಗೆ ಉಪಯೋಗವಾಗುತ್ತದೆ ಇದನ್ನು ತಾವು ಹೇಳಬೇಕು. ರೈತನನ್ನು

ಉಳಿಸುವುದಕ್ಕೆ ಒಂದು ಪ್ರಾಮಾಣಿಕವಾದ ಪ್ರಯತ್ನ ಮಾಡುವುದು ಬೇಡವೇ? ತಾವು ಸರ್ಕಾರದ ಕಡೆಯಿಂದ ಒತ್ತಡವನ್ನು ಹಾಕಿ, ಎಷ್ಟು ಖರೀದಿ ಕೇಂದ್ರಗಳಲ್ಲಿ ಖರೀದಿ ಮಾಡಿದ್ದಾರೆಂಬ ಬಗ್ಗೆ ರಿವ್ಯೂ ಮಾಡುವಂತಹವರು ಕೂಡ ಯಾರು ಗತಿ ಇಲ್ಲ. ಈ ರೀತಿಯಾಗಿ ತಾವು ರೈತರನ್ನು ಅನಾಥರನ್ನಾಗಿ ಮಾಡಿದ್ದೀರಿ ಅವರು ಬೇಕಾಬಿಟ್ಟಿಯಾಗಿ ಮಾರಾಟ ಮಾಡಿಕೊಂಡು ಹೋಗುತ್ತಿದ್ದಾರೆ. ಅವರು ಕೇಳಿದ ರೇಟ್‌ಗೆ ಮಾರಾಟ ಮಾಡುವಂತಹ ಪರಿಸ್ಥಿತಿಯಾಗಿದೆ. ಇವತ್ತು ರೈತನು ಸಾಲವನ್ನು ತೀರಿಸಬೇಕಾಗಿದೆ, ಅವನು ಅರ್ಜೆಂಟಾಗಿ ಖರ್ಚಿಗೋಸ್ಕರ ಅದನ್ನು ಮಾರಾಟ ಮಾಡಬೇಕಾಗಿರುತ್ತದೆ, ಭತ್ತ ಬೆಳೆಯುವಂತಹ ರೈತನಿಗೆ ಏನೇನು ವರ್ಕ್ ಔಟ್ ಆಗುವುದಿಲ್ಲ. 1,000 ರೂಪಾಯಿಗಳನ್ನು ಒಂದು ಕ್ವಿಂಟಾಲ್‌ಗೆ ಕೊಟ್ಟರೂ ಸಹ ಅವನಿಗ ವರ್ಕ್ ಔಟ್ ಆಗುವುದಿಲ್ಲ. ನಮ್ಮ ರೈತರು 440 ರೂಪಾಯಿಗಳಿಗೆ ಒಂದು ಕ್ವಿಂಟಾಲ್ ಮಾರಾಟ ಮಾಡಲು ಹೋದರೂ ಕೂಡ, 540 ರೂಪಾಯಿಯನ್ನು ಬೆಂಬಲ ಬೆಲೆಯನ್ನು ಕೇಂದ್ರ ಸರ್ಕಾರದವರು ಕೊಡುತ್ತೇವೆಂದು ಹೇಳಿದರೂ ಕೂಡ ಅಧಿಕಾರಿಗಳು ಭತ್ತವನ್ನು ಕೊಳ್ಳುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ ನಾವು ಟಿ.ಎಪಿಸಿವೆಸ್ ಕಡೆಯಿಂದ ಗೋಡಾನ್‌ಗಳನ್ನು ಬೇಕಾದಷ್ಟು ಕೊಟ್ಟಿದ್ದೇವೆ, ಅವರು ಗೋಡಾನ್‌ಗಳು ಇಲ್ಲವೆಂದು ಹೇಳುವುದಕ್ಕಾಗುವುದಿಲ್ಲ. ಇಷ್ಟೆಲ್ಲಾ ಸೌಲಭ್ಯಗಳನ್ನು ಕೊಟ್ಟರೂ ಕೂಡ, ಏನು ಮಾಡುವುದಕ್ಕಾಗುವುದಿಲ್ಲ. ಅದರ ಮೇಲು ಉಸ್ತುವಾರಿಯನ್ನು ನೋಡಿಕೊಳ್ಳುವವರು ಸರ್ಕಾರದಲ್ಲಿ ಯಾರು ಇಲ್ಲವೆಂದು ಇದರಿಂದ ಅನಾಹುತವಾಗುತ್ತದೆ ಪ್ರಾಮಾಣಿಕವಾಗಿ ಏನಾದರೂ ಮಾಡಬೇಕು.

ಶ್ರೀ ಡಿ.ವಿ. ಸದಾನಂದಗೌಡ:- ಗ್ರೇಡರ್ ಇಲ್ಲವೆನ್ನುವಂತಹ ಮಾತನ್ನು ತಾವು ಹೇಳುತ್ತಿದ್ದೀರಿ. ಗ್ರೇಡರನ್ನು ಎಫ್‌ಸಿಐನವರು ಕಳುಹಿಸಿಕೊಡಬೇಕೆಂದು ಆ ಕೆಲಸವನ್ನು ಕೇಂದ್ರಸರ್ಕಾರದವರು ಮಾಡಬೇಕೆಂದು ತಾವು ಹೇಳುತ್ತಿದ್ದೀರಿ. ತಮ್ಮ ಸರ್ಕಾರ ಅದರ ಬಗ್ಗೆ ಏನು ಮಾಡಿದೆ? ಅವರನ್ನು ಕಾಂಟ್ಯಾಕ್ಟ್ ಮಾಡಿದ್ದೀರಾ ಮತ್ತೊಂದು ಮಾಡಿದ್ದೀರಾ? ಫುಡ್ ಕಾರ್ಪೊರೇಷನ್‌ದವರು ಜೊತೆ ಡೀಲ್ ಮಾಡಿದ್ದೀರಾ?

ಶ್ರೀ ಡಿ.ಬಿ. ಚಂದ್ರೇಗೌಡ :- ಮಾಡಿದ್ದೇವೆ.

ಶ್ರೀ ಡಿ.ವಿ.ಸದಾನಂದಗೌಡ: ನೀವು ಇಷ್ಟೆಲ್ಲಾ ಮಾತನಾಡುತ್ತೀರಿ, ಕೇಂದ್ರ ಸರ್ಕಾರದ ಮೆಲೆ ದೂಷಣೆ ಮಾಡುತ್ತೀರಿ. ಲೋಕಸಭೆಯಲ್ಲಿ ನಿಮ್ಮ ಪಕ್ಷದ ಸದಸ್ಯರು ಎಷ್ಟು ಜನರಿದ್ದಾರೆ? ಈಗ ಲೋಕಸಭೆ ನಡೆಯುತ್ತಿದೆ, ಇಷ್ಟರವರೆಗೆ ನಿಮ್ಮವರ ಕಡೆಯಿಂದ ಗ್ರೇಡರ್ ಇಲ್ಲ ಅವರನ್ನು ಕಳುಹಿಸಿ ಕೊಟ್ಟಿಲ್ಲವೆಂದು ಒಂದು ಶಬ್ಧ ಆಬಗ್ಗೆ ಪ್ರಶ್ನೆ ಮಾಡುವಂತಹ ಕೆಲಸ ನಿಮ್ಮವರ ಕಡೆಯಿಂದ ಆಗಿದೆಯೆ? ನೀವು ಏಕೆ ಅವರನ್ನು ಅಲ್ಲಿಗೆ ಕಳುಹಿಸಿದ್ದೀರಿ?

ಶ್ರೀ ಡಿ.ಬಿ. ಚಂದ್ರೇಗೌಡ: ತಾವು ಹೇಳುತ್ತಿರುವುದು ಪಾರ್ಲಿಮೆಂಟ್ ವಿಚಾರ. ನಿಮ್ಮ ಪಕ್ಷದವರು ಲೋಕಸಭೆಯಲ್ಲಿದ್ದಾರೆ ಅವರೇನು ಮಾಡುತ್ತಾರೆ? ಗಾಜಿನ ಮನೆಗೆ ಕಲ್ಲು ಹೊಡೆಯುವ ಕೆಲಸ ಮಾಡಬೇಡಿ

ಶ್ರೀ ಡಿ.ವಿ. ಸದಾನಂದಗೌಡ:- ನಮ್ಮ ಪಕ್ಷದವರು ಕೆಲಸ ಮಾಡುತ್ತಿದ್ದಾರೆ. ನೀವು ಪಕ್ಷದ ಲೋಕಸಭಾ ಸದಸ್ಯರುಗಳನ್ನು ಕರೆಸಿ ಗ್ರೇಡರ್ಸ್ ಇಲ್ಲವೆನ್ನುವ ಮಾತನ್ನು ಕೇಂದ್ರ ಸರ್ಕಾರಕ್ಕೆ ತಿಳಿಸುತ್ತಿಲ್ಲ. ನೀವು ನೆಗ್ಲೆಕ್ಟ್ ಮಾಡುತ್ತಿದ್ದೀರಿ. ಅಲ್ಲಿ ಇದರ ಬಗ್ಗೆ ಯಾವುದೇ ಪ್ರಶ್ನೆಗಳನ್ನು ಮಾಡುತ್ತಿಲ್ಲ. ಹೆಚ್ಚಾಗಿ ಇದರ ಬಗ್ಗೆ ಅವರಿಗೆ ಮಾಹಿತಿ ಇಲ್ಲ.

ಶ್ರೀ ಡಿ.ಬಿ.ಚಂದ್ರೇಗೌಡ:- ತಾಂತ್ರಿಕವಾಗಿ ತೊಂದರೆ ಏನಿದೆಯೆಂದು ಹೇಳಿದ್ದೇನೆ. ಇದು ಅಧ್ಯಕ್ಷರಿಗೆ ಗೊತ್ತಾಗಬೇಕು.

ಶ್ರೀ ಡಿ.ವಿ. ಸದಾನಂದಗೌಡ :- ಗ್ರೇಡರ್ ಇಲ್ಲವೆಂದು ನಿವೇ ಹೇಳುತ್ತಿದ್ದೀರಿ. ಲೋಕಸಭೆಯಲ್ಲಿ ಅದರ ಬಗ್ಗೆ ಚರ್ಚೆ ಮಾಡಬೇಕಲ್ಲ; ಖರೀದಿ ಮಾಡುವುದಕ್ಕೆ ಆಗುವುದಿಲ್ಲವೆನ್ನುವ ಮಾತನ್ನು ಹೇಳಬೇಕು. ಜವಾಬ್ದಾರಿ ಇರುವವರು ಪಕ್ಷದಲ್ಲಿರುವವರು ಏಕೆ ಈ ಕೆಲಸ ಮಾಡುತ್ತಿಲ್ಲ? ಇಲ್ಲಿ ಕೇಂದ್ರಸರ್ಕಾರದ ಮೇಲೆ ಗೂಬೆ ಕೂರಿಸುವ ಕೆಲಸವನ್ನು ಏಕೆ ಮಾಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ರಾಜ್ಯಸರ್ಕಾರದ ವೈಫಲ್ಯತೆ, ಖರೀದಿ ಕೇಂದ್ರದಲ್ಲಿ ಮಂದಗತಿಯ ಬಗ್ಗೆ ವಿವರವಾಗಿ ಮಾತನಾಡಿದ್ದೇನೆ. ಆವರ್ತನಿಧಿ ಸ್ಥಾಪನೆ ಯಾಗಿಲ್ಲ. ನನ್ನದೊಂದು ಡಿಮಾಂಡ್ ಇದೆ. ಬಹುಶಃ ಇದೇ ವ್ಯವಸ್ಥೆ ಮುಂದುವರಿದರೆ ಇದೇ ಪರಿಸ್ಥಿತಿ ಮುಂದುವರಿದರೆ, ಪತ್ರಿಕೆಗಳಲ್ಲಿ ಬರುತ್ತಿದೆ. ಬೆಲೆ ಕುಸಿತದಿಂದ ತರಕಾರಿಯನ್ನು ಬೀದಿಗೆ ಎಸೆದ ರೈತರು. ಮೆಕ್ಕೆಜೋಳ ಖರೀದಿಯಲ್ಲಿ ಸಮಸ್ಯೆ ಉಂಟಾಗಿ ಕಗ್ಗಂಟಾಗಿರುವುದಕ್ಕೆ ಪರಿಹಾರ. ನಿನ್ನೆ ಪತ್ರಿಕೆಯಲ್ಲಿ ಬಂದಿದೆ. ಇದೇ ರೀತಿ ಆದರೆ ಸಮಸ್ಯೆಗಳು ಬಗೆಹರಿಯುವುದ್ಲಿಲ. ಮೆಕ್ಕೆಜೋಳ ಖರೀದಿಯಲ್ಲಿ ವಿಳಂಬವಾಗಿದೆ ಜಿಲ್ಲಾಧಿಕಾರಿಗಳ ಕಛೇರಿಗೆ ಮುತ್ತಿಗೆ. ಗಂಗಾವತಿಯಲ್ಲಿ ರೈತರು ಪ್ರತಿಭಟನೆ ಮಾಡಿದಾಗ ಅಶ್ರುವಾಯು, ಗಾಳಿಯಲ್ಲಿ ಗುಂಡು. ಬೆಲೆ ಕುಸಿತದಿಂದ ಕೆರಳಿದ ರೈತ ಬೀದಿಗಿಳಿದ. ಅನ್ನವಿಕ್ಕುವ ರೈತನ ಬಾಯಿಗೆ ಧಾರಣೆ ಕುಸಿತದಿಂದ ಮಣ್ಣು. ಹಾಲು, ಗೋವಿನಜೋಳದ ಹಾದಿಯಲ್ಲಿ ಬತ್ತ, ಕಡಲೆ, ಜೋಳ ಇದು ಹೀಗೆ ಮುಂದುವರೆದಿದೆ. ಇದನ್ನು ದಿನನಿತ್ಯ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ನಾನು ಸಾಕಷ್ಟು ಖರೀದಿ ಕೇಂದ್ರಗಳಿಗೆ ಹೋಗಿ ಬಂದಿದ್ದೇನೆ. ರೈತರ ಸಂಕಷ್ಟಗಳನ್ನು ಕೇಳಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿರಲಿಲ್ಲ. ಈಗ ಬಂದಿದ್ದಾರೆ. ನಾನು ಆಗಲೇ ಎಲ್ಲಾ ವಿಚಾರಗಳನ್ನು ಹೇಳಿದ್ದೇನೆ. ಇವತ್ತು ನಿಮ್ಮ ಸಚಿವಸಂಪುಟದಲ್ಲಿರತಕ್ಕ ಆಹಾರ ಸಚಿವರು ಇರಬಹುದು, ಕೃಷಿ ಸಚಿವರು ಇರಬಹುದು ತೋಟಗಾರಿಕೆ ಸಚಿವರು ಇರಬಹುದು ಅವರು ಯಾರೂ ಖರೀದಿ ಕೇಂದ್ರಗಳಿಗೆ ಹೋಗಿರುವುದನ್ನು ನಾನು ಎಲ್ಲೂ ನೋಡೇ ಇಲ್ಲ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಿಯಾದರೂ ಒಂದು ಕಡೆ ಹೋಗಬೇಕಾಗಿತ್ತು. ಅವರು ಅಲ್ಲಿ ಇಲ್ಲಿ ಸರ್‌ಪ್ರೈಸ್ ವಿಸಿಟ್ ಮಾಡುತ್ತಾರೆ. ಮುಖ್ಯಮಂತ್ರಿಗಳು ಒಂದು ಕಡೆ ಖರೀದಿ ಕೇಂದ್ರಕ್ಕೆ ಹೋಗಿದ್ದರೆ ರೈತರ ಗೋಳು ಗೊತ್ತಾಗುತ್ತಿತ್ತು. ಅವರು ಸರ್‌ಪ್ರೈಸ್ ವಿಸಿಟ್ ಮಾಡಬೇಕಾಗಿತ್ತು. ರೈತರು ಸಂಕಷ್ಟದಲ್ಲಿದ್ದಾರೆ. ಲಕ್ಷಾಂತರ ಟನ್ ಮೆಕ್ಕೆಜೋಳವಿರಬಹುದು ಬೇರೆ ಬೇರೆ ಪದಾರ್ಥಗಳು ಇರಬಹುದು ಅವು

ಲಕ್ಷಾಂತರ ಟನ್ ಖರೀದಿಕೇಂದ್ರಗಳ ಮುಂದೆ ಬಿದ್ದಿವೆ. ಒಂದು ತಿಂಗಳಿಂದ ಲಿಫ್ಟ್ ಮಾಡುವ ಪರಿಸ್ಥಿತಿಯಲ್ಲಿ ಇಲ್ಲ. ಇವತ್ತು ನವಲಗುಂದ ಮತ್ತು ನರಗುಂದದ ಬಗ್ಗೆ ಹೇಳಬೇಕಾದರೆ, ನಾನು ಮತ್ತು ಶಾಸಕರಾದ ಹೊರಟ್ಟಿಯವರು ಅಲ್ಲಿಗೆ ಹೋಗಿದ್ದೊ, ಲಕ್ಷಾಂತರ ಟನ್ ಬೀದಿಯಲ್ಲಿ ಬಿದ್ದಿದೆ. ಅದನ್ನು ನೋಡಿ ನಮಗೆ ಬಹಳಷ್ಟು ವ್ಯಥೆಯಾಯಿತು. ಒಂದು ತಿಂಗಳಿಂದ ಲಿಫ್ಟ್ ಮಾಡಿಲ್ಲ. ಲಿಫ್ಟ್ ಮಾಡಲಿಕ್ಕೆ ತೊಂದರೆಯೇನು? ಜಿಲ್ಲಾಡಳಿತಕ್ಕೆ ಲಿಫ್ಟ್ ಮಾಡಲಿಕ್ಕೆ ಏನು ತೊಂದರೆ? ಏಕೆ ಹೀಗಾಗುತ್ತಿದೆ? ಅಕಸ್ಮಾತ್ ಒಂದು ಮಳೆ ಬಿದ್ದರೆ ಅದೆಲ್ಲಾ ಹೋಯಿತು. ಲಕ್ಷಾಂತರ ಟನ್ ಜೋಳವನ್ನು ಇವತ್ತು ರಸ್ತೆಯ ಮೇಲೆ ಒಗೆದಿದ್ದಾರೆ. ಖರೀದಿ ಕೇಂದ್ರಗಳ ಮುಂದೆ ಒಗೆದಿದ್ದಾರೆ. ಒಂದು ಮಳೆ ಬಂದರೆ ಮೆಕ್ಕೆಜೋಳ ಪೂರ್ತಿ ನಾಶವಾಗುತ್ತದೆ. ರೈತರು ಆ ಪರಿಸ್ಥಿತಿಯಲ್ಲಿದ್ದಾರೆ. ಅವರಿಗೆ ಯಾವುದೇ ಸೆಕ್ಯೂರಿಟಿ ಇಲ್ಲ. ತಿಂಗಳಾನುಗಟ್ಟಲೆ ರೈತರು ಕಾಯುತ್ತಿದ್ದಾರೆ. ರೈತರ ಪರಿಸ್ಥಿತಿಯ ಬಗ್ಗೆ ಕಾಳಜಿ ತೆಗೆದುಕೊಳ್ಳುತ್ತಿಲ್ಲ, ಸಮಸ್ಯೆಗಳಿಗೆ ಸ್ಪಂದನ ಮಾಡುವಂತಹ ಕೆಲಸ ಇವತ್ತು ರಾಜ್ಯಸರ್ಕಾರದ ಕಡೆಯಿಂದ ಆಗುತ್ತಿಲ್ಲ. ಅದೇ ಪರಿಸ್ಥಿತಿ ಮುಂದುವರೆದಿದೆ. ಅದಕ್ಕಾಗಿ ನಾನು ಡಿಮಾಂಡ್ ಮಾಡುತ್ತಿದ್ದೇನೆ, 75 ಕೋಟಿ ರೂಪಾಯಿ ಆವರ್ತನಿಧಿಯನ್ನು ಇಡಬೇಕೆಂದು ಅನೌನ್ಸ್ ಮಾಡಿದ್ದೀರಿ ಇದುವರೆಗೆ ಸಂಗ್ರಹವಾಗಲಿಲ್ಲ. ಇದಕ್ಕೆ ಉತ್ತರ ಕೊಡಬೇಕೆಂದು ನಾನು ಡಿಮಾಂಡ್ ಮಾಡುತ್ತಿದ್ದೇನೆ. ಮಿನಿಮಮ್ 200 ಕೋಟಿ ರೂಪಾಯಿ ಆವರ್ತನಿಧಿ ಎಂದು ತೆಗೆದು ಇಡಿರಿ. ಬೇರೆ ಬೇರೆ ಇಲಾಖೆಯಲ್ಲಿ ನೀವು ಕೊಡುತ್ತಿದ್ದೀರಿ. ರೈತರ ಸಮಸ್ಯೆಗಳಿಗೆ ರೈತರ ಉತ್ಪಾದನೆಗಳನ್ನು ಖರೀದಿ ಮಾಡುವ ಸಲುವಾಗಿ ಕೇಂದ್ರದ ಕಡೆಗೆ ಮುಖ ಮಾಡುವುದು ಬೇಡ. 200 ಕೋಟಿ ರೂ ಆವರ್ತನಿಧಿಯನ್ನು ತೆಗೆದು ಇಡಿರಿ. ಬ್ಯಾಂಕು ಮತ್ತು ಸೊಸೈಟಿಗಳ ಮೂಲಕ ರೈತ ತೆಗೆದುಕೊಂಡಂತಹ ಸಾಲವನ್ನು ವಸೂಲಿ ಮಾಡಲಿಕ್ಕೆ ಶುರು ಮಾಡಿದ್ದೀರಿ, ಅದನ್ನು ಮುಂದೆ ಹಾಕಿ. ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ದೀರ್ಘಾವಧಿ ಸಾಲಗಳನ್ನಾಗಿ ಮಾಡಿರಿ. ಅಂದಾಗ ಮಾತ್ರ ರೈತರು ಬದುಕಲಿಕ್ಕೆ ಸಾಧ್ಯವಿದೆ. ನೀವು ಸಾಲ ವಸೂಲಿ ಮಾಡಲಿಕ್ಕೆ ಹೋದರೆ ರೈತರು ಸಾಲವನ್ನು ತೀರಿಸುವುದಕ್ಕೆ ಸಾಧ್ಯವಿಲ್ಲ. ವಾರೆಂಟ್ ತೆಗೆದರೆ ರೈತ ಮತ್ತೆ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಸಾಲ ಮನ್ನಾ ಮಾಡಿರಿ ಎಂದು ನಾನು ಹೇಳುವುದಿಲ್ಲ. ಸಾಲ ವಸೂಲಿ ಮಾಡುವುದನ್ನು ಮುಂದೆ ಹಾಕಿ. ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ದೀರ್ಘವಾಗಿ ಸಾಲವನ್ನಾಗಿ ಪರಿವರ್ತನೆ ಮಾಡಲಿಕ್ಕೆ ನೀವು ಅಧಿಕಾರಿಗಳಿಗೆ ಸೂಚನೆ ಕೊಡಿರಿ. ಈಗಾಗಲೇ ನಾನು ಸಾಕಷ್ಟು ಕಡೆಗಳಿಗೆ ಹೋದಾಗ ರೈತರು ಇದೇ ದೂರನ್ನು ಹೇಳಿದರು. ಮೂರು ತಿಂಗಳು ಸಾಲ ವಸೂಲಿ ಮಾಡುವುದನ್ನು ಮುಂದುವರೆಸಿ, ಈಗ ನಾವು ಸಾಲ ತುಂಬುವುದಕ್ಕೆ ಸಾಧ್ಯವಿಲ್ಲವೆನ್ನುವಂತಹ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ರಾಜ್ಯಸರ್ಕಾರ ಇದರ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ನೂರಾರು ಜನ ರೈತರು ಒತ್ತಾಯ ಮಾಡುತ್ತಿದ್ದಾರೆ. ಇಲ್ಲಿ ಮುಖ್ಯಮಂತ್ರಿಗಳಿದ್ದಾರೆ 200 ಕೋಟಿ ರೂಪಾಯಿ ಆವರ್ತ ನಿಧಿ ಇದುವರೆಗೆ ಎಷ್ಟು ಮಾಡಿದ್ದಾರೆ, ಅದರಲ್ಲಿ ಎಷ್ಟು ಖರ್ಚು ಮಾಡಿದ್ದಾರೆ ಅದರ ಲೆಕ್ಕ ಕೊಡಲಿಲ್ಲ. ಅದರ ಬಗ್ಗೆ ಲೆಕ್ಕ ಕೊಡಬೇಕು. ಕೇಂದ್ರದಿಂದ ನಾವೇನು ಕೇಳಬೇಕು ನಮಗೆ ಹಕ್ಕು ಏನಿದೆ ಅದನ್ನು ಕೇಳೋಣ. ಆಂಧ್ರಪ್ರದೇಶದ ಮಾದರಿಯಲ್ಲಿ ನಮ್ಮಲ್ಲೂ ಮಾಡಬೇಕು. ಪತ್ರಿಕೆಗಳಲ್ಲಿ

ಬಂದಿರುವುದನ್ನು ನಾನು ಕೋಟ್ ಮಾಡಿದ್ದೇನೆ. ಅದರ ಪ್ರಕಾರ ರೈತರ ಉತ್ಪಾದನೆಗಳಿಗೆ ಬೆಲೆ ಕುಸಿತವಾದಾಗ ರಾಜ್ಯಸರ್ಕಾರದವರು 75 ಪರ್ಸೆಂಟ್ ಕಾಂಟ್ರಿಬ್ಯೂಷನ್ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರದವರು 30 ಪರ್ಸೆಂಟ್ ಕೊಡುತ್ತಿದ್ದಾರೆ. ಅದರ ಬಗ್ಗೆ ಸ್ವಲ್ಪ ಸ್ಟಡಿ ಮಾಡಿರಿ. ಅಲ್ಲಿಗೊಂದು ಡೆಲಿಗೇಷನ್ ಕಳುಹಿಸಿ. ರೈತರಿಗೆ ಅಲ್ಲಿ ಏನು ವ್ಯವಸ್ಥೆ ಮಾಡಿದ್ದಾರೆಂಬುದನ್ನು ನೋಡಿ. ರೈತರ ಕಷ್ಟ ಪರಿಹಾರಕ್ಕೆ ತಾವು ಶ್ರಮಿಸಬೇಕೆಂದು ಹೇಳುತ್ತೇನೆ. ಮತ್ತೊಂದು ಬಹಳ ಮುಖ್ಯವಾದುದು, ರೈತರ ಪಂಪ್‌ಸೆಟ್ಟುಗಳಿಗೆ ಒದಗಿಸಿದ ವಿದ್ಯುಚ್ಛಕ್ತಿ ಅವರು ಎಷ್ಟೇ ಗಂಟೆ ಕೊಡಲಿ ಅದು ನಿರಂತರವಾಗಿರಬೇಕು. ಈಗ ಏನಾಗಿದೆ ಅಂಥರೆ ಎರಡು ಗಂಟೆ ಕರೆಂಟ್ ಕೊಡುವುದು ಆಮೇಲೆ ನಿಲ್ಲಿಸುವುದು ಮತ್ತೆ ಒಂದು ಗಂಟೆ ಕೊಡುವುದು ಆಮೇಲೆ ಎರಡು ಗಂಟೆ ಬಂದ್ ಮಾಡುವುದು ಇದರಿಂದ ರೈತರಿಗೆ ಅನುಕೂಲವಾಗುವುದಿಲ್ಲ. ಹೀಗೆ ಮಾಡಿದರೆ ರೈತನ ಹೊಲಗದ್ದೆಗಳಿಗೆ ನೀರು ಬಿಡಲಿಕ್ಕೆ ಸಾಧ್ಯವಾಗುವುದಿಲ್ಲ. ಕಂಟಿನ್ಯೂಯಸ್ ಆಗಿ 8 ಗಂಟೆ 10ಗಂಟೆ ಹೀಗೆ ನಿರಂತರವಾಗಿ ವಿದ್ಯುಚ್ಛಕ್ತಿಯನ್ನು ಪೂರೈಕೆ ಮಾಡಬೇಕು. ಬತ್ತ ಖರೀದಿ ಕೇಂದ್ರಗಳು ಆಗುತ್ತಿಲ್ಲ. ತಕ್ಷಣ ಬತ್ತ ಖರೀದಿ ಕೇಂದ್ರಗಳನ್ನು ತೆರೆದು ರೈತರ ಸಮಸ್ಯೆಗಳನ್ನು ನೀಗಿಸಬೇಕೆಂದು ಹೇಳುತ್ತಿದ್ದೇನೆ. ಮೆಕ್ಕೆಜೋಳದ ಪರಿಸ್ಥಿತಿ ಏನಾಗಿದೆ ಅದೇ ಪರಿಸ್ಥಿತಿ ಮುಂದುವರೆಯುತ್ತದೆಂದು ಹೇಳುತ್ತೇನೆ. ಖರೀದಿ ಕೇಂದ್ರಗಳಲ್ಲಿ ಏನಾಗುತ್ತಿದೆಯೆಂದರೆ ಮಧ್ಯವರ್ತಿಗಳು, ವ್ಯಾಪಾರಸ್ಥರು ದಳ್ಳಾಳಿಗಳು ಇದರ ಲಾಭ ಮಾಡಿಕೊಳ್ಳುತ್ತಿದ್ದಾರೆ. ಮಾನ್ಯ ಶಾಸಕರಾದ ಯಾವಗಲ್‌ರವರು ಇಲ್ಲೇ ಇದ್ದಾರೆ, ನರಗುಂದದಲ್ಲಿ ಅವರ ಊರಿನಲ್ಲಿ ವ್ಯಾಪಾರಸ್ಥರು ಐದು ಲೋಡ್ ತೆಗೆದುಕೊಂಡು ಹೋಗುತ್ತಿದ್ದರು. ನಾವು ಗ್ರೇಡ್ ಬಗ್ಗೆ ಮಾತನಾಡುತ್ತಿದ್ದೇವೆ. ಗ್ರೇಡ್, ತೇವಾಂಶ, ಪರೀಕ್ಷೆ ಅದು ಯಾವುದೂ ಇಲ್ಲೆ ಐದು ಟ್ರಕ್ ಲೋಡ್ ಮಕ್ಕೆ ಜೋಳವನ್ನು ವ್ಯಾಪಾರಸ್ಥರು ತೆಗೆದುಕೊಂಡು ಹೋಗುತ್ತಿದ್ದರು. ನಾವು ಗ್ರೇಡ್ ಬಗ್ಗೆ ಮಾತನಾಡುತ್ತಿದ್ದೇವೆ. ಗ್ರೇಡ್, ತೇವಾಂಶ, ಪರೀಕ್ಷೆ ಅದು ಯಾವುದೂ ಇಲ್ಲೆ ಐದು ಟ್ರಕ್ ಲೋಡ್ ಮೆಕ್ಕೆಜೋಳವನ್ನು ವ್ಯಾಪಾರಸ್ಥರು ಖರೀದಿ ಮಾಡಿಕೊಂಡು ರೆಕಾರ್ಡ್‌ನಹಳ್ಳಿ ಬರೆಸಿ ತೆಗೆದುಕೊಂಡು ಹೋದರು. ಅವರ ಮೇಲೆ ಕ್ರಿಮಿನಲ್ ಕೇಸ್ ಆಗಿದೆ. ಅದರ ಬಗ್ಗೆ ಎಫ್ ಐ ಆರ್ ನನ್ನ ಕಡೆಗೆ ಇದೆ. ಇದು ಏನಾಗಿದೆ ಅಂದರೆ ಒಂದು ಕಡೆ ಕೇಸ್ ಆಗಿದೆ. ಅದರ ಬಗ್ಗೆ ಎಫ್ ಐ ಆರ್ ನನ್ನ ಕಡೆಗೆ ಇದೆ. ಇದು ಏನಾಗಿದೆ ಅಂದರೆ ಒಂದು ಕಡೆ ಕೇಸ್ ಹಾಕುತ್ತಾರೆ, ಇದು ಮುಂದುವರಿಯುತ್ತಿದೆ. ಇದು ಒಂದು ಉದಾಹರಣೆ ಅಷ್ಟೇ. ಅಂತಹುವುಗಳು ಬಹಳ ಇದ್ದಾವೆ. ಅಧಿಕಾರಿಗಳು ವ್ಯಾಪಾರಸ್ಥರು ದಳ್ಳಾಳಿಗಳು ಒಂದಾಗಿ ರೈತರಿಗೆ ಮೋಸ ಮಾಡುವ ಕೆಲಸ ನಡೆದಿದೆ. ಇದು ರೈತರಿಗೆ ಗುರುತು ಇರುವಂತಹ ವಿಷಯ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ, ಜಿಲ್ಲಾ ಉಸ್ತುವಾರಿ ಸಚಿವರು, ಜಿಲ್ಲಾಧಿಕಾರಿಗಳು ಯಾರೇ ಇರಬಹುದು ಅವರು ಸರ್ ಪ್ರೈಸ್ ವಿಸಿಟ್ ಮಾಡಿ, ಎಲ್ಲಿ ದೂರು ಬಂದಿದೆ ಅದರ ಬಗ್ಗೆ ಗಮನಹರಿಸಿದ್ದರೆ ಕ್ರಮ ತೆಗೆದುಕೊಂಡಿದ್ದರೆ, ರೈತನಿಗೆ ನೇರವಾಗಿ ಹಣ ಬರುತ್ತಿತ್ತು. ಇಲ್ಲಿ ಏನಾಗಿದೆ ಅಂದರೆ, ರೈತ ಖರೀದಿ ಕೇಂದ್ರಗಳ ಮುಂದೆ ಒಂದು ತಿಂಗಳು ಕಾಯ್ದು ಸಾಕಾಗಿ ಬೇಜ್ಜಾರಾಗಿ ವ್ಯಾಪಾರಸ್ಥರಿಗೆ ಒಂದು ಕ್ವಿಂಟಾಲ್‌ಗೆ 300- 350 ರೂಪಾಯಿಗಳಿಗೆ ಮಾರಾಟ ಮಾಡುತ್ತಾರೆ. ವ್ಯಾಪಾರಸ್ಥರು ಮತ್ತು ಅಧಿಕಾರಿಗಳು ಒಂದಾಗಿ ಅಲ್ಲೊಂದು

ಪರ್ಸೆಂಟೇಜ್ ಫಿಕ್ಸ್ ಮಾಡಿಕೊಂಡು ಖರೀದಿ ವ್ಯವಹಾರ ಮಾಡುತ್ತಾರೆ. ಗ್ರೇಡರ್ ಇಲ್ಲ, ತೇವಾಂಶ ಪರೀಕ್ಷೆ ಯಾವುದೂ ಇಲ್ಲ ವ್ಯವಹಾರ ನಡೆಯುತ್ತಿದೆ. ಇದರ ಬಗ್ಗೆ ರಾಜ್ಯಸರ್ಕಾರ ಗಮನಹರಿಸಿ, ರೈತರ ಈವೊಂದು ಸಮಸ್ಯೆ ಬಗ್ಗೆ ತಕ್ಷಣ ಗಮನಹರಿಸಿ ಸ್ಪಂದನ ಮಾಡಬೇಕು. ಇಲ್ಲದಿದ್ದರೆ ಇವತ್ತು ಏನು ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ ಅವು ಮುಂದುವರೆಯುತ್ತವೆ ಎನ್ನುವ ಮಾತನ್ನು ಹೇಳುತ್ತೇನೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ರಾಜ್ಯಸರ್ಕಾರ ಎಲ್ಲೆಲ್ಲಿ ಎಷ್ಟು ಖರೀದಿ ಮಾಡಿದೆ ಎನ್ನುವ ವಿವರ ಕೊಟ್ಟ ನಂತರ ಕೆಲವೊಂದು ಸ್ಪಷ್ಟೀಕರಣ ಕೇಳುವುದು ಇದೆ. ನಾನು ಈ ಚರ್ಚೆಯಲ್ಲಿ ಭಾಗವಹಿಸಿ ಸಾಕಷ್ಟು ವಿಷಯಗಳನ್ನು ದೀರ್ಘವಾಗಿ ಚರ್ಚೆ ಮಾಡಲಿಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ:- ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದನಾಯಕರು ಪದೇ ಪದೇ ಕೇಳಿದ್ದಾರೆ. ಅದಕ್ಕೆ ಉತ್ತರ ಕೊಡುತ್ತೇನೆ.

+ ಶ್ರೀ ಪಿ.ಜಿ. ಆರ್. ಸಿಂಧ್ಯ :- (ಕನಕಪುರ) ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಲಿ ಈಗ ನಾವೊಂದು ನಿಲುವಳಿಸೂಚನೆಯನ್ನು ಕೊಟ್ಟಿರತಕ್ಕ ಸಂದರ್ಭದಲ್ಲಿ ಬಹಳ ದೀರ್ಘವಾಗಿ ಎಲ್ಲಾ ವಿಚಾರಗಳನ್ನು ಮಾತನಾಡುವುದಕ್ಕೆ ಆಗುವುದಿಲ್ಲ. ಇದು ಒಂದು ಕೇವಲ ಒಂದು ಪಕ್ಷದ ಸಮಸ್ಯೆಯೆಂದು ನಾನು ತಿಳಿದುಕೊಂಡಿಲ್ಲ. ಇದು ನಮ್ಮ ರಾಷ್ಟ್ರದ ಜ್ವಲಂತ ಸಮಸ್ಯೆಯಿದೆ. ಆ ಒಂದು ದೃಷ್ಟಿಕೋನದಿಂದ ನೋಡತಕ್ಕ ಅವಶ್ಯಕತೆಯಿದೆ. ಬಹಳ ದುಃಖವಾಗತಕ್ಕದ್ದು ಅಂದರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಅಥವಾ ರಾಜ್ಯ ಸರ್ಕಾರದವರು ಬಹಳ ವಿಚಾರಗಳನ್ನು ಸಾಕಷ್ಟು ಪ್ರಸ್ತಾಪ ಮಾಡಿದ್ದಾರೆ. ಮತ್ತು ಮುಖ್ಯಮಂತ್ರಿಗಳು ಕಳೆದ ಎರಡು ತಿಂಗಳುಗಳಿಂದ ಅನೇಕ ಕಡೆಗಳಲ್ಲಿ ಅವರು ಮಾತನಾಡತಕ್ಕ ಸಂದರ್ಭದಲ್ಲಿ ಡಬ್ಲ್ಯುಟಿಓ ಬಗ್ಗೆ ಚರ್ಚೆಯಾಗಬೇಕು, ಡಬ್ಲ್ಯುಟಿಓ ನಿಂದ ರಾಜ್ಯ ಸರ್ಕಾರಕ್ಕೆ ಮತ್ತು ರಾಷ್ಟ್ರಕ್ಕೆ ರೈತರಿಗೆ ಆಗತಕ್ಕ ಸಾಧಕಭಾಧಕಗಳ ಬಗ್ಗೆ ಚರ್ಚೆಯಾಗಬೇಕೆಂದು ಹೇಳಿದ್ದಾರೆ. ನೆಲ್ ಮಾಡಿ ಒಂದು ರಿಪೋರ್ಟ್ ತರಿಸಿದ್ದಾರೆ. ಅದರ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಪಾತ್ರಗಳೇನು, ಕೇಂದ್ರಸರ್ಕಾರದ ಪಾತ್ರಗಳೇನು ಎನ್ನುವ ಬಗ್ಗೆ ಸಾರ್ವಜನಿಕವಾಗಿ ಚರ್ಚೆಯಾಗಬೇಕೆನ್ನುವುದನ್ನು ಎಲ್ಲರೂ ಮೆಚ್ಚುತ್ತಾರೆ.

5.40 ಪಿ.ಎಂ.

ಇದು ಆಗಬೇಕಾಗಿರತಕ್ಕ ಕೆಲಸ. ಮಾನ್ಯ ಅಧ್ಯಕ್ಷರೆ, ಈ ನಡುವೆ ಈ ನಿಲುವಳಿ ಸೂಚನೆ ಏಕೆ, ತೆಗೆದುಕೊಂಡುಬಂದಿರಿ, ಎಂದರೆ ರಾಜ್ಯಸರ್ಕಾರದ ಕೆಲವು ಜವಾಬ್ದಾರಿಗಳಲ್ಲಿ ಇವತ್ತು ಸಂಪೂರ್ಣವಾದ ಯಶಸ್ಸನ್ನು ಕಾಣಲಿಕ್ಕೆ ಸಾಧ್ಯವಾಗಲಿಲ್ಲ. ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ನಾವು ನಿಲುವಳಿ ಸೂಚನೆಯನ್ನು ಮಂಡಿಸಿರತಕ್ಕಂಥ ಉದ್ದೇಶ ಏನೆಂದರೆ ತಕ್ಷಣ ನೀವು ರೈತರ ನೆರವಿಗೆ ಬರಬೇಕಾಗುತ್ತದೆ. ಈಗ ರಾಜ್ಯಪಾಲರ ಭಾಷಣ ಸಂದರ್ಭ ಆದಮೇಲೆ ತಾವು ಬಜೆಟ್‌ನ್ನು ಮಂಡನೆ ಮಾಡುವವರಿದ್ದೀರಿ. ಆ ಬಜೆಟ್ ಸಂದರ್ಭದಲ್ಲೂ ಸಹಿತ ಕೆಲವೊಂದು ವಿಚಾರಗಳನ್ನು ನಾವು ಹೇಳಿರತಕ್ಕದ್ದರ ಬಗ್ಗೆ ತಾವು ನಮ್ಮ ಗಮನಕ್ಕೆ

ತರಬೇಕಾಗುತ್ತದೆ. ಮತ್ತೆ ಇದು ಒಂದು ವಿಸ್ತಾರವಾದ ಚರ್ಚೆಯಾಗಬೇಕು. ಇದರಿಂದಾಗಿ ಈ ನಿಲುವಳಿ ಸೂಚನೆಗೆ ತಾವು ಒಪ್ಪಿಗೆ ಕೊಡುತ್ತೀರಿ ಎಂಬ ನಂಬಿಕೆ ನಮಗಿದೆ. ಏಕೆಂದರೆ ನಿನ್ನೆ ದಿವಸ ನಮ್ಮ ಆಡಳಿತ ಪಕ್ಷದ ಸದಸ್ಯರು ಏನಿದ್ದಾರೆ, ಅವರಿಗೂ ಕೂಡ ಕಾಳಜಿ ಇದೆ. ನಾವು ಮಾತ್ರ ಕಾಳಜಿ ತರತಕ್ಕವರು, ಜನತಾದಳದವರಿಗೆ, ಅಥವಾ ಬಿ.ಜೆ.ಪಿ. ಯವರಿಗೆ, ವಿರೋಧಪಕ್ಷದವರಿಗೆ ಮಾತ್ರ ಕಾಳಜಿ ಇದೆ, ಆಡಳಿತ ಪಕ್ಷದವರಿಗೆ ಏನೂ ಕಾಳಜಿ ಇಲ್ಲ ಎನ್ನತಕ್ಕಂಥ ಮಾತನ್ನು ನಾನು ಹೇಳುವುದಕ್ಕೆ ಬಯಸುವುದಿಲ್ಲ, ಅವರಿಗೂ ಸಹಿತ ನಮ್ಮಷ್ಟೇ ಕಾಳಜಿ ಇದೆ. ಆದರೆ ಅವರು ಆವೇಶಭರಿತರಾಗಿ ಏಕೆ ನುಗ್ಗಿದರು ಎನ್ನುವದುನನಗೆ ಇನ್ನೂ ಸಹಿತ ಅರ್ಥವಾಗಿಲ್ಲ. ಅದೇನೇ ಇರಲಿ, ಈಗ ಅದೊಂದು ವಿಚಾರ ಮುಗಿದಿದೆ. ಆದರೆ ನಾನು ಇಷ್ಟು ಮಾತ್ರ ಹೇಳುವುದಕ್ಕೆ ಬಯಸುತ್ತೇನೆ. ಅವರು ಸಹಿತ ಇದರಲ್ಲಿ ಭಾಗವಹಿಸಬೇಕು. ಆದ್ದರಿಂದ ತಾವು ದಯವಿಟ್ಟು ನಮ್ಮ ನಿಲುವಳಿ ಸೂಚನೆಗೆ ಅವಕಾಶ ಮಾಡಿಕೊಡಿ. ಕಳೆದ ಅಧಿವೇಶನದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನಾವು ಮಾರುಕಟ್ಟೆ ಪ್ರವೇಶವನ್ನು ಮಾಡುತ್ತೇವೆ, ಮಾರುಕಟ್ಟೆಗೆ ಇಂಟರ್‌ವೆನ್‌ಶನ್ ಮಾಡುತ್ತೇವೆ ಎಂದು ಕೇಂದ್ರಸರ್ಕಾರದ ಮೇಲೆ ಒತ್ತಾಯ ತರುವುದಕ್ಕೆ ನಮ್ಮನ್ನು ಸಹಿತ ಕರೆದುಕೊಂಡು ಹೋಗಿದ್ದರು. ದುರ್ದೈವ ಏನೆಂದರೆ ನಾವು ನಿರೀಕ್ಷಿಸಿದ ಮಟ್ಟದಲ್ಲಿ ಕೇಂದ್ರ ಸರ್ಕಾರದವರು ನಮ್ಮ ಸಹಕಾರಕ್ಕೆ ಬರಲಿಲ್ಲ. ಕೇಂದ್ರಸರ್ಕಾರದ ಮಂತ್ರಿಗಳ ಹತ್ತಿರ ನೀವು ಬಾಸುಮತಿ ಅಕ್ಕಿಯನ್ನು ಯಾವರೀತಿಯಲ್ಲಿ ಕೊಳ್ಳುತ್ತೀರಿ, ಅದೇರೀತಿ ರಾಜ್ಯದ ಸೋನಾಮಸೂರಿ ಅಕ್ಕಿಯನ್ನು ಕೊಳ್ಳಬೇಕೆಂದು ಹೇಳಿ ನಮ್ಮ ರಾಯಚೂರು, ಕೊಪ್ಪಳ, ರೈತರು ಬಹಳ ಒತ್ತಾಯವನ್ನು ಸರ್ಕಾರದ ಮೇಲೆ ಮಾಡಿದ್ದರು. ನಾವು ಎಲ್ಲರೂ ಹೋಗಿದ್ದೆವು. ಆದರೆ ಇದುವರೆಗೆ ಸಹಿತ ಅದು ಏನಾಗಿದೆ ಎಂದು ನಮಗೆ ಗೊತ್ತಿಲ್ಲ. ಬಾಸುಮತಿ ಅಕ್ಕಿಯನ್ನು ಕೊಳ್ಳುವಂತೆ ಸೋನಾಮಸೂರಿ ಅಕ್ಕಿಯನ್ನು ಕೊಳ್ಳಬೇಕೆಂಬ ಒತ್ತಾಯವನ್ನು ರಾಜ್ಯಸರ್ಕಾರ ದಿಂದ ಕೇಂದ್ರಸರ್ಕಾರಕ್ಕೆ ಮಾಡಿದ್ದೆವು. ನಾವು ಟೆಸ್ಟ್ ಮಾಡುತ್ತೇವೆ ಎಂದು ಹೇಳಿದರು. ಅದರ ಫಲಿತಾಂಶ ಏನಾಗಿದೆ ಎನ್ನುವುದು ಇನ್ನೂ ಸಹಿತ ನಮಗೆ ಗೊತ್ತಾಗಿಲ್ಲ. ಆದ್ದರಿಂದಾಗಿ ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಿಗೆ ತಾವು ಇತ್ತೀಚೆಗೆ ಹೋಗಿಬಂದಿದ್ದೀರಿ. ಎಣ್ಣೆಕಾಳುಗಳನ್ನು ರೈತರು ಬೆಳೆದಿದ್ದಾರೆ. ಒಂದು ಕಡೆ ಬೆಳೆ ಸರಿಯಾಗಿ ಬಂದಿಲ್ಲ. ಮತ್ತು ಬಂದಿರತಕ್ಕಂಥ ಬೆಳೆಗಳಿಗೂ ಸಹಿತ ಬೆಲೆ ಸರಿಯಿಲ್ಲ ಎನ್ನತಕ್ಕಂಥಾದ್ದು ತಮಗೆ ಗೊತ್ತಿದೆ. ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಭತ್ತಕ್ಕೆ ಮತ್ತು ಜೋಳಕ್ಕೆ ಬಂದಿರತಕ್ಕಂಥ ಪರಿಸ್ಥಿತಿಯನ್ನು ತಾವು ಕಣ್ಣಾರೆ ನೋಡಿದ್ದೀರಿ. ಬಳ್ಳಾರಿಯಲ್ಲಿ ಅಲ್ಲಿರತಕ್ಕಂಥ ಎ.ಪಿ.ಎಂ.ಸಿ. ಮಾರುಕಟ್ಟೆಯಲ್ಲಿ ಅವರು ಗಾಡಿಯಲ್ಲಿ ಜೋಳದ ಮೂಟೆಗಳನ್ನು ಇಟ್ಟುಕೊಂಡು ದಿವಸ ಎಲ್ಲ ಅದರ ಮೇಲೆ ಮಲಗಿರುತ್ತಾರೆ, 24 ಗಂಟೆಯೂ ಅಲ್ಲಿ ಮಲಗಿರುತ್ತಾರೆ. ಅದನ್ನು ಕೊಳ್ಳುವುದಕ್ಕೆ ಆಗಿಲ್ಲ. ಹಿಗಾದರೆ ಅವನು ಅಲ್ಲೇ ಸತ್ತು ಹೋಗಿಬಿಡುತ್ತಾನೆ. ಈರೀತಿ ಸುಮಾರು ಎಂಟು- ಹತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಕುಟುಂಬಗಳಿಗೆ ತಾವು ಒಂದು ಲಕ್ಷ ರೂಪಾಯಿ ಪರಿಹಾರ ಕೊಟ್ಟಿದ್ದೀರಿ, ಅದು ಸರಿಯೇ. ಆದರೆ ಮಾನ್ಯ ಅಧ್ಯಕ್ಷರೇ, ಅವತ್ತು ವಿರೋಧ ಪಕ್ಷದಲ್ಲಿ ಮಾನ್ಯ ಖರ್ಗೆಯವರು ಮತ್ತು ಹೆಚ್.ಕೆ.ಪಾಟೀಲರು ಕುಳಿತು ಕೊಂಡಿದ್ದರು.

ಅವರು ಮಾಡಿರತಕ್ಕಂಥ ಭಾಷಣವನ್ನು ಓದಿಬಿಟ್ಟರೆ ಜೆ.ಹೆಚ್.ಪಟೇಲರು ಮತ್ತು ನಮ್ಮೆಲ್ಲರ ಮೇಲೆ ಮರ್ಡರ್ ಕೇಸ್ ಬುಕ್ ಮಾಡಬೇಕು ಎನ್ನುವುದನ್ನು ಬಿಟ್ಟು ಬಾಕಿ ಎಲ್ಲ ಸಹಿತ ಅವರು ಹೇಳಿದ್ದಾರೆ. ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಾವು ಆಡಳಿತ ನಡೆಸಿರತಕ್ಕಂಥವರು. ಯಾವುದು ಸಾಧ್ಯ, ಯಾವುದು ಸಾಧ್ಯವಿಲ್ಲವೆಂದು ನಾವು ತಿಳಿದುಕೊಂಡಿದ್ದೇವೆ. ಆದ್ದರಿಂದಾಗಿ ಸರ್ಕಾರದಲ್ಲಿ ಈ ನಿಲುವಳಿ ಸೂಚನೆ ಸಂದರ್ಭದಲ್ಲಿ ನಾನು ಕೆಲವು ಒತ್ತಾಯಗಳನ್ನು ಮಾಡುವುದಕ್ಕೆ ಬಯಸುತ್ತೇನೆ. ವಿವರಗಳಿಗೆ ನಾನು ಹೋಗುವುದಿಲ್ಲ ಎಂದು ನಾನು ಹೇಳಿದೆ. ನಮ್ಮ ಸರ್ಕಾರ ಇದ್ದಾಗ 1983 ರಲ್ಲಿ ನಾವು ಅಧಿಕಾರಕ್ಕೆ ಬಂದೆವು, ಮತ್ತೆ ನಾವು 1985 ರಲ್ಲಿ ಅಧಿಕಾರಕ್ಕೆ ಬಂದೆವು. ಪುನಃ 1994 ರಲ್ಲಿ ಜನ ನಮ್ಮ ಕೈಗೆ ಅಧಿಕಾರವನ್ನು ಕೊಟ್ಟಿದ್ದರು. ಆ ಸಂದರ್ಭದಲ್ಲಿ ತಮಗೆ ಗೊತ್ತಿದೆ, ರೈತರ ಸಾಲದ ಮೇಲೆ ಇದ್ದಂಥ ಬಡ್ಡಿಯನ್ನು ಸಂಪೂರ್ಣವಾಗಿ ನಾವು ರದ್ದು ಮಾಡಿದ್ದೆವು. ಇವತ್ತು ತಾವೂ ರದ್ದುಮಾಡಿ. 250 ಕೋಟಿ ರೂಪಾಯಿಗಳನ್ನು ನಮ್ಮ ಸರ್ಕಾರ ಇದ್ದಾಗ ನಾವು ರದ್ದು ಮಾಡಿದ್ದೆವು. ನಬಾರ್ಡ್‌ನವರು ನಾವು ಎರಡನೇ ಬಾರಿಗೆ 1994 ರಲ್ಲಿ ಅಧಿಕಾರಕ್ಕೆ ಬಂದಿದ್ದಂಥ ಸಂದರ್ಭದಲ್ಲಿ ನಬಾರ್ಡ್ ಸಂಸ್ಥೆಯವರು ಒಪ್ಪಿರಲಿಲ್ಲ, ಅದನ್ನು ಮಾಡುವುದಕ್ಕೆ ನಾವು ಬಿಡುವುದಿಲ್ಲ ಎನ್ನತಕ್ಕಂಥಾದ್ದನ್ನು ಹೇಳಿದರು. ಆದರೆ ನಮ್ಮ ಸಹಕಾರ ಮಂತ್ರಿಗಳಾಗಿದ್ದಂಥ ಮಾನ್ಯ ಎಸ್.ಎಸ್.ಪಾಟೀಲರ ನಾಯಕತ್ವದಲ್ಲಿ ನಮ್ಮ ನಿಯೋಗ ಹೋಗಿ ನಬಾರ್ಡ್ ಅಧಿಕಾರಿಗಳ ಮೇಲೆ ಒತ್ತಾಯ ತಂದು, ಕೇಂದ್ರಸರ್ಕಾರದ ಮೇಲೆ ಒತ್ತಾಯ ತಂದು, ಕೃಷಿ ಸಚಿವರ ಮೇಲೆ ಒತ್ತಾಯ ತಂದೆವು. ಆವತ್ತು ರಾಜ್ಯಸರ್ಕಾರ ಸಬಾರ್ಡಿನಿಂದ ಏನು ಸಾಲವನ್ನು ತೆಗೆದುಕೊಂಡುಬಂದೆವು, ಆ ಹಣದಿಂದ ಸಾಲದ ಮೇಲಿನ ಬಡ್ಡಿಯನ್ನು ನಾವು ಕಟ್ಟಿದೆವು. ಅದಕ್ಕಾಗಿ ನಾನು ಏನು ಒತ್ತಾಯ ಮಾಡುತ್ತಿದ್ದೇನೆ ಎಂದರೆ ನೀವು ಸಹಿತ ಇವತ್ತು ರೈತರ ಸಾಲದ ಮೇಲೆ ಇರತಕ್ಕಂಥ ಬಡ್ಡಿಯನ್ನು ತಕ್ಷಣ ಮನ್ನಾ ಮಾಡಬೇಕು. ಈ ಒತ್ತಾಯವನ್ನು ರಾಜ್ಯಸರ್ಕಾರಕ್ಕೆ ನಾನು ಮಾಡುತ್ತಿದ್ದೇನೆ. ಇಲ್ಲದೇ ಹೋದರೆ ಏನಾಗುತ್ತದೆ ಎಂದರೆ ನಾನು ಕೊಪ್ಪಳಕ್ಕೆ ಹೋಗಿದ್ದೆ. ಕೊಪ್ಪಳದಲ್ಲಿ ಒಬ್ಬ ರೈತ, ಪಾಪ ಅವನನ್ನು ಎಂಟೂವರೆಗಂಟೆಗೆ ಆಸ್ಪತ್ರೆಗೆ ತೆಗೆದುಕೊಂಡುಬರುತ್ತಾರೆ. ಪೆಸ್ಟಿಸೈಡ್ಸ್‌ನ್ನು ಅವರು ಕುಡಿದುಬಿಟ್ಟಿದ್ದ. ಹತ್ತುಗಂಟೆಗೆ ಅವನು ಸತ್ತುಹೋಗುತ್ತಾನೆ. ಇದನ್ನು ನಾವು ನೋಡಿಕೊಂಡು ಬಂದೆವು. ವಸ್ತುಸ್ಥಿತಿಯಲ್ಲಿ ಅವನು ಏಕೆ ಸತ್ತ ಎಂದರೆ ಅಲ್ಲಿ ಬೀಜವನ್ನು ಸರಬರಾಜು ಮಾಡತಕ್ಕಂಥ ಅಧಿಕಾರಿಗಳು ಎಣ್ಣೆ ಬೀಜಗಳನ್ನು ಕೊಟ್ಟಿದ್ದಾರೆ. ಒಂದು ಗಂಡುಬೀಜ, ಒಂದು ಹೆಣ್ಣುಬೀಜವನ್ನು ಕೊಡಬೇಕು. ಆದರೆ ಅವನು ಹತ್ತಿ ಬೆಳೆಯತಕ್ಕಂಥ ರೈತ. ಖಾಸಗಿಯಾಗಿ ಎಣ್ಣೆಬೀಜಗಳನ್ನು ಕೊಟ್ಟಿದ್ದರಿಂದ ಅವನ ಬೆಳೆ ವಿಫಲವಾಯಿತು. ಬಡ್ಡಿ ಕೊಡುವುದಕ್ಕೆ ಆಗಲಿಲ್ಲ, ಅಸಲು ಕೊಡುವುದಕ್ಕೆ ಆಗಲಿಲ್ಲ. ಜಫ್ತಿ ಮಾಡುವುದಕ್ಕೆ ಹೋದರು. ಆ ಸಂದರ್ಭದಲ್ಲಿ ಬೇರೆ ದಾರಿ ಇಲ್ಲದೆ ಆತ ಆತ್ಮಹತ್ಯೆ ಮಾಡಿಕೊಂಡ. ಇದೇ ರೀತಿ ಇನ್ನೂ ಕೆಲವು ಪ್ರಕರಣಗಳು ತಮ್ಮ ಗಮನಕ್ಕೆ ಬಂದಿರಲಿಕ್ಕೂ ಸಾಕು. ಧಾರವಾಡ ಹತ್ತಿರ ಇರತಕ್ಕಂಥ ಒಬ್ಬ ರೈತ ಸಣ್ಣ ರೈತನೋ, ದೊಡ್ಡ ರೈತನೋ ಎನ್ನುವ ಒಂದು ವಿವಾದ. ವಾಸ್ತವವಾಗಿ ಅವನಿಗೆ ಐದು ಜನ ಗಂಡು ಮಕ್ಕಳೂ ಹದಿನೆಂಟು ವರ್ಷ ದಾಟಿದ್ದಾರೆ. ಒಬ್ಬೊಬ್ಬರಿಗೆ ಒಂದೊಂದು ಎಕರೆ ಜಮೀನು

ಬಂದಿರತಕ್ಕಂಥಾದ್ದು. ಅವನು ಸಾಲ ಮಾಡಿದ, ಅವನ ಬೆಳೆ ವಿಫಲವಾಯಿತು. ಮತ್ತೆ ಬೆಳೆಯನ್ನು ಸರ್ಕಾರದವರು ಕೊಳ್ಳಲಿಲ್ಲ ಎ.ಪಿ. ಎಂ.ಸಿ. ಧಾರವಾಡದವರು ಕೊಳ್ಳಲಿಲ್ಲ. ಹೀಗಾಗಿ ಅವನು ಆತ್ಮಹತ್ಯೆ ಮಾಡಿಕೊಂಡ. ಅದಕ್ಕೋಸ್ಕರವಾಗಿ ನಾನು ಸರ್ಕಾರದ ಮೇಲೆ ಏನು ಒತ್ತಾಯ ಮಾಡುತ್ತಿದ್ದೇನೆ ಎಂದರೆ ನಮ್ಮ ಸರ್ಕಾರ ಇದ್ದಾಗ ನಾವು ಮಾಡಿ ತೋರಿಸಿದ್ದೇವೆ. ನಾವೇನೂ ಹೊಸದಾಗಿ ನಿಮಗೆ ಹೇಳುತ್ತಿಲ್ಲ. ರೈತರ ಸಾಲದ ಮೇಲೆ ಇದ್ದಂಥ ಬಡ್ಡಿಯನ್ನು ಕಡಿಮೆ ಮಾಡಿದ್ದಾರೆ. ಅದು ಬಡ್ಡಿ ಮನ್ನಾ ಮಾಡುವುದಕ್ಕೆ ಅವರನ್ನು ನೀವು ಕೇಳಿ. ಇದು ಮೊದಲನೆಯದು. ಎರಡನೆಯದಾಗಿ ನೀವು ಶಾರ್ಟ್‌ಟರ್ಮ್ ಲೋನ್ ಏನು ಕೊಟ್ಟಿದ್ದೀರಿ, ಅದನನು ಮೀಡಿಯಂ ಟರ್ಮ್ ಲೋನ್ ಆಗಿ ಕನ್ವರ್ಟ್ ಮಾಡಿ, ಲಾಂಘ್ ಟರ್ಮ್ ಲೋನ್ ಆಗಿ ಕನ್ವರ್ಟ್ ಮಾಡಿ. ಆಗ ಏನಾಗುತ್ತದೆ ಎಂದರೆ ನಿಮ್ಮ ಪಕ್ಷದ ಮೇಲೆ, ನಿಮ್ಮ ಮೇಲೆ, ಶಾಸಕರ ಮೇಲೆ ರೈತರಿಗೆ 'ಹೌದಪ್ಪ, ಇವರು ಪ್ರಯತ್ನ ಮಾಡುತ್ತಿದ್ದಾರೆ. ಇವತ್ತು ನಮ್ಮ ಬೆಳೆ ವಿಫಲವಾಗಿರತಕ್ಕಂಥ ಸಂದರ್ಭದಲ್ಲಿ ಸಾಲ ವಸೂಲಿ ಮಾಡುವುದಕ್ಕೆ ಇವರು ಬರುತ್ತಿಲ್ಲ, ನಮಗೆ ಸ್ವಲ್ಪ ಬಿಡುವು ಕೊಟ್ಟಿದ್ದಾರೆ. ಎನ್ನತಕ್ಕಂಥ ಭಾವನೆ ಬರುತ್ತದೆ. ಆದ್ದರಿಂದ ನಾನು ಒತ್ತಾಯ ಮಾಡತಕ್ಕಂಥಾದ್ದು ಏನು ಎಂದರೆ ಈ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದರ ಜೊತೆಗೆ ಶಾರ್ಟ್‌ಟರ್ಮ್ ಲೋನ್, ಮೀಡಿಯಂ ಟರ್ಮ್ ಲೋನ್‌ಗಳನ್ನು ಲಾಂಗ್ ಟರ್ಮ್ ಲೋನ್ ಆಗಿ ಕನ್ವರ್ಟ್ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮಾನ್ಯ ಅಧ್ಯಕ್ಷರೆ, ಈ ಮಾರುಕಟ್ಟೆ ಇಲಾಖೆ, ಕೃಷಿ ಇಲಾಖೆ, ಮತ್ತು ಆಹಾರ ಇಲಾಖೆ ಇವರಲ್ಲಿ ಕೋ ಆರ್ಡಿನೇಶನ್ ಎನ್ನತಕ್ಕಂಥಾದ್ದು ಇಲ್ಲ. ಮಾನ್ಯ ಜಗದೀಶ್ ಶೆಟ್ಟರ್ ಅವರು ಪ್ರಸ್ತಾಪ ಮಾಡಿದರು. ನಾನು ಸ್ವತಃ ಚಿತ್ರದುರ್ಗ ಎ.ಪಿ.ಎಂ.ಸಿ ಮಾರುಕಟ್ಟೆಗೆ ಆವತ್ತು ಆಕಸ್ಮಿಕವಾಗಿ ಹೋಗಿದ್ದೆ. ಲಿಂಗಸೂರಿನಲ್ಲಿ ಒಂದು ಕಾರ್ಯಕ್ರಮ ಇತ್ತು. ಜೀವರಾಜ ಆಳ್ವ ಅವರು ತೀರಿಕೊಂಡರು ಎಂದು ದಾರಿಯಲ್ಲಿ ಬರುವಾಗ ಗೊತ್ತಾಯಿತು. ಹಾಗೆ ಬರುವಾಗ ಚಿತ್ರದುರ್ಗ ಮಾರುಕಟ್ಟೆಗೆ ಹೋಗಿದ್ದೆ. ಅಲ್ಲಿ ಏನಾಗಿದೆ ಎಂದರೆ ಕೊಳ್ಳತಕ್ಕಂಥ ಮಾಲುಗಳನ್ನು ರೈತರಿಂದ ಕೊಳ್ಳುತ್ತಿಲ್ಲ. ಇವರು ಮಧ್ಯವರ್ತಿಗಳಿಂದ, ದಳ್ಳಾಳಿಗಳಿಂದ ಕೊಳ್ಳುತ್ತಿದ್ದಾರೆ. ಇದರಿಂದಾಗಿ ಅವರಿಗೆ ಉಪಯೋಗ ಆಗುತ್ತಿದೆಯೇ ಹೊರತಾಗಿ ನಿಜವಾಗಿ ಯಾರು ರೈತರು ಅಲ್ಲಿ ಬೆಳೆಗಳನ್ನು ಬೆಳೆದು ತೆಗೆದುಕೊಂಡುಬರುತ್ತಾರೆ, ಅವರಿಗೆ ಉಪಯೋಗ ಆಗುತ್ತಿಲ್ಲ. ಇದಕ್ಕೆ ಕಾರಣ ಏನು? ಕೃಷಿ ಇಲಾಖೆಯವರು , ಎ.ಪಿ.ಎಂ.ಸಿ. ಇಲಾಖೆಯವರು, ಸಹಕಾರ ಇಲಾಖೆಯವರು, ಆಹಾರ ಇಲಾಖೆಯವರು ಇವರಲ್ಲಿ ಸ್ವಲ್ಪವೂ ಕೂಡ ಕೋಆರ್ಡಿನೇಷನ್ ಇಲ್ಲ. ಇದನ್ನು ಯಾರು ಮಾಡಬೇಕು? ಡಿ.ಸಿ. ಯಾಗಿರತಕ್ಕಂಥವರು ಇದನ್ನು ಮಾಡಬೇಕಾಗುತ್ತದೆ. ಅದಕ್ಕೋಸ್ಕರ ನಾನು ತಮ್ಮಲ್ಲಿ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಇದು ಒಂದು ಪರಸ್ಪರ ಒಡಂಬಡಿಕೆ ಬರುವ ರೀತಿಯಲ್ಲಿ, ಕೋ ಆರ್ಡಿನೇಷನ್ ಬರುವ ರೀತಿಯಲ್ಲಿ ಇದನ್ನು ಕೂಡಲೇ ತಾವು ಮಾಡಬೇಕಾಗುತ್ತದೆ. ಮತ್ತೊಂದು ಏನೆಂದರೆ ಮಾರುಕಟ್ಟೆಗೆ ಭತ್ತ, ರಾಗಿ, ಜೋಳ ಜಾಸ್ತಿ ಬರುತ್ತಿದೆ ಎನ್ನತಕ್ಕಂಥಾದ್ದು ತಮಗೆ ಗೊತ್ತಿದೆ. ದಕ್ಷಿಣ ಕರ್ನಾಟಕದಲ್ಲಿ ಈಗ ರಾಗಿ ಒಕ್ಕಣೆ ಪ್ರಾರಂಭವಾಗಿದೆ. ದಕ್ಷಿಣ ಕರ್ನಾಟಕದಲ್ಲಿ ಭತ್ತ ಬರುವುದು ಜನವರಿ, ಫೆಬ್ರವರಿ ತಿಂಗಳಲ್ಲಿ.

ಆಮೇಲೆ ಭತ್ತ, ರಾಗಿ, ಜೋಳ ಎಲ್ಲ ಬರುತ್ತದೆ. ಇದೆಲ್ಲಾ ಕೊಳ್ಳಲಿಕ್ಕೆ ಏನು ಮಾಡಬೇಕು? ಕೇಂದ್ರಸರ್ಕಾರದವರು ನಿಲ್ಲಿಸಿದ್ದಾರೆ. ನಿಜ. 28 ನೇ ತಾರೀಖಿಗೆ ಅವರು ನಿಲ್ಲಿಸಿದ್ದಾರೆ ಅಂದಾಕ್ಷಣ ತಾವು ನಿಲ್ಲಿಸುವ ಅವಶ್ಯಕತೆ ಇಲ್ಲ. ಸ್ವಲ್ಪ ಹಣವನ್ನಾದರೂ ಕೊಟ್ಟು, ತತ್ಕಾಲಕ್ಕೆ ಅಡ್ವಾನ್ಸ್ ಲೋನ್ ಆದರೂ ತೆಗೆದುಕೊಳ್ಳಿ, ರಿಸರ್ವ್ ಬ್ಯಾಂಕಿನಿಂದ ಏನಾದರೂ ಅಡ್ವಾನ್ಸ್ ತೆಗೆದುಕೊಂಡು ನೀವು ಯಾವುದಾದರೂ ಒಂದು ರೀತಿಯಲ್ಲಿ ರೈತರ ಪಾಲಿಗೆ ಸಹಕಾರಕ್ಕೆ ಹೋಗಬೇಕು ಎನ್ನತಕ್ಕಂಥಾದ್ದು ನನ್ನ ಒತ್ತಾಯ ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ವಿದ್ಯುಚ್ಛಕ್ತಿಯ ಬಗ್ಗೆ ಹೇಳುವುದಾದರೆ, ಡಿಸೆಂಬರ್, ಇಲ್ಲವೇ ಜನವರಿ ಒಳಗಾಗಿ ಯಾರ್ಯಾರು ಅನಧಿಕೃತವಾಗಿ ವಿದ್ಯುತ್ ಸಂಪರ್ಕವನ್ನು ತೆಗೆದುಕೊಂಡಿದ್ದಾರೆ ಅವರು ಹಣವನ್ನು ಕಟ್ಟಿದರೆ ಅವರ ವಿದ್ಯುತ್ ಸಂಪರ್ಕವನ್ನು ಅನಧಿಕೃತಗೊಳಿಸುವುದಾಗಿ ಹೇಳಿದ್ದೀರಿ. ಇದು ಒಳ್ಳೆಯ ವಿಚಾರ. ಆದರೆ ಪವರ್ ರಿಫಾರ್ಮ್ಸ್‌ನ ಬಗ್ಗೆ ನಮ್ಮ ಪಕ್ಷದ ನಿಲುವು ಬೇರೆ ಇದೆ. ಅದರ ಬಗ್ಗೆ ಈ ಸದನದಲ್ಲಿ ಸಮಗ್ರವಾಗಿ ಚರ್ಚೆ ಮಾಡೋಣ, ಇದು ಅತ್ಯಗತ್ಯ . What is at the internatinoal level, what is at the national level, what should be done in Karnataka, otherwise what is going to happen, even privatisation of production distribution what has happened in Orissa? ಇವೆಲ್ಲದರ ಬಗ್ಗೆ ತಿಳಿದುಕೊಂಡು ಚರ್ಚೆ ಮಾಡೋಣ. ಆದರೆ ತಾತ್ಕಾಲಿಕವಾಗಿ ಏನಾಗಿದೆಯೆಂದರೆ, ಇವತ್ತು ಮಾರುಕಟ್ಟೆಯಲ್ಲಿ ರೈತರ ಬೆಳೆಗಳಿಗೆ ಬೆಲೆ ಸಿಗುತ್ತಿಲ್ಲ, ಇಂಥ ಸಂದರ್ಭದಲ್ಲಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವುದು ಸರಿಯಲ್ಲ. ಕ್ವಾಲಿಟಿ ಆಫ್ ಪವರ್ ಬಗ್ಗೆ ಹೇಳುವುದಾದರೆ ಬಹಳ ಟೀಕೆಯನ್ನು ರೈತರು ಮತ್ತು ವಿದ್ಯಾರ್ಥಿಗಳು ಮಾಡುತ್ತಿದ್ದಾರೆ. ಸಂಜೆ 7 ರಿಂದ 10 ಗಂಟೆಯವರೆಗೆ ಗ್ರಾಮೀಣ ಪ್ರದೇಶವಲ್ಲಿ ವಿದ್ಯಾರ್ಥಿಗಳಿಗೆ ವಿದ್ಯುತ್ ಸಿಗುತ್ತಿಲ್ಲ. ಒಂದು ಕಡೆ ಕೆ ಇ ಬಿ ಯವರು ನಮ್ಮ ಹತ್ತಿರ ಸಾಕಷ್ಟು ವಿದ್ಯುಚ್ಛಕ್ತಿ ಇದೆಯೆಂದು ಹೇಳಿಕೆಯನ್ನು ಕೊಡುತ್ತಾರೆ. ಆದರೆ ಕ್ವಾಲಿಟಿ ಆಫ್ ಪವರ್ ಇಲ್ಲ. ಮತ್ತು ಬಹಳ ಸಾರಿ ಕರೆಂಟ್ ಬರುತ್ತೆ, ಹೋಗುತ್ತದೆ ಡಿಸ್ಟ್ರಪ್ಟ್. ಸಾಮಾನ್ಯ ಜನರಿಗೆ ಈ ರೀತಿಯಾದರೆ, ರೈತರ ಪಂಪುಸೆಟ್ಟುಗಳಿಗೆ ಹೀಗಾದರೆ ಎಷ್ಟು ತೊಂದರೆ ಯಾಗುತ್ತದೆ ಎಂಬುದು ತಮಗೆ ಗೊತ್ತಿದೆ. ಆದ್ದರಿಂದ ವಸೂಲಾತಿಗೆ ಇನ್ನೂ ಎರಡು ತಿಂಗಳ ಸಮಯವನ್ನು ಕೊಡಿ. ರೇಷ್ಮೆ ಬೆಳೆಯುವ ರೈತರು ತೊಂದರೆಯಲ್ಲಿದ್ದಾರೆಂದು ಹೇಳುವುದಿಲ್ಲ. ಅವರು ಸಂತೋಷದಲ್ಲಿಲ್ಲದಿದ್ದರೂ ತೊಂದರೆಯಲ್ಲಿಲ್ಲ. ಇವರು ಹಣಕ್ಕೆ ಹಿಂದುಮುಂದು ನೋಡುವುದಿಲ್ಲ. ಆದರೆ, ತೆಂಗು ಬೆಳೆಯುವ ರೈತರು ತೊಂದರೆಯಲ್ಲಿದ್ದಾರೆಂದು ಹೇಳುವುದಿಲ್ಲ, ಅವರು ಸಂತೋಷದಲ್ಲಿಲ್ಲದಿದ್ದರೂ ತೊಂದರೆಯಲ್ಲಿಲ್ಲ. ಇವರು ಹಣಕ್ಕೆ ಹಿಂದುಮುಂದು ನೋಡುವುದಿಲ್ಲ. ಆದರೆ, ತೆಂಗು ಬೆಳೆಯುವ ರೈತರು ಬಹಳ ಕಷ್ಟದಲ್ಲಿದ್ದಾರೆ. ಜೋಳ, ಭತ್ತ, ಕಾಫಿ, ಬೆಳೆಯುವಂಥ ರೈತರ ಕಷ್ಟದಲ್ಲಿದ್ದಾರೆ. ಇವರುಗಳ ಸಹಾಯಕೋಸ್ಕರ ತಾತ್ಕಾಲಿಕವಾಗಿ ಕೊನೆಯ ಪಕ್ಷ ಜೂನ್‌ನವರೆಗೆ ಕ್ವಾಲಿಟಿ ಆಫ್ ಪವರ್ ಸಪ್ಲೈ ಮಾಡಬೇಕು. ತಾವು ಎಷ್ಟು ಹೊತ್ತು ವಿದ್ಯುತ್ ಕೊಡುತ್ತಿರೋ ಅಷ್ಟೋ ಹೊತ್ತು ಕ್ವಾಲಿಟಿ ಆಫ್ ವಿದ್ಯುತ್‌ನ್ನು ಕೊಡಿ, ಕೆ.ಇ.ಬಿ. ಅಧಿಕಾರಿಗಳು ತರುವ

ವರದಿಯನ್ನು ನಾನು ಕ್ಯಾಬಿನೆಟ್ ಸಬ್‌ಕಮಿಟಿಯಲ್ಲಿದ್ದು ನೋಡಿದ್ದೇನೆ. ಅವರು ಯಾವಾಗಲೂ ಏನೂ ತೊಂದರೆಯಿಲ್ಲವೆಂದು ಹೇಳುತ್ತಾರೆ. ಆದರೆ ತಾವು ಶಾಸಕರ ಮೂಲಕ, ಪಕ್ಷದ ಕಾರ್ಯಕರ್ತರ ಮೂಲಕ ಅದರ ಬಗ್ಗೆ ವರದಿಯನ್ನು ತರಿಸಿ. ಇವತ್ತು ಗ್ರಾಮೀಣ ಪ್ರದೇಶದಲ್ಲಿ ಕಗ್ಗತ್ತಲಾಗಿದೆ. ಜನರು ಸರ್ಕಾರ ಹೀಗಾಗಿದೆಯಲ್ಲಾ ಎಂದು ಶಾಪವನ್ನು ಹಾಕುತ್ತಿದ್ದಾರೆ. ಇದರಿಂದ ತಪ್ಪಿಸಿಕೊಳ್ಳಲು ತಾವು ತಕ್ಷಣವೇ ಕ್ವಾಲಿಟಿ ಆಫ್ ಪವರ್‌ನ್ನು ಒದಗಿಸಿ ರೈತರ ನೆರವಿಗೆ ಬರಬೇಕೆಂದು ಒತ್ತಾಯ ಮಾಡುತ್ತೇನೆ. ಇನ್ನು ಸತ್ತಿರುವ ಕುಟುಂಬಗಳ ಬಗ್ಗೆ ಹೇಳುವುದಾದರೆ, ಕೆಲವು ಕುಟುಂಬಗಳಲ್ಲಿ ದುಡಿಯತಕ್ಕವರೇ ಸತ್ತಿದ್ದಾರೆ. ಮತ್ತು ಆ ಕುಟುಂಬದ ಮೇಲೆ ಸಾಲವಿದೆ, ಇದನ್ನು ತೀರಿಸತಕ್ಕವರು ಯಾರು? ತಾವು ಒಂದು ಲಕ್ಷ ಪರಿಹಾರವನ್ನು ಕೊಟ್ಟಿದ್ದೀರಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ, ಆದರೆ ಆ ಸಾಲವನ್ನು ಮನ್ನಾ ಮಾಡಲು ಅಥವಾ ಅವರಿಗೆ ಬೇರೆ ರೀತಿಯಲ್ಲಿ ಸಹಾಯ ಮಾಡಲು ಸರ್ಕಾರ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ. ಎನ್.ಡಿ.ಸಿ. ಸಭೆಗಳು ಆಗಬೇಕು, ಯಾವುದೇ ಅಂತರರಾಷ್ಟ್ರೀಯ ಒಪ್ಪಂದಗಳು ಆಗಬೇಕಾಗಿದ್ದರೆ ರಾಜ್ಯ ಸರ್ಕಾರಗಳೂ ಭಾಗವಹಿಸುವಂತೆ ಮಾಡಬೇಕು. ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳಿದ್ದೀರಿ. ಆದರೆ ದುರಾದೃಷ್ಟವಶಾತ್ ಕಳೆದ ಐವತ್ತು ವರ್ಷಗಳಿಂದ ಯಾವ ಸರ್ಕಾರಗಳೂ ಇದರ ಬಗ್ಗೆ ಗಮನವನ್ನು ಕೊಟ್ಟಿಲ್ಲ. ಸಾರ್ಕ್ ದೇಶಗಳೊಂದಿಗೆ ಆಗಿರುವ ಒಪ್ಪಂದಗಳೆಲ್ಲ ನಮ್ಮ ನೈಬರಿಂಗ್ ಕಂಟ್ರಿಗಳೆಲ್ಲವೂ ತೆಗೆದುಕೊಂಡು ಬಂದು ನಮ್ಮಲ್ಲಿ ಎರಚಲು ಸ್ಪ್ರಿಂಗ್ ಬೋರ್ಡ್‌ಗಳಾಗಿಬಿಟ್ಟಿದೆ. ಇದು ತಮಗೆ ಗೊತ್ತಿಲ್ಲದಿರುವು ವಿಚಾರವೇನಲ್ಲ. ತಾವು ಎನ್.ಡಿ.ಸಿ. ಸಭೆಯಾಗಬೇಕು ಎಂದು ಹೇಳುತ್ತಿರುವುದು ಮತ್ತು ಇದರ ಬಗ್ಗೆ ಚರ್ಚೆಕೂಡ ಬಹಳ ಅವಶ್ಯಕ, ನಾವೂ ಇದನ್ನು ಸ್ವಾಗತ ಮಾಡುತ್ತೇವೆ. ತಾವು ಕೇಂದ್ರ ಸರ್ಕಾರದ ಬಜೆಟ್‌ನ್ನು ಸ್ವಲ್ಪಮಟ್ಟಿಗೆ ಸ್ವಾಗತ ಮಾಡಿದ್ದೀರಿ, ನಾವೂ ಸಹ ಸ್ವಾಗತ ಮಾಡುತ್ತೇವೆ. ಆದರೆ ರೈತರ ಪಾಲಿಗೆ ಇನ್ನೂ ಸಹಕಾರಿಯಾಗಬೇಕಾಗಿತ್ತು ಎಂಬ ಟೀಕೆಯನ್ನು ನಾವೂ, ನೀವೂ ಮಾಡಬೇಕಾಗಿದೆ. ಗೊಬ್ಬರದ ಮೇಲಿರುವ ಸಬ್ಸಿಡಿಯನ್ನು ಮುಂದುವರೆಸಿದರೂ ಅದು ಸಾಕಾಗುವುದಿಲ್ಲ. ಅದನ್ನು ಇನ್ನೂ ಹೆಚ್ಚು ಮಾಡಬೇಕು. ಮಾರುಕಟ್ಟೆ ಮಧ್ಯೆ ಪ್ರವೇಶದ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೇ ಹೆಚ್ಚಿನ ಜವಾಬ್ದಾರಿಯನ್ನು ಕೊಡುವುದಾಗಿ ಕೇಂದ್ರ ಸರ್ಕಾರದವರು ಹೇಳಿದ್ದಾರೆ. ಹಾಗಾದರೆ ಹಣವನ್ನು ಎಲ್ಲಿಂದ ತರಬೇಕು? ತಮ್ಮ ಹತ್ತಿರ ಹಣವಿರಬೇಕಲ್ಲ? ತಮ್ಮ ಹತ್ತಿರ ಹಣ ಇರಲು ಸಾಧ್ಯವಿಲ್ಲ. ಆದ್ದರಿಂದ ಕೇಂದ್ರದ ಬಜೆಟ್‌ಗೆ ಕಾಸ್ಮ್ಯಾಟಿಕ್ ಆಗಿ ಲುಕ್‌ನ್ನು ಕೊಡುವುದರಿಂದ ಏನೂ ಪ್ರಯೋಜನ ಆಗುವುದಿಲ್ಲ. ಇವೆಲ್ಲದರ ಬಗ್ಗೆ ದೀರ್ಘವಾಗಿ ಚರ್ಚೆಯಾಗಬೇಕಾಗುತ್ತದೆ. ಡಬ್ಲ್ಯೂ.ಟಿ. ಓ. ಬಗ್ಗೆ ನಮ್ಮ ಪಕ್ಷದವರು ಮಾಡಿದರು, ನಿಮ್ಮ ಪಕ್ಷದವರು ಮಾಡಿದರು, ನರಸಿಂಹರಾಯರು ಮಾಡಿದರು. ಪ್ರಣಬ್‌ಮುಖರ್ಜಿಯವರು ಮಾಡಿದರು. ಮನಮೋಹನ್‌ಸಿಂಗ್‌ರವರು ಮಾಡಿದರು ಇವೆಲ್ಲವನ್ನೂ ನಾವು ಐಸೋಲೇಟೆಡ್ ಆಗಿ ನೋಡಲು ಆಗುವುದಿಲ್ಲ. ವೈಯಕ್ತಿಕವಾಗಿ ರಾಜಕೀಯ ಲಾಭವನ್ನು ಗಳಿಸಲು ಮಾಡಬಹುದೇ ವಿನಹ ಇದರಿಂದ ಏನೂ ಉಪಯೋಗವಾಗುವುದಿಲ್ಲ. ಇವತ್ತು ರಾಜಕೀಯ ಪಕ್ಷಗಳಿಗೂ ಜವಾಬ್ದಾರಿ ಇದೆ. ರೈತರ ಪಾಲಿಗೆ

ನಾವುಗಳು ಪಕ್ಷಾತೀತವಾದ ದೃಷ್ಟಿಕೋನದಿಂದ ನೋಡಬೇಕಾಗಿದೆ. ರಾಜ್ಯದಲ್ಲಿ ರೈತರಿಗೆ ಎರಡೂ ಸರ್ಕಾರಗಳು ನಮ್ಮ ಪಾಲಿಗೆ ಬರುತ್ತಿಲ್ಲ ಎಂಬ ಭಾವನೆ ಬಂದಿದೆ. ಆಡಳಿತ ಪಕ್ಷದ ಸದಸ್ಯರು ತಮ್ಮ ಸಮ್ಮತಿ ಇಲ್ಲದೆ ಬಾಯಿಯೊಳಕ್ಕೆ ಬರುತ್ತಾರೆ ಎಂದರೆ ಅದಕ್ಕೆ ಕಾರಣ ಅವರ ಕ್ಷೇತ್ರದಲ್ಲಿರುವ ಒತ್ತಡ, ಅಂಥ ಪರಿಸ್ಥಿತಿ ಉದ್ಭವವಾಗಿದೆ. ಇವತ್ತು ಯಾರಿಗೂ ಕಾನೂನು ಸುವ್ಯವಸ್ಥೆಯನ್ನು ಮೈನ್‌ಟೈನ್ ಮಾಡುವುದು ಅಷ್ಟೊಂದು ಸುಲಭದ ಮಾತಲ್ಲ. ಇದು ಬಹಳ ಕಷ್ಟದ ಕೆಲಸವೆಂದು ನಮಗೆ ಗೊತ್ತಿದೆ. ಒಂದು ಸಲ ರೈತರ ಪ್ರವಾಹ ನರಗುಂದದಿಂದ ಪ್ರಾರಂಭವಾಗಿದ್ದು ಸರ್ಕಾರಗಳನ್ನು ಅಲ್ಲಾಡಿಸಿಬಿಟ್ಟಿತು. ಕರ್ನಾಟಕದಲ್ಲಿ ಮೊದಲಬಾರಿಗೆ ಕಾಂಗ್ರೆಸ್ಸೇತರ ಸರ್ಕಾರ ಅಧಿಕಾರಕ್ಕೆ ಬರಲು ಕಾರಣವಾಯಿತು ಎಂಬದೂ ತಮಗೆ ಗೊತ್ತಿರುವ ವಿಚಾರ. ಎಲ್ಲೆಲ್ಲಿ ಕೋ ಆರ್ಡಿನೇಷನ್ ಇಲ್ಲವೆಂಬ ಬಗ್ಗೆ ನಾನು ಸರ್ಕಾರದ ವೈಫಲ್ಯತೆಯನ್ನು ಕುರಿತು ಹೇಳಿದ್ದೇನೆ. ಮುಖ್ಯಮಂತ್ರಿಗಳು ಹೈಟೆಕ್ ಮಂತ್ರಿಗಳು, ಯಾವಾಗಲೂ ಕಂಪ್ಯೂಟರ್ ಬಗ್ಗೆ ಮಾತನಾಡುತ್ತಾರೆ, ಎಂದು ತಮ್ಮ ಮೇಲೆಯೇ ಹೇಳುತ್ತಾರೆ. ಡಿಸಾಸ್ಟರ್ ಮೇನೇಜ್‌ಮೆಂಟ್ ಬಗ್ಗೆ ಒಂದು ವೆಬ್‌ಸೈಟ್ ಮಾಡಿದ್ದೇವೆಂದು ತಾವು ಹೇಳಿದ್ದೀರಿ, ಅದರ ಬಗ್ಗೆ ಯಾರ ತಕರಾರು ಇಲ್ಲ, ಸಂತೋಷ ನಿನ್ನೆ ರೈತ ಮಿತ್ರ ಕಾರ್ಯಕ್ರಮದ ಬಗ್ಗೆ ಸಹ ತೋರಿಸುತ್ತೇವೆಂದು ಹೇಳಿದ್ದೀರಿ. ಇದನ್ನು ತಪ್ಪು ಎಂದು ಯಾರೂ ಹೇಳುವುದಿಲ್ಲ. ಇದರ ಜೊತೆಗೆ ತಾವು ಸತ್ತಿವರ ರೈತ ಕುಟುಂಬಕ್ಕೆ ಭೇಟಿ ಕೊಟ್ಟಿ ಕುಟುಂಬದವರಿಗೆ ಸಾಂತ್ವಾನವನ್ನು ಹೇಳಬೇಕಾಗಿತ್ತು ಎಂಬುದು ನಮ್ಮೆಲ್ಲರ ಅನಿಸಿಕೆ. ಇದನ್ನು ತಾವು ಮಾಡಬೇಕು.ಇದರಿಂದ ತಮ್ಮ ಬಗ್ಗೆ, ಸರ್ಕಾರದ ಬಗ್ಗೆ ರೈತರಿಗೆ ವಿಶ್ವಾಸ ಹೆಚ್ಚಾಗುತ್ತದೆ. ಬಹಳ ಮುಖ್ಯವಾಗಿ ರೈತರ ಸಮಸ್ಯೆಗಳ ಬಗ್ಗೆ ಪಕ್ಷಾತೀತವಾಗಿ ನೋಡುವ ದೃಷ್ಟಿಕೋನ ಆಗಬೇಕು. ಕೇಂದ್ರ ಸರ್ಕಾರದ ಅಡ್ವೋಕೇಟ್‌ಗಳಾಗಿ ನಾವು ಸಹ ಹೇಳುವುದು ಬೇಡ. ನಾವು ಎನ್.ಡಿ.ಎ. ಗೆ ಬೆಂಬಲವನ್ನು ಕೊಟ್ಟಿದ್ದೇವೆ. ರಾಷ್ಟ್ರದಲ್ಲಿ ಅಂಥ ಪರಿಸ್ಥಿತಿ ಇದೆ. ಆದ್ದರಿಂದ ಕೇಂದ್ರ ಸರ್ಕಾರಕ್ಕೆ ಬ್ರೀಫ್ ಮಾಡಲು ನಾವು ತಯಾರಿಲ್ಲ. ತಾವು ಎಷ್ಟು ಆವರ್ತನಿಧಿಯನ್ನು ಮಾಡಿ ಎಷ್ಟು ಕೋಟಿ ಹಣವನ್ನು ಕೊಟ್ಟಿದ್ದೀರಿ ಎಂಬ ಬಗ್ಗೆ ತಮ್ಮ ಬಜೆಟ್ ಪರ್‌ಫಾರ್ಮೆನ್ಸ್ ನಮಗೆ ಬೇಕು. 2000 - 2002 ರ ಬಜೆಟ್‌ನ್ನು ತಾವು ಮಾರ್ಚ್ 26 ರಂದು ಮಂಡನೆ ಮಾಡುವವರಿದ್ದೀರಿ. 2000-2001ರ ತಮ್ಮ ಬಜೆಟ್ ಆಲೋಕೇಷನ್ ಎಷ್ಟು ಇತ್ತು, ಉಪಯೋಗ ಮಾಡಲು ಎಷ್ಟು ಬಿಡುಗಡೆಯಾಯಿತು, ಉಪಯೋಗ ಎಷ್ಟು ಮಾಡಿದ್ದೀರಿ ಇದು ಬಹಳ ಮುಖ್ಯವಾದುದು. ಆವರ್ತನಿಧಿಗೆ ನಿಜವಾಗಿಯೂ ಎಷ್ಟು ಹಣವನ್ನು ಕೊಟ್ಟಿದ್ದೀರಿ, ಎಂಬುದು ಆ ಮಾಹಿತಿಯಲ್ಲಿ ಗೊತ್ತಾಗುತ್ತದೆ. ತಾವು ಆಮಾಹಿತಿಯನ್ನು ಉತ್ತರ ಹೇಳುವಾಗಿ ಕೊಡಬೇಕು. ಅದನ್ನು ಕೊಟ್ಟರೆ ನಮಗೆ ಉಪಯೋಗವಾಗಿದಿರಬಹುದು ಆದರೆ ರೈತರಿಗೆ ಸರ್ಕಾರ ಕೆಲಸ ಮಾಡಿದೆ ಎಂಬ ಭಾವನೆ ಬರುತ್ತದೆ. ಸರ್ಕಾರದ ಆಡಳಿತದ ವೈಫಲ್ಯ, ಕೋ ಆರ್ಡಿನೇಷನ್ ಇಲ್ಲದಿರತಕ್ಕದ್ದು, ಎಫ್.ಸಿ.ಐ.ಗೂ ನಮ್ಮ ರಾಜ್ಯದ ಅಧಿಕಾರಿಗಳಿಗೂ ಸಹಕಾರ ಇಲ್ಲದಿರತಕ್ಕದ್ದು, ಅಲ್ಲಿ ಎಕ್ಯುಜ್‌ಮೆಂಟ್ ಇಲ್ಲದಿರತಕ್ಕದ್ದು, ಸ್ಟೋರೇಜ್ ಕೆಪಾಸಿಟಿ ಇಲ್ಲದಿರತಕ್ಕದ್ದು, ಆಂಧ್ರದ್ದನನ್ನು ಇಲ್ಲಿ ತಂದು ಡಂಪ್ ಮಾಡತಕ್ಕದ್ದು ಇವೆಲ್ಲದರ ಬಗ್ಗೆ ನಾನು ಮಾತನಾಡಬೇಕಾಗಿದೆ. ಅದಕ್ಕಾಗಿ ಹೆಚ್ಚಿನ ಸಮಯ ಬೇಕಾಗುತ್ತದೆ. ಆದ್ದರಿಂದ ತಾವು ನಿಲುವಳಿ ಸೂಚನೆಗೆ ಅವಕಾಶ

ಮಾಡಿಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಹಣಕಾಸು, ವಿದ್ಯುತ್ ಸಚಿವರೂ ಆಗಿರುತ್ತೀರಿ, ನಾನು ತಮಗೆ ಸಂಬಂಧಪಟ್ಟಿರುವ ವಿಚಾರವನ್ನೇ ಕೇಳಿದ್ದೇನೆ. ರೈತರ ಸಾಲದ ಬಡ್ಡಿ ಮನ್ನಾ ಮಾಡಬೇಕು, ಪರ್‌ಫಾರ್ಮೆನ್ಸ್ ಬಜೆಟನನು ತೋರಿಸಬೇಕು. ವಿದ್ಯುತ್ಶಕ್ತಿಯ ಸಪ್ಲೈ ಆನಿದೆ ಅದನ್ನು ಸರಿಪಡಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ ಹಳ್ಳಿಗಳಲ್ಲಿ ನಿಮಗೆ ಶಾಪವನ್ನು ಹಾಕುತ್ತಿದ್ದಾರೆ, ನಮ್ಮ ಕಡೆಯವರಿಗಿಂತ ಆ ಕಡೆಯ ಸದಸ್ಯರೇ ಬಾವಿಗೆ ಏಕೆ ಬಂದರೋ, ಏಕೆ ಹೋದರೋ ಗೊತ್ತಾಗಲಿಲ್ಲ. ನಿನ್ನೆ ಬಾವಿಗೆ ಬಂದರು ಹೋದರು, ಇವತ್ತು ಏಕೆ ಬರಲಿಲ್ಲ, ರೈತರ ಸಮಸ್ಯೆ ಬಗೆಹರಿದು ಬಿಟ್ಟರೇ, ನಮಗೆ ಅರ್ಥವಾಗಿರಲಿಲ್ಲ. ಮಾನ್ಯ ಉಪಾಧ್ಯಕ್ಷರೆ, ತಮ್ಮ ಕ್ಷೇತ್ರದಲ್ಲೂ ಬಹಳ ಕಷ್ಟ ಇದೆ. ಸಕ್ಕರೆ ಕಾರ್ಖಾನೆ ಸಮಸ್ಯೆ, ರೈತರ ಸಮಸ್ಯೆ, ಕಬ್ಬಿನ ಸಮಸ್ಯೆ, ಜೋಳದ, ಮೆಣಸಿನಕಾಯಿ ಸಮಸ್ಯೆ ಇದೆ, ಕಾನೂನು ಸುವ್ಯವಸ್ಥೆ ಕೆಟ್ಟಿದೆ, ಹೀಗೆ ನೂರಾರು ಸಮಸ್ಯೆಗಳು ಇದೆ. ತಮ್ಮ ಜಿಲ್ಲೆಯಲ್ಲೂ ಒಂದೆರಡು ಸಾವುಗಳು ಆಗಿದೆ. ಆದ್ದರಿಂದ, ತಾವು ದಯಮಾಡಿ ಇದನ್ನು ನಿಲುವಳಿ ಸೂಚನೆಯಲ್ಲಿ ಚರ್ಚೆಮಾಡಲು ಅವಕಾಶ ಮಾಡಿಕೊಟ್ಟರೆ ಮಾನ್ಯ ಖರ್ಗೆಯವರ ಮತ್ತು ಹೆಚ್.ಕೆ.ಪಾಟೀಲರ ನುಡಿಮುತ್ತುಗಳ ಬಗ್ಗೆ ಸಹ ಹೇಳಲು ಸಾಧ್ಯವಾಗುತ್ತದೆ. ಏಕೆಂದರೆ ಅವರು ಬಹಳ ಕ್ರಾಂತಿಕಾರಿಯಾದ ವಿಚಾರಗಳನ್ನು ಹೇಳಿದ್ದಾರೆ. ಇವರ ಕೈಗೆ ಅಧಿಕಾರವನ್ನು ಕೊಟ್ಟುಬಿಟ್ಟರೆ ಲೆನಿನ್ ಮಾರ್ಕ್ಸ್‌ರವರು ಮಾಡಿದಂತೆ ಮಾಡಿಬಿಟ್ಟಿದ್ದೇವೆಂದು ಹೇಳಿಕೊಂಡರೋ ಆ ರೀತಿ ಹೇಳಿಕೆಯ ರೈಲನ್ನು ಏರಲು ನಾನು ತಯಾರಾಗಿಲ್ಲ. ನಿಲುವಳಿ ಸೂಚನೆ ಮೇಲೆ ಮಾತನಾಡಲು ಅವಕಾಶ ಮಾಡಿಕೊಟ್ಟರೆ ಅವರುಗಳೇನು ರೈಲನ್ನು ಬಿಟ್ಟಿದ್ದಾರೆ, ಅದರಲ್ಲೇನಿದೆ ಎಂಬುದನ್ನು ನನಗೆ ತೋರಿಸಲು ಸಾಧ್ಯವಾಗುತ್ತದೆ. ತಾವು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳು.

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಸಮಯ ಸಂಜೆ ಆರು ಗಂಟೆಯಾಗಿದೆ. ಇದರ ಬಗ್ಗೆ ಮಾತನಾಡುವವರು ಎರಡೂ ಕಡೆ ಇದ್ದಾರೆ. ಇದನ್ನು ನಿಲುವಳಿ ಸೂಚನೆಯ ಅಡಿಯಲ್ಲಿ ಚರ್ಚೆ ಮಾಡಬೇಕೆಂದರೆ ಇವತ್ತಿನೊಳಗೆ ಮುಗಿಸಬೇಕೆಂದರೆ ರಾತ್ರಿ ಹನ್ನೆರಡು ಗಂಟೆಯಾಗುತ್ತದೆ. ಅದಕ್ಕೆ ನಮ್ಮ ಅಭ್ಯಂತರವೇನಿಲ್ಲ. ಆದ್ದರಿಂದ, ಎಲ್ಲರಿಗೂ ಪರಿವರ್ತನೆ ಮಾತನಾಡಲು ಅವಕಾಶ ಸಿಗಲು ಸಾಧ್ಯವಾಗುವುದಾದರೆ ಇದನ್ನು ನಿಯಮ 69ರ ಅಡಿಯಲ್ಲಿ ಪರಿವರ್ತನೆ ಮಾಡಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಎಲ್ಲರಿಗೂ ಅವಕಾಶವಾಗುತ್ತದೆ. ನಾನು ಸಂಸದೀಯ ಸಚಿವನಾಗಿ ಹೇಳುವುದನ್ನು ಹೇಳುತ್ತೇನೆ, ತಾವು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಿ. ನಾನೇನು ಅಮೇರಿಕಾದಿಂದ ಬಂದವನಲ್ಲ. ನಮಗೂ ರೈತರ ಬಗ್ಗೆ ಕಳಕಳಿ ಇದೆ. ಬಾವಿಯಲ್ಲಿ ನಿಜವಾಗಿ ಬಿದ್ದಿರುವವನು ರೈತ, ಅವನನ್ನು ಅಲ್ಲಿಂದ ಎಬ್ಬಿಸಿ ತರುವ ಪ್ರಯತ್ನವನ್ನು ಮೊದಲು ಮಾಡೋಣ. ಆಂಧ್ರಪ್ರದೇಶದಲ್ಲಿ ಬಹಳ ದೊಡ್ಡ ಕ್ರಾಂತಿಯಾಗಿರುವ ಹಾಗೆ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಿದ್ದಾರೆ. ಅವರ ಗಮನಕ್ಕೆ ಒಂದೆರಡು ಅಂಶವನ್ನು ತರಬೇಕೆಂದು ಈ ವಿಚಾರವನ್ನು ಹೇಳುತ್ತಿದ್ದೇನೆ. ಇದುವರೆಗೆ ಆಂಧ್ರದಲ್ಲಿ ಮೆಕ್ಕೆ ಜೋಳವನ್ನು 39, 342 ಟನ್ ಖರೀದಿ ಮಾಡಿದ್ದಾರೆ. ಆದರೆ, ನಮ್ಮ ರಾಜ್ಯದಲ್ಲಿ 1,84, 331 ಟನ್ ಮೆಕ್ಕೆ ಜೋಳವನ್ನು ಖರೀದಿ

ಮಾಡಿದ್ದಾರೆ. ಇಡೀ ದೇಶದಲ್ಲಿ ಎಷ್ಟು ಪ್ರಕ್ಯೂರ್‌ಮೆಂಟ್ ಆಗಿದೆಯೋ ಆಗಿದೆಯೋ ಅದರಲ್ಲಿ ಶೇಕಡ 75ರಷ್ಟು ಭಾಗ ಕರ್ನಾಟಕದಲ್ಲಾಗಿದೆ. ಮಾಧ್ಯಮಗಳಿಗೆ ಸುದ್ದಿ ಹೋಗುವಾಗ ಕರ್ನಾಟಕದಲ್ಲಿ ಏನೂ ಮಾಡಿಲ್ಲ ಎಂಬುದು ಹೋಗಬಾರದು. ಎಫ್.ಸಿ.ಐ. ಏನು ಮೆಕ್ಕೆ ಜೋಳವನ್ನು ಖರೀದಿ ಮಾಡುತ್ತದೋ ಅದನ್ನು ಕೇಂದ್ರ ಸರ್ಕಾರ ರೀಎಂಬರ್ಸ್ ಮಾಡುತ್ತದೆ. ಇಲ್ಲವೆಂದು ನಾವು ಹೇಳುತ್ತಿಲ್ಲ. ಕೇಂದ್ರ ಸರ್ಕಾರ ಎಲ್ಲಿ ಮಾರುಕಟ್ಟೆ ಪ್ರವೇಶ ಮಾಡದೆ ರಾಜ್ಯಸರ್ಕಾರವೇ ಹೇಳುತ್ತಿಲ್ಲ. ಕೇಂದ್ರ ಸರ್ಕಾರ ಎಲ್ಲಿ ಮಾರುಕಟ್ಟೆ ಪ್ರವೇಶ ಮಾಡದೆ ರಾಜ್ಯಸರ್ಕಾರವೇ ಕೊಂಡುಕೊಳ್ಳಬೇಕಾದ ಪರಿಸ್ಥಿತಿ ಬರುತ್ತದೋ ಅಂಥ ಸಂದರ್ಭದಲ್ಲಿ ಮಾತ್ರ ನಾವು ಆವರ್ತನಿಧಿಯಿಂದ ಮಾಡುತ್ತೇವೆ. ಆವರ್ತನಿಧಿಯನ್ನು ಖರ್ಚು ಮಾಡಿಲ್ಲವೆಂದರೆ ಅದನ್ನು ತೆಗೆದುಕೊಂಡು ಹೊಳೆಗೆ ಹಾಕಲು ಆಗುವುದಿಲ್ಲ. ಆವರ್ತನಿಧಿಯಿಂದ ಈಗಾಗಲೆ 9 ಕೋಟಿ ಹಣವನ್ನು ಕೊಟ್ಟಿದ್ದೇವೆ. ಎಲ್ಲಿ ಎಫ್.ಸಿ.ಐ.ನವರು ಖರೀದಿ ಮಾಡುತ್ತಿದ್ದಾರೆ. ಅದಕ್ಕೆ ರೀ ಎಂಬರ್ಸ್ ಆಗದಿದ್ದ ಕಡೆ ಆವರ್ತ ನಿಧಿಯಿಂದ ಹಣವನ್ನು ಕೊಟ್ಟು ಮುಂದೆ ರೀಎಂಬರ್ಸ್ ಆಗಬಹುದು ಎಂಬುದು ನಮ್ಮ ಭಾವನೆ. ರಾಗಿ,ಸಜ್ಜೆ, ಭತ್ತ, ಬಿಳಿಜೋಳ, ತೊಗರಿ, ಆಲೂಗೆಡ್ಡೆ ಇವುಗಳನ್ನು ರಾಜ್ಯ ಸರ್ಕಾರ ಆವರ್ತನಿಧಿಯಿಂದ ಖರೀದಿ ಮಾಡುತ್ತೇವೆ. ಮೆಕ್ಕೆಜೋಳವನ್ನು ಖರೀದಿ ಮಾಡತಕ್ಕವರು ಕೇಂದ್ರ ಸರ್ಕಾರದವರು. ಆ ದೃಷ್ಟಿಯಿಂದ ಈ ಇಶ್ಯೂವನ್ನು ಮಿಕ್ಸ್‌ಅಪ್ ಮಾಡುವುದು ಬೇಡ. ಆದ್ದರಿಂದ ಕರ್ನಾಟಕದಲ್ಲಿ ಏನೋ ತೊಂದರೆಯಾಗಿದೆ ಎಂಬ ವದಂತಿ ಹೋಗಬಾರದು ಎಂಬ ದೃಷ್ಟಿಯಿಂದ ಇದನ್ನು ಹೇಳಿದ್ದೇನೆ. ಗ್ರೇಡರ್ಸ್ ತರಬೇತಿಯನ್ನು ರಾಜ್ಯ ಸರ್ಕಾರದವರು ಕೊಡುತ್ತೇವೆಂದರೆ ಎಫ್.ಸಿ.ಐ. ನವರು ಒಪ್ಪುವುದಿಲ್ಲ, ನಮ್ಮ 51 ಜನರನ್ನು ಅವರಿಗೆ ಕೊಟ್ಟು ತರಬೇತಿ ನೀವೇ ಕೊಡಿ ಎಂದು ಹೇಳಿದ್ದೇವೆ. ಅವರೂ ತರಬೇತಿ ಕೊಡುನುದಿಲ್ಲ, ನಾವು ಕೊಟ್ಟಿದ್ದನ್ನು ಅವರೂ ಒಪ್ಪುವುದಿಲ್ಲ, ಕೊನೆಗೆ ನೀವೇ ತರಬೇತಿ ಕೊಡಿ ಎಂದು ಹೇಳಿದ್ದೇವೆ. ಎಫ್.ಸಿ.ಐ. ನಲ್ಲಿ ಗ್ರೇಡರ್ಸ್ ಇಲ್ಲದಿದ್ದರಿಂದ ರಾಜ್ಯದ ಕೃಷಿ ಇಲಾಖೆಯ 51 ಜನ ಅಧಿಕಾರಿಗಳನ್ನು ಎಫ್.ಸಿ.ಐ.ಗೆ ತರಬೇತಿಗಾಗಿ ಕೊಟ್ಟಿದ್ದೇವೆ. ಒಂದು ವೇಳೆ ಎಫ್.ಸಿ.ಐನವರು ಖರೀದಿ ಮಾಡದಿದ್ದರೂ ಖರೀದಿ ಕೇಂದ್ರಗಳನ್ನು ಮುಚ್ಚಬೇಡಿ, ಆವರ್ತನಿಧಿಯಿಂದ ಹಣ ಬಿಡುಗಡೆ ಮಾಡುತ್ತೇವೆಂದು ಇವತ್ತು ಬೆಳಿಗ್ಗೆ ಸಚಿವ ಸಂಪುಟದ ಉಪ ಸಮಿತಿಯಲ್ಲಿ ತೀರ್ಮಾನ ಮಾಡಲಾಗಿದೆ. ಒಂದು ವೇಳೆ ಆ ಖರೀದಿ ಕೇಂದ್ರಗಳು ಮುಚ್ಚಿದರೆ ಬಹುಶಃ ಏನಾಗುತ್ತಿತ್ತೋ ಎಂಬುದು ಸರ್ಕಾರವನ್ನು ನಡೆಸುವ ನಮಗೇ ಗೊತ್ತಿದೆ. ದೊಡ್ಡ ರೈತ ಸಮೂಹವೇ ಮೇಲೇಳುತ್ತಿತ್ತು. ಅದನ್ನು ಉಪಶಮನ ಮಾಡಲು ಏನೇನು ಕೆಲಸಕಾರ್ಯಗಳನ್ನು ಮಾಡಬಹುದೋ ಅದೆಲ್ಲವನ್ನೂ ಸರ್ಕಾರ ಮಾಡಿರುವುದರಿಂದ ರೈತರುಗಳು ಸುಮ್ಮನಿದ್ದಾರೆ. ಆದ್ದರಿಂದ ಅಂಥ ಮಾಹಿತಿ ಹೊರಗಡೆ ಹೋಗುವುದು ಬೇಡ. ಖರೀದಿ ಕೇಂದ್ರಗಳನ್ನು ಮುಂದುವರೆಸಲು ರಾಜ್ಯ ಸರ್ಕಾರ ತೀರ್ಮಾನ ಮಾಡಿದೆ. ಕೇಂದ್ರ ಸರ್ಕಾರವನ್ನು ಸಂಪರ್ಕ ಮಾಡಿದ್ದೇವೆ. ಎಫ್.ಸಿ.ಐ.ನವರ ಜೊತೆ ಸಹ ಸಂಪರ್ಕ ಮಾಡಿದ್ದೇವೆ. ಮಾನ್ಯ ಆಹಾರ ಸಚಿವರು ದೆಹಲಿಯಲ್ಲಿ ಸಂಬಂಧಪಟ್ಟ ಸಚಿವರ ಜೊತೆ ಚರ್ಚೆ ಮಾಡುತ್ತಿದ್ದಾರೆ. ಇಷ್ಟು ಮಾಹಿತಿಯನ್ನಷ್ಟೆ ಸೂಕ್ಷ್ಮವಾಗಿ ಅವರಿಗೆ ಕೊಡುತ್ತಿದ್ದೇನೆ. ನಿಲುವಳಿ ಸೂಚನೆಯ

ಅಡಿಯಲ್ಲೇ ಚರ್ಚೆಯಗಬೇಕು ಅಥವಾ ಬಿಡಬೇಕೇ ಎಂಬ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ತಮಗೆ ಬಿಟ್ಟ ವಿಚಾರ. ನಿಯಮದಲ್ಲಿ ದೋಷವಿದೆ ಮುಂತಾದ ವಿಚಾರಗಳು ತಾಂತ್ರಿಕ ವಿಚಾರಗಳು, ಅದರ ಬಗ್ಗೆ ನಾನು ಮಾತನಾಡುವುದಿಲ್ಲ. ಆದ್ದರಿಂದ ಇದನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿದರೆ ಆಗ ಎಲ್ಲರಿಗೂ ಚರ್ಚೆ ಮಾಡಲು ಸಾಕಷ್ಟು ಕಾಲಾವಕಾಶ ಸಿಗುತ್ತದೆಂದು ವಿನಂತಿಸುತ್ತೇನೆ.

ಶ್ರೀ ಬಿ. ಸೋಮಶೇಖರ್:- ನಿಯಮ 69ಕ್ಕೆ ಪರಿವರ್ತನೆ ಮಾಡುವುದರಿಂದ ಎಲ್ಲರಿಗೂ ಚರ್ಚೆ ಮಾಡಲು ಅವಕಾಶ ಸಿಗುತ್ತದೆ. ಇದನ್ನು ನಾವು ಸ್ವಾಗತಿಸುತ್ತೇವೆ. ತಾವು ಇದನ್ನು ನಿಯಮ 69ಕ್ಕೆ ಪರಿವರ್ತನೆ ಮಾಡಿಕೊಳ್ಳಿ.

ಉಪಾಧ್ಯಕ್ಷರು:- ಈಗ ನಿಲುವಳಿ ಸೂಚನೆಯನ್ನು ಪರಿವರ್ತಿಸಿ ಈ ವಿಚಾರದಲ್ಲಿ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಲು ತೀರ್ಮಾನಿಸಲಾಗಿರುತ್ತದೆ. ಚರ್ಚೆಯನ್ನು ನಾಳೆ ಪ್ರಾರಂಭ ಮಾಡೋಣ. ಇಲ್ಲಿಗೆ ಸಭೆಯು ಮುಕ್ತಾಯಗೊಂಡು ಪುನಃ ನಾಳೆ 10 ಗಂಟೆಗೆ ಸಮಾವೇಶಗೊಳ್ಳುವುದು.

ಸದನವು ಸಂಜೆ 6- 10ಕ್ಕೆ ಮುಕ್ತಾಯಗೊಂಡು ಪುನಃ ದಿನಾಂಕ : 2- 3- 2001 ರ ಬೆಳಿಗ್ಗೆ 10 ಗಂಟೆ ಸಮಾವೇಶಗೊಳ್ಳಲು ತೀರ್ಮಾನಿಸಿತು.

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)